concerned. So, members may rest assured that there is no default on the part of the department to take effective meosures to control this disease.

Taking up some Notices from Members

SRI T.R. SHAMANNA.—Sir, before going to the regular business I wish to submit that I have given notice under rule 50 regarding the harassment caused to the citizen of Bangalore.

ಅಧ್ಯಕ್ಷರು :—ಮಾನ್ಯ ಸದಸ್ಯರು ರೂಲ್ ೫೦ನ್ನು ಸ್ಪಷ್ಟವಾಗಿ ನೋಡಬೇಕು. ಇದರಲ್ಲಿ ನಿರ್ದಿಷ್ಟವಾದ ವಿಷಯ ಇದ್ದರೆ ಮಾತ್ರ ತಮ್ಮ ವಿಷಯವನ್ನು ಇದರ ಕೆಳಗೆ ತೆಗೆದುಕೊಳ್ಳಲಾಗುವುದು. ಆದ್ದರಿಂದ ನಾನು ತಮಗೆ ಏನು ಸಲಹೆ ಮಾಡುತ್ತೇನೆಂದರೆ ಇದನ್ನು ಕಾಲ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿ ಕಳುಹಿಸಿಕೊಡುತ್ತೇನೆ.

SRI T. R. SHAMANNA.—I have given specific notice regarding harassment caused to the citizens of Bangalore.

ಅಧ್ಯಕ್ಷರು :—ಈ ವಿಷಯ ಮಹತ್ವವಾದುದು, ಇದಕ್ಕೆ ಹೇಗೆ ಚರ್ಚೆ ಮಾಡಲು ಅವಕಾಶಕೊಡಬೇಕು ಎಂದು ನನಗೆ ತಿಳಿದಿದೆ. ಆದ್ದರಿಂದ ಇದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿಸಿ, ನಾಡಿದ್ದು ಇದನ್ನು ಹಾಕಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಹುಲಕೋಟೆ ಗ್ರಾಮಪಂಚಾಯಿತಿಯ ಎಲೆಕ್ಷನ್ ಪೋಸ್ಟ್‌ಪೋನ್‌ಮೆಂಟ್ ಬಗ್ಗೆ ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿದ್ದೆ. ಕಳುಹಿಸಿ ೫-೬ ದಿವಸವಾದರೂ ನನಗೆ ಏನೊಂದೂ ಉತ್ತರ ಬರಲಿಲ್ಲ.

ಅಧ್ಯಕ್ಷರು :—ಮಾನ್ಯ ಸದಸ್ಯರುಗಳಿಗೆ ನಾನಾಗಲೇ ಹೇಳಿದ್ದೇನೆ, ನಮಗೆ ಕಚೇರಿಯ ವಿಷಯದಲ್ಲಿಯಾಗಲಿ, ಅಥವಾ ವೈಯುಕ್ತಿಕವಾಗಿ ಏನಾದರೂ ತೊಂದರೆಗಳು ಇದ್ದರೆ ಬಂದು ನನ್ನನ್ನು ನೋಡಬೇಕು. ನಾನು ತಮ್ಮ ಸಮಸ್ಯೆಗಳನ್ನು ವಿಚಾರಿಸಿ, ತಕ್ಷಣ ಉತ್ತರ ಕೊಡುವಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ತಾವು ಸೋಮವಾರ ನನ್ನ ವಿಷಯವನ್ನು ಅಜಂಡಾದಲ್ಲಿ ಹಾಕಿಸುತ್ತೇನೆಂದು ಹೇಳಿದ್ದಿರಿ.

ಅಧ್ಯಕ್ಷರು.—ನಾವು ಈ ಮನೆಯ ಸಮಯವನ್ನು ಗಮನಿಸಬೇಕು. ನನ್ನ ಕಡೆ ತಾವು ಬನ್ನಿ, ನಾನು ನಿಮಗೆ ತಿಳಿಯ ಹೇಳುತ್ತೇನೆ.

Budget Estimates for 1978-79

Dmands for Grants

Demand No. 55,56 and 57 (Debate Continued)

1-30 P.M

† ಶ್ರೀ ವೈ, ರಾಮಕೃಷ್ಣ (ಆನೇಕಲ್).- ಸನ್ಮಾನ್ಯ ಅಧ್ಯಕ್ಷರೇ- ನಾನು ಶನಿವಾರ ನನ್ನ ಭಾಷಣದಲ್ಲಿ ಭಗವಂತಮೆಹತಾ ಸಮಿತಿಯ ಶಿಫಾರಸ್ಸುಗಳು, ಪಂಚಾಯಿತಿಗಳು, ತಾಲ್ಲೂಕು ಬೋರ್ಡುಗಳು, ಡಿಸ್ಟ್ರಿಕ್ಟ್ ಕೌನ್ಸಿಲುಗಳು, ಎಷ್ಟು ಸಮರ್ಪಕವಾಗಿ ಜನತೆಗೆ ಫಲ ನೀಡಬೇಕಾಗಿತ್ತೋ ಅಷ್ಟು ಫಲ ನೀಡಲಿಲ್ಲ ಎನ್ನುವ ಕೂಗು ಬಂದಿದ್ದರಿಂದ ಪುನಃ ಇತ್ತೀಚೆಗೆ ಜನತಾ ಸರ್ಕಾರದವರು ಅಶೋಕ ಮೆಹತಾರವರನೇತೃತ್ವದಲ್ಲಿ ಮತ್ತೊಂದು ಸಮಿತಿಯನ್ನು ನೇಮಿಸಿದ್ದಾರೆ. ಈ ಸಮಿತಿ ಎಷ್ಟರಮಟ್ಟಿಗೆ ಸ್ಥಳೀಯ ಸಂಸ್ಥೆಗಳಿಗೆ ಸಂಪನ್ಮೂಲಗಳನ್ನು ಒದಗಿಸತಕ್ಕ ಜವಾಬ್ದಾರಿಯನ್ನು ಹೊತ್ತಿದೆ. ಅಲ್ಲದೆ ಅವುಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟು ಅವುಗಳು ಪರಿಣಾಮಕಾರಿಯಾಗಿ ಕೆಲಸ ಮಾಡತಕ್ಕ ಒಂದು

ಜವಾಬ್ದಾರಿಯನ್ನು ಹೊತ್ತಿದೆ. ನಮ್ಮ ರಾಜ್ಯಕ್ಕೆ ಈ ಸಮಿತಿ ಎರಡು ಸಾರಿ ಭೇಟಿ ಕೊಟ್ಟಿದೆ ಎಂದು ಕೇಳಿದ್ದೇವೆ. ಇಷ್ಟಾದರೂ ಕೂಡ ಗ್ರಾಮಗಳ ಪರಿಸ್ಥಿತಿ ಮತ್ತು ಅಲ್ಲಿನ ಜನರ ಸ್ಥಿತಿ ಬಹಳ ಚಿಂತಾಜನಕವಾಗಿಯೇ ಇದೆ. ನಮ್ಮ ರಾಜ್ಯದಲ್ಲಿ ಸ್ವರಾಜ್ಯ ಬಂದು ಮೂವತ್ತು ವರ್ಷಗಳಾದರೂ ಕೂಡ ನಿನ್ನೆ ನನ್ನ ಸ್ನೇಹಿತರಾದ ಪಟೇಲರವರು ಹೇಳಿದರು, ಹತ್ತು ಸಾವಿರ ಗ್ರಾಮಗಳಿಗೆ ಇನ್ನೂ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇದು ಮೂಲಭೂತ ಅವಶ್ಯಕತೆಗಳು. ಇದಕ್ಕಿಂತಲೂ, ಹೆಚ್ಚಿನ ಸಂಖ್ಯೆಯಲ್ಲಿ ಪಾಠ ಶಾಲೆಗಳು ಇಲ್ಲ. ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದೇ ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ, ಇದು ಉತ್ಪ್ರೇಕ್ಷೆ ಮಾತಲ್ಲ, ನಿನ್ನೆ ಬೆಂಗಳೂರ. ಡಿಸ್ಟ್ರಿಕ್ಟ ಕಾನ್ಸಿಲ್‌ನಲ್ಲಿ ಈ ವಿಷಯವನ್ನು ಇಟ್ಟುಕೊಂಡು ವ್ಯಾಖ್ಯಾನ ಮಾಡಿದ್ದೇವೆ. ಅನೇಕಲ್ ತಾಲ್ಲೂಕಿನಲ್ಲಿ ೧೦೦ ಜನ ಉಪಾಧ್ಯಾಯರ ಕೊರತೆ ಇದೆ. ಒಂದು ತಾಲ್ಲೂಕಿನಲ್ಲಿ ೧೦೦ ಜನ ಉಪಾಧ್ಯಾಯರ ಕೊರತೆ ಇದೆ ಎಂದರೆ ಇನ್ನೂ ೧೭೦ ತಾಲ್ಲೂಕಿನಲ್ಲಿ ಎಷ್ಟು ಜನ ಉಪಾಧ್ಯಾಯರ ಕೊರತೆ ಇದೆ ಎನ್ನುವುದನ್ನು ತಾವೇ ಆಲೋಚನೆ ಮಾಡಿ. ಇಷ್ಟು ಜನ ಉಪಾಧ್ಯಾಯರನ್ನು ತಕ್ಷಣ ನೇಮಕ ಮಾಡಬೇಕಾದು ಸರ್ಕಾರದ ಅದ್ಯಕರ್ತವ್ಯ ವಲ್ಲವೆ ? ಸ್ಥಳೀಯ ಸಂಸ್ಥೆಗ ತ್ವರಿತವಾಗಿ ಈ ಕೆಲಸ ಮಾಡಿಸಬೇಕು.

ಆಧ್ಯಕ್ಷರು.—ಅದು ವಿದ್ಯಾ ಇಲಾಖೆಗೆ ಸೇರಿದ್ದು.

ಶ್ರೀ ವೈ. ರಾಮಕೃಷ್ಣ.—ಇವರಿಗೂ ಅಧಿಕಾರ ಇದೆ ಸ್ವಾಮಿ, ಎಸ್.ಇ.ಓ.ಗಳು ಇವರ ಕೈಗೆಳಗ ಬರುತ್ತಾರೆ. ಅಲ್ಲದೆ ಇದರಲ್ಲಿ ಸರ್ಕಾರದ ಸಮನ್ವಯದ ವ್ಯವಸ್ಥೆ ಇದೆ. ಶಾಲಾ ಕಟ್ಟಡಗಳನ್ನು ಒದಗಿಸತಕ್ಕ ಜವಾಬ್ದಾರಿ ಇವರ ಮೇಲಿದೆ. ಅಲ್ಲದೆ- ೪೫ ಪಾಠಶಾಲೆಗಳಿಗೆ ಒಬ್ಬರೇ ಉಪಾಧ್ಯಾಯರು ಇದ್ದಾರೆ, ಇವರ ಪೈಕಿ ೫೦ ಪರ್ಸೆಂಟ್ ಉಪಾಧ್ಯಾಯರು ರಜ ಹಾಕಿರುತ್ತಾರೆ. ಇಂಥ ಒಂದು ಸಮಸ್ಯೆ ಇರುವಾಗ ಮಕ್ಕಳಿಗೆ ಯಾವರೀತಿ ಪಾಠಗಳನ್ನು ಹೇಳಿಕೊಡುವುದಕ್ಕೆ ಆಗುತ್ತದೆ. ಒಂದೊಂದು ಕಡೆ ಶಾಲೆಗಳಿಗೆ ಬೀಗಗಳೇ ಇಲ್ಲ, ಹತ್ತು ದಿವಸ ಹಿಂದೆ ನಾನು ಟೂರು ಹೋದಾಗ ಒಂದು ಶಾಲೆಯಲ್ಲಿ ಕತ್ತೆಗಳು ಮಲಗಿದ್ದು ನೋಡಿದ್ದೇನೆ. ಅಲ್ಲಿನ ಗ್ರಾಮಸ್ಥರನ್ನು ಕೇಳಿದ್ದಕ್ಕೆ ಯಾವಾಗಲೂ ಹೀಗೆ ಸ್ವಾಮಿ ಬೀಗಗಳನ್ನೇ ಹಾಕುವುದಿಲ್ಲ ಎಂದು ಹೇಳಿದ್ದಾರೆ. ಇದರ ಕಡೆ ತಾವು ಗಮನಹರಿಸಬೇಕು. ಸ್ವಾಮಿ ಶಾಲಾಕಟ್ಟಡಗಳನ್ನು ಕಟ್ಟುವುದು ಬಹಳ ಸುಲಭ, ಹೆಚ್ಚಿನ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಮಂತ್ರಿಗಳು, ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಉಪ—ವಿಭಾಗಾಧಿಕಾರಿಗಳು ಯಾವ ಒಂದು ಗ್ರಾಮದಲ್ಲಿ ಪಾಠ ಶಾಲೆಗಳಿಲ್ಲವೋ ಆ ಗ್ರಾಮಗಳಿಗೆ ಹೋಗಿ ಅಲ್ಲಿನ ಗ್ರಾಮಸ್ಥರನ್ನು ಕಂಡು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಪಾಠ ಶಾಲೆಯನ್ನು ಒದಗಿಸಬೇಕಾಗಿದೆ. ಗ್ರಾಮಸ್ಥರು ಎಲ್ಲರೂ ಸೇರಿ ಇಷ್ಟು ವಂತಿಗೆಯನ್ನು ಕೊಡಬೇಕು ಎಂದು ಹೇಳಿದರೆ ಅವರು ಕೊಡುತ್ತಾರೆ. ಈ ರೀತಿ ಒತ್ತಾಯ ತರತಕ್ಕಂಥ ಜವಾಬ್ದಾರಿ ಹಿಂದೆ ಎನ್.ಇ.ಎಸ್. ಜಾರಿಗೆ ಬಂದಾಗ ಇತ್ತು. ಇವತ್ತು ಇದು ಕಡಿಮೆಯಾಗುತ್ತಾ ಇದೆ.

ಅಧ್ಯಕ್ಷರೇ, ಇವತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಬಡ ರೈತರ ಮತ್ತು ಬಡ ಕೂಲಿಕಾರರ ಆರ್ಥಿಕ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಬಹುಶಃ ಈ ಒಂದು ಆರ್ಥಿಕ ಪರಿಸ್ಥಿತಿಯಲ್ಲಿ ಮುಂದುವರಿದಿದ್ದರೆ. ಗ್ರಾಮಾಂತರ ಪ್ರದೇಶಗಳು ತಾನಾಗಿಯೇ ಮುಂದುವರಿಯುತ್ತಿದ್ದವು. ಆ ಮೂಲಕ ಭಾರತ ದೇಶ ಮುಂದುವರಿಯುತ್ತಿತ್ತು. ಆದರೆ, ಸರ್ಕಾರದವರು ಆರ್ಥಿಕ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರದವರು ಯಾವ ಕಾರ್ಯಕ್ರಮ ಕೈಗೊಂಡಿದ್ದಾರೆ ಎನ್ನುವ ಬಗ್ಗೆ ಯಾವ ಬಡ್ಜೆಟ್ಟಿನಲ್ಲಿಯೂ ಅಲ್ಲ. ಡಿಮ್ಯಾಂಡ್‌ನಲ್ಲಿಯೂ ಇಲ್ಲ. ಈ ಮಾತನ್ನು ಬಹಳ ಧೈರ್ಯವಾಗಿ ಹೇಳುತ್ತೇನೆ. ಕಾರಣ ಪ್ರತಿಯೊಬ್ಬರೂ ಅವರವರ ಖಾತೆಗೆ ಸಂಬಂಧಪಟ್ಟಂತೆ ಯೋಚನೆ ಮಾಡುತ್ತಿದ್ದಾರೆ. ಬಡ ರೈತರ ಮತ್ತು ಬಡ ಕೂಲಿಕಾರರ ಆರ್ಥಿಕ ಮಟ್ಟವನ್ನು ಮೇಲೆ ತರುವುದಕ್ಕೆ ಗ್ರಾಮೀಣ ಅಭಿವೃದ್ಧಿ ಇಲಾಖೆಯೇ ಮುಖ್ಯವೆಂದು ನಾನಾದರೂ ಭಾವಿಸುತ್ತೇನೆ. ಸ್ವಾಮಿ, ಈ ಒಂದು ವರ್ಗದ ಜನತೆಯ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ, ಈ ಜನತೆಗೆ ಹೆಚ್ಚಿನ ಪ್ರಮಾಣದಲ್ಲಿ ಕೆಲಸವನ್ನು ಒದಗಿಸಬೇಕು, ಕೈ ತುಂಬಾ ಹಣ ಒದಗಿಸುವಂತ ವ್ಯವಸ್ಥೆ ಜಾರಿಗೆ ಬರಬೇಕು. ಈಗ ಸರ್ಕಾರದವರು ೫–೬ ರೂಪಾಯಿಗಳನ್ನು ಮಿನಿಮಮ್ ವೇಜಸ್ ಎಂದು ನಿಗದಿ ಮಾಡಿದ್ದಾರೆ. ಆದರೆ ಕೆಲಸಕ್ಕೆ ಯಾರು ತೆಗೆದುಕೊಳ್ಳುವವರೇ ಇಲ್ಲ, ಕರೆಯುವವರು ಇಲ್ಲ. ಜೀತ ಪದ್ಧತಿ ತಪ್ಪಿಸಿದ್ದೀರಿ, ತಪ್ಪಿಸಿದ್ದು ಒಳ್ಳೆಯದು. ಅವರಿಗೆ ಬದಲಿ ವ್ಯವಸ್ಥೆ ಏನು ಮಾಡಿದ್ದೀರಿ. ಆದೇರೀತಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಹಣದ ವ್ಯವಸ್ಥೆ ಏನು ಮಾಡಿದ್ದೀರಿ. ಉದಾಹರಣೆಗೆ ಒಂದು ಮಾತು ಹೇಳುತ್ತೇನೆ, ಉತ್ತರ ಇಂಡಿಯಾದಲ್ಲಿ ಜನತಾ ಸರ್ಕಾರಗಳು ಏನು ಮಾಡಿವೆ, ನಿಮ್ಮ ಕಾಂಗ್ರೆಸ್ ಸರ್ಕಾರಗಳೇ ಇರತಕ್ಕ ಆಂಧ್ರ

ಪ್ರದೇಶದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಈ ಸಮಸ್ಯೆಯನ್ನು ಯಾವರೀತಿ ಬಗೆಹರಿಸಿವೆ ಎಂದರೆ, ಪ್ರತಿಯೊಬ್ಬ ಆರೋಗ್ಯವಂತನಿಗೂ ಕೆಲಸ ಒದಗಿಸವಂಥ ಒಂದು ಯೋಜನೆಯನ್ನು ಜಾರಿಗೆ ತಂದಿವೆ. ಪ್ರತಿಯೊಬ್ಬರಿಗೂ ಉದ್ಯೋಗ ಕೊಡುತ್ತೇವೆ ಎನ್ನುವ ಒಂದು ಮಸೂದೆಯನ್ನು ೧೯೭೭ರಲ್ಲಿ ಅಲ್ಲಿನ ಸರ್ಕಾರಗಳು ಪಾಸು ಮಾಡಿದವು, ನೀವು ಏತಕ್ಕೆ ಇಲ್ಲಿ ಮಾಡಬಾರದು ? ಪ್ರತಿಯೊಬ್ಬ ವ್ಯಕ್ತಿ ೮ ಗಂಟೆ ಕೆಲಸ ಮಾಡಿದರೆ ಅವನಿಗೆ ೫ ರೂಪಾಯಿ ಕೂಲಿ ಕೊಡತಕ್ಕ ಯೋಜನೆಯನ್ನು ಅವರು ಜಾರಿಗೆ ತಂದಿದ್ದಾರೆ. ಕಾಲುವೆ ತೆಗೆಯುವುದು ರಸ್ತೆ ಕೆಲಸ ಕೆರೆ ಕಾಮಗಾರಿ ಕೆಲಸ ಶಾಲಾ ಕಟ್ಟಡಗಳನ್ನು ಕಟ್ಟಿಸುವುದು ವ್ಯವಸಾಯ ಅಭಿವೃದ್ಧಿ ಕೆಲಸಗಳಲ್ಲಿ ಉಪಯೋಗಿಸಿಕೊಳ್ಳುವುದು, ಇಂಥ ಒಂದು ಯೋಜನೆಯನ್ನು ಅಲ್ಲಿಯ ಸರ್ಕಾರಗಳು ಜಾರಿಗೆ ತಂದಿವೆ, ನೀವು ಏತಕ್ಕೆ ತರಲಿಲ್ಲ ? ೧೯೭೭ರಿಂದ ಪ್ರಯೋಗಾರ್ಥವಾಗಿ ಇಂಥ ಒಂದು ಯೋಜನೆಗಳನ್ನು ತಂದು ಅಲ್ಲಿ ಯಶಸ್ವಿಯಾಗಿದ್ದಾರೆ. ಇವತ್ತು ನಿಮ್ಮ ಸರ್ಕಾರಗಳೇ ಮಾಡಿರತಕ್ಕ ಕೆಲಸವನ್ನು ನಾವು ಹೊಗಳುತ್ತಿದ್ದೇವೆ. ಇವತ್ತು ಇಲ್ಲಿ ಬಡ ಜನರ ಕಲ್ಯಾಣಕ್ಕಾಗಿ ಏನು ಮಾಡಿದ್ದೀರಿ ? ಇಂಥ ಒಂದು ಯೋಜನೆಯನ್ನು ಏತಕ್ಕೆ ಮಾಡುತ್ತಿಲ್ಲ.

ಅಧ್ಯಕ್ಷರು.—ನನ್ನ ಕಡೆ ನೋಡಿಕೊಂಡು ಮಾತನಾಡಿ.

ಶ್ರೀ ವೈ. ರಾಮಕೃಷ್ಣ.—ತಮ್ಮ ಮೂಲಕ ನೋಡಿಕೊಂಡೇ ಮಾತನಾಡುತ್ತಿದ್ದೇನೆ. ಅಧ್ಯಕ್ಷರೇ ಮತ್ತೊಂದು ವಿಚಾರ; ಈ ವಿಚಾರವನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಒದ್ದರೆ ಬಿದ್ದು ಹೋಗತಕ್ಕ ಮನೆಗಳನ್ನು ಕಟ್ಟಿಸಿಕೊಟ್ಟರೆ ಬಡವರ ಉದ್ಧಾರ ವಾಯಿತೆ ? ನನ್ನ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ಹೇಳುತ್ತೇನೆ ಅನೇಕಲ್ ತಾಲ್ಲೂಕಿನಲ್ಲಿ ಮೂವತ್ತು ಸಾವಿರ ಜನ ಹರಿಜನರು ಇದ್ದಾರೆ. ಕರ್ನಾಟಕ ರಾಜ್ಯದಲ್ಲಿಯೇ ಜಾಸ್ತಿ ಹರಿಜನರಿರತಕ್ಕ ತಾಲ್ಲೂಕು ಇದು. ಅಲ್ಲಿ ೨೫೦ ಜನಕ್ಕೆ ಮನೆ ಕಟ್ಟಿಸಿ ಕೊಡುವಂತ ಯೋಜನೆ ಹಾಕಿಕೊಂಡಿದ್ದಾರೆ. ಇವರಿಂದ ಹರಿಜನರ ಉದ್ಧಾರವಾಗುತ್ತದೆಯೇ ? ಬಡವರ ಉದ್ಧಾರವಾಗುತ್ತದೆಯೇ? ಅಧ್ಯಕ್ಷರೇ, ಇವತ್ತು ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. ಉತ್ತರ ಇಂಡಿಯಾದಲ್ಲಿ ಜನತಾ ಸರ್ಕಾರಗಳು ವಿಶೇಷವಾದ ಒಂದು ಯೋಜನೆ ಹಾಕಿಕೊಂಡಿವೆ, ಅದು ಯಾವುದು ಎಂದರೆ ಅಂತ್ಯೋದಯ ಯೋಜನೆಯನ್ನು ಹಾಕಿಕೊಂಡಿವೆ. ಗ್ರಾಮಗಳಲ್ಲಿ ಯಾರು ಆರ್ಥಿಕವಾಗಿ ಸಾಮಾಜಿಕವಾಗಿ ಪ್ರತಿಯೊಂದು ರಂಗದಲ್ಲಿಯೂ ಹಿಂದುಳಿದಿದ್ದಾರೆ; ಅಂಥವರನ್ನು ಮೇಲೆ ತರತಕ್ಕ ಕಾರ್ಯವೇ ಈ ಅಂತ್ಯೋದಯ ಯೋಜನೆಯ ಗುರಿ.

ಇವೊತ್ತು ಅಂತ್ಯದಲ್ಲಿರುವವರನ್ನು ಮೇಲೆ ಎತ್ತುವಂತಹ ಕಾರ್ಯಕ್ಕೆ ಅಂತ್ಯೋದಯ ಎಂದು. ಇವೊತ್ತು ಕರ್ಪೂರಿ ಠಾಕೂರ್ ಅವರು ಬಹಳ ಆಲೋಚನೆ ಮಾಡಿದ್ದಾರೆ. ಅವರು ಹೇಳಿದಂತೆ ೧ ಲಕ್ಷ ೫೦ ಸಾವಿರ ಮಂದಿಗೆ ಈ ಯೋಜನೆಯಿಂದ ಆರ್ಥಿಕ ಮತ್ತು ಸಾಮಾಜಿಕ ಮಟ್ಟದಿಂದ ಮೇಲೆ ಎತ್ತುವುದಕ್ಕೆ ಅವಶ್ಯಕವಾಗಿದೆ ನನ್ನರಾಜ್ಯದಲ್ಲಿ ೩೦ ಲಕ್ಷ ಜನರು ನಿರುದ್ಯೋಗಿಗಳಿದ್ದಾರೆ, ಅದರ ಪೈಕಿ ೧೦ ಲಕ್ಷ ಜನ ವಿದ್ಯಾವಂತರು ಇನ್ನುಳಿದ ೨೦ ಲಕ್ಷ ಜನರು ಅವಿದ್ಯಾವಂತರು, ಅವಿದ್ಯಾವಂತ ನಿರುದ್ಯೋಗಿಗಳು ಈ ೩೦ ಲಕ್ಷ ಜನರಿಗೆ ಕೆಲಸ ಕೊಡಲಿಕ್ಕೆ ಒಂದು ಯೋಜನೆ ಮಾಡಿದ್ದೇನೆ. ಈ ಯೋಜನೆಯಗಾತ್ರ ೩೨೫ ಕೋಟಿ ರೂಪಾಯಿ ಎಂದು ಹೇಳಿದರು. ಇದರ ಬಗ್ಗೆ ಕೇಂದ್ರಸರ್ಕಾರದವರನ್ನು ಬೇಡುತ್ತಿದ್ದಾರೆ ಇವೊತ್ತು ನಮ್ಮ ಸಂಪನ್ಮೂಲಗಳನ್ನು ನಮ್ಮ ಬಡ್ಜೆಟ್ಟಿನಲ್ಲಿ ಅಳವಡಿಸಿಕೊಂಡಿದ್ದೀರಿ. ಈ ಎರಡಕ್ಕಿಂತಲೂ ಮಿಗಿಲಾಗಿ ನಮ್ಮಲ್ಲೆ ಎಷ್ಟು ನ್ಯಾಷನಲೈಸ್ಡ್ ಬ್ಯಾಂಕುಗಳಿವೆ ಅವುಗಳಿಗೆ ಅಪ್ರೋಚ್ ಮಾಡಿ, ಪ್ರತಿಯೊಬ್ಬರೂ ಕೂಡ ಈ ಯೋಜನೆಗೆ ಸಹಾಯ ಮಾಡಬೇಕೆಂದು ಕಡ್ಡಾಯವಾಗಿ ಕೇಳಿದರೆ ಆಗ ಯಶಸ್ವಿಯಾಗುತ್ತದೆ, ತಾವು ಅಂತಹ ಯೋಜನೆಯನ್ನು ಏನಾದರೂ ಹಾಕಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಮಾನ್ಯ ಸದ್ಯರು ಮಾತನಾಡತಕ್ಕ ಧಾಟಿಯನ್ನು ನೋಡಿ ಹೊರಗಿನಿಂದ ಬಂದೆ. ಈ ಸೈಟುಗಳನ್ನು ಕೊಡತಕ್ಕದ್ದು, ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು ನಾವೇ ಮೊದಲು ಪ್ರಾರಂಭ ಮಾಡಿದ್ದು. ಈ ದೇಶದಲ್ಲೆ ಇನ್ನು ಬೇರೆಯವರು ಪ್ರಾರಂಭ ಮಾಡಿಲ್ಲ. ಮಾನ್ಯ ಸದಸ್ಯರು ಈ ಅಂತ್ಯೋದಯದ ವಿಚಾರ ಏನು ಹೇಳುತ್ತಿದ್ದೀರಿ ಅದರ ಪ್ರಕಾರವೇ ನಾವು ಈ ಮನೆಗಳನ್ನು ಕಟ್ಟಿಸಿಕೊಡತಕ್ಕಂತಹ ಯೋಜನೆಗೆ ೧೦ ಕೋಟಿ ರೂಪಾಯಿ ಈ ವರ್ಷ ಇಟ್ಟಿದ್ದೇವೆ. ಇನ್ನು ಐದು ವರ್ಷದೊಳಗೆ ಫೇಸಡ್ ಪ್ರೋಗ್ರಾಂ ಪ್ರಕಾರ ಈ ವಸತಿ ಸಮಸ್ಯೆ ಏನಿದೆ ಇದನ್ನು ಕೊನೆ ಮಾಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಇದರಲ್ಲಿ ತಮಗೆ ಸಂಶಯ ಬೇಕಾಗಿಲ್ಲ. ಒಂದೇ ವರ್ಷದಲ್ಲಿ ಎಲ್ಲಾ ಹಣವನ್ನು ಕೂಡ ಈ ಒಂದು ಕಾರ್ಯಕ್ರಮಕ್ಕೋಸ್ಕರ ಖರ್ಚು ಮಾಡಲಿಕ್ಕೆ ಆಗುವುದಿಲ್ಲ.

ಒಂದೇ ವರ್ಷದಲ್ಲಿ ಬಡತನ ನಿರ್ಮೂಲನ ಮಾಡಲಿಕ್ಕೆ ಆಗುವುದಿಲ್ಲ. ಹಂತಹಂತವಾಗಿ ಇದನ್ನು ಕೊನೆ ಮಾಡಬೇಕೆಂದು ಸರ್ಕಾರ ಮನಗಂಡಿದೆ. ಸರ್ಕಾರದವರು ಈ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಇದು ಬಡ್ಜೆಟ್ಟಿನಲ್ಲಿಯೂ ಕೂಡ ಅಡಕವಾಗಿದೆ. ಇದರ ಬಗ್ಗೆ ಮಾನ್ಯಸದಸ್ಯರು ಸಂಶಯ ಪಡಬೇಕಾಗಿಲ್ಲ ನಾವು ಈ ದೇಶದಲ್ಲಿ ಸಮಾಜವಾದಿ ಸಮಾಜವನ್ನು ತರಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ತಮ್ಮ ಸ್ಕೀಂ ಯಾವರೀತಿ ಇದೆ ಎನ್ನುವ ಬಗ್ಗೆ ಪ್ರಾರಂಭದಲ್ಲಿ ಹೇಳಿದೆ. ಒದ್ದರೆ ಬಿದ್ದು ಹೋಗುವ ಸ್ಕೀಂ ನಿಮ್ಮಲ್ಲಿ ಇದೆ ಎಂದು ಹೇಳಿದೆ. ಇವೊತ್ತು ತಾವು ಸಣ್ಣ ಗುಡಿಸಲು, ಮನೆ ಕಟ್ಟಿಸಿದರೆ ಅವರು ಹೊಟ್ಟೆಗೆ ಏನು ಮಾಡಬೇಕು ?

ಶ್ರೀ ಬಿ. ಬಸವಲಿಂಗಪ್ಪ.—ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಂ ತರುತ್ತಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಬಿಹಾರ್ ರಾಜ್ಯ ಒಂದರಲ್ಲೇ ಒಂದು ಲಕ್ಷದ ೫ ಸಾವಿರ ಜನರಿಗೆ ಅಂತ್ಯೋದಯ ಸ್ಕೀಂ ಎಂದರೆ ಬರೀ ಸೈಟು ಕೊಡುವುದೇ ಅಲ್ಲ, ಜಮೀನು ಕೊಡುವುದೇ ಅಲ್ಲ, ಅವರಿಗೆ ಬೇಕಾಗತಕ್ಕಂತಹ ಎತ್ತು, ಗಾಡಿ ಎಲ್ಲಾ ಸೌಲಭ್ಯಗಳನ್ನು ಕೊಟ್ಟು ಅವರನ್ನು ಗ್ರಾಮದಲ್ಲಿ ಎಷ್ಟು ಜನರು ಇರುತ್ತಾರೆ, ಅವರ ಮಟ್ಟಕ್ಕೆ ತರುವುದಕ್ಕೆ ಅಂತ್ಯೋದಯ ಎಂದು ತಾವು ಹೇಳಿದ ಹಾಗೆ ಬರೀ ಹೌಸಿಂಗ್ ಸ್ಕೀಂ ಒಂದೇ ಅಲ್ಲ. ಈ ಬಗ್ಗೆ ನನ್ನ ಹತ್ತಿರ ಆಲ್ ಇಂಡಿಯಾ ಫಿಗರ್ಸ್ ಇದೆ. ರಾಜಾಸ್ಥಾನ ತೆಗೆದುಕೊಳ್ಳಿ, ಬಿಹಾರ್ ರಾಜ್ಯ ತೆಗೆದುಕೊಳ್ಳಿ ಯಾವುದರ ಫಿಗರ್ ಬೇಕಾದರೆ ಹೇಳುತ್ತೇನೆ. ಇನ್ನು ಇವೊತ್ತು ನ್ಯಾಷನಲೈಸ್ಡ್ ಬ್ಯಾಂಕುಗಳು ಏನಿವೆ ಇವು ಕರ್ನಾಟಕದಲ್ಲೇ ಹೆಚ್ಚಿವೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ೫೦೦-೬೦೦ ಶಾಖೆಗಳಿವೆ. ಇವೊತ್ತು ಕರ್ನಾಟಕ ರಾಜ್ಯದಲ್ಲಿ ಬ್ಯಾಂಕ್, ಬ್ಯಾಂಕಿಂಗ್ ಮಾಡುತ್ತಿದ್ದಾರೆಯೇ ಹೊರತು ಜನಸಾಮಾನ್ಯರ ಸುಧಾರಣೆಗೆ ಬರುತ್ತಿಲ್ಲ. ಇವೊತ್ತು ಕರ್ಪೂರಿ ಠಾಕೂರ್ ಅವರು ೩೨೫ ಕೋಟಿ ರೂಪಾಯಿ ೩೦ ಲಕ್ಷ ಜನರಿಗೆ ಉದ್ಯೋಗ ಒದಗಿಸಲಿಕ್ಕೆ ಸ್ಪೆಷಲ್ ಸ್ಕೀಂ ತಯಾರಿಸಿದ್ದಾರೆ. ತಾವು ಅದೇ ರೀತಿ ಮಾಡಿ. ತಮ್ಮ ಹತ್ತಿರ ಹಣ ಇಲ್ಲ ಎಂದು ಹೇಳಬಹುದು, ಆದರೆ ಬೇಕಾದಷ್ಟು ರಿಸೋರ್‌ಸಸ್ ಇದೆ ಬೇಕಾದಷ್ಟು ಸಂಪನ್ಮೂಲಗಳು ಇದೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ ಎಲ್ಲರ ಹತ್ತಿರವೂ ಹಣ ಇದೆ. ಸರ್ಕಾರದಲ್ಲಿ ಮಾತ್ರ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಇನ್ನು ನಮ್ಮ ರಾಜ್ಯದಲ್ಲಿರತಕ್ಕ ಬ್ಯಾಂಕುಗಳ ಗಾತ್ರ ಏನು. ರೂರಲ್ ಸೆಕ್ಟಾರ್ ಅಭಿವೃದ್ಧಿಪಡಿಸುವುದಕೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ಎಂದು ಆಲೋಚನೆ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಬರೀ ಕಂದಾಯದಿಂದ ದೇಶ ಉದ್ಧಾರ ಮಾಡಿ ಎಂದು ಹೇಳುವುದಿಲ್ಲ. ಇವೊತ್ತು ಹಿಮಾಚಲ ಪ್ರದೇಶದ ಬಗ್ಗೆ ಹೇಳಬೇಕು ಎಂದರೆ ಅದು ಗುಡ್ಡಗಾಡಿನ ಪ್ರದೇಶ. ಹಿಮದಿಂದ ಕೂಡಿರುವಂತಹ ಪ್ರದೇಶ. ಇವೊತ್ತು ಅದರ ಪ್ರಿಂಟೆಡ್ ರಿಪೋರ್ಟ್ ಬಂದಿದೆ. ಒಂದು ವರ್ಷದ ರಿಪೋರ್ಟಿನಲ್ಲೇ ಅವರು ಏನೇನು ಕೆಲಸ ಮಾಡಿದ್ದಾರೆ, ಆರೋಗ್ಯ ಸುಧಾರಣೆ ಏನು ಮಾಡಿದ್ದಾರೆ, ವಿದ್ಯಾಭ್ಯಾಸದಲ್ಲಿ ಏನು ಸುಧಾರಣೆ ಮಾಡಿದ್ದಾರೆ, ಆರ್ಥಿಕಾಭಿವೃದ್ಧಿಯಲ್ಲಿ ಏನು ಸುಧಾರಣೆ ಮಾಡಿದ್ದಾರೆ. ಸಾಮಾಜಿಕ ಅಭಿವೃದ್ಧಿಯಲ್ಲಿ ಏನು ಸುಧಾರಣೆ ಮಾಡಿದ್ದಾರೆ. ಅದರ ಒಂದು ಪ್ರಿಂಟೆಡ್ ಕಾಪಿಯನ್ನು ಕೊಡುತ್ತೇನೆ. ತಾವು ಅದನ್ನು ಕಾಪಿ ಮಾಡಿದರೆ ಸಾಕು. ಮೊನ್ನೆ ಶ್ರೀಮಾನ್ ಹೆಗ್ಗಡೆಯವರು ಭಾಷಣ ಮಾಡಿದರು ಅದರ ಬಗ್ಗೆ ನಾನು ಕಂಗ್ರಾಜ್ಯುಲೇಟ್ ಮಾಡುತ್ತೇನೆ. ಅವರು ಪಕ್ಷಾತೀತವಾಗಿ ಕೆಲಸ ಮಾಡಬೇಕು ಎಂದು ಹೇಳಬೇಕು ಎಂದು ಹೇಳಿದರು. ಅದಕ್ಕಾಗಿ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಇವೊತ್ತು ಅವರು ಒಂದು ಲಕ್ಷದ ಐದು ಸಾವಿರ ಜನರಿಗೆ ಏನು ಸ್ಕೀಂ ಹಾಕಿಕೊಂಡು ತಂದಿದ್ದಾರೆ ಅದೇ ರೀತಿ ರಾಜಾಸ್ಥಾನದಲ್ಲೂ ೨೫ ಸಾವಿರ ಬಡ ಕುಟುಂಬಗಳಿಗೆ ಆಶ್ರಯ ಕೊಟ್ಟಿದ್ದಾರೆ. ಇನ್ನು ಹಿಮಾಚಲ ಪ್ರದೇಶದಲ್ಲಿ ೧೮ ಸಾವಿರ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ತಾವು ಅಂತಹ ಸ್ಕೀಮುಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟು ಬ್ಯಾಂಕುಗಳಿವೆ ಅದನ್ನು ನೋಡಿ. ಬ್ಯಾಂಕುಗಳಲ್ಲಿ ಬ್ಯಾಂಕಿಂಗ್ ಮಾಡುವುದನ್ನು ನಿಲ್ಲಿಸಿ. ರಾಷ್ಟ್ರದಲ್ಲಿ ಅವರದು ಒಂದು ಪಾತ್ರ ಎಂದು ತೋರಿಸಿಕೊಳ್ಳುವುದಾದರೆ ತಮ್ಮದು ಒಂದು ಪಾತ್ರ ಇದೆ. ಆದುದರಿಂದ ತಾವು ಇಂತಹ ಸ್ಕೀಮುಗಳನ್ನು ಮುಂದೆ ತೆಗೆದುಕೊಂಡು ಬನ್ನಿ. ತಾವು ಇಂತಹ ಸ್ಕೀಮುಗಳನ್ನು ತೆಗೆದುಕೊಂಡು ಬಂದರೆ ದೇಶ ಮುಂದೆ ಬರುತ್ತದೆ. ಗ್ರಾಮಾಂತರ ಜನರಿಗೆ ಕೆಲಸ ಸಿಗುತ್ತದೆ. ಆರ್ಥಿಕ ಅಭಿವೃದ್ಧಿಯಲ್ಲಿ ಮುಂದೆ ಬರುತ್ತದೆ. ಬಡತನ ಹೋಗುತ್ತದೆ. ಇನ್ನು

೧೮ ಪರ್‌ಸೆಂಟ್ ಗ್ರ್ಯಾಂಟ್ಸ್ ನಮ್ಮ ಮಾನ್ಯ ಸಚಿವರಾದ ಪ್ರಭಾಕರ್ ಅವರ ಖಾತೆಯಲ್ಲಿ ಬರುತ್ತದೆ, ಅವರ ಹೆಸರನ್ನು ಹೇಳಿದರೆ ಅಡ್ಡಿ ಇಲ್ಲ ಎಂದು ಕಾಣುತ್ತದೆ. ಇವೊತ್ತು ೧೮ ಪರ್‌ಸೆಂಟ್ ವಿಲೇಜ್ ಪಂಚಾಯಿತಿ ಬಡ್ಜೆಟ್ಟಿನಲ್ಲಿ ಎತ್ತಿಡಬೇಕು ಎಂದು ಇದೆ, ಹಾಗೆ ೧೮ ಪರ್‌ಸೆಂಟ್ ತಾಲ್ಲೋಕು ಬೋರ್ಡ್ ಗ್ರ್ಯಾಂಟ್ಸ್‌ನಲ್ಲೂ ಕೂಡ ಎತ್ತಿಡಬೇಕು ಎಂದು ಇದೆ. ಈ ಬಗ್ಗೆ ರಾಜ್ಯ ಸರ್ಕಾರದವರು ಏನು ಮಾಡಿಕೊಂಡಿದ್ದೀರಿ. ತಮಗೆ ಹೇಳುವುದಕ್ಕೆ ಬುದ್ಧಿ ಇದೆ, ಮಾಡುವುದಕ್ಕೆ ಬುದ್ಧಿ ಇಲ್ಲವೇ. ಇವೊತ್ತು ನಿಮ್ಮ ಹಣ ೩೭೦ ಕೋಟಿ ರೂಪಾಯಿ ಬಡ್ಜೆಟ್ಟಿನಲ್ಲಿ ೧೮ ಪರ್ಸೆಂಟ್ ಎತ್ತಿಟ್ಟಿದ್ದೀರಾ ಎಂದು ಕೇಳುತ್ತೇನೆ. ಮೊನ್ನೆ ಮಾನ್ಯ ಸದಸ್ಯರಾದ ಜೆ. ಹೆಚ್. ಪಟೇಲ್ ಅವರು ವಿಲೇಜ್ ಪಂಚಾಯಿತಿಗಳ ಬಗ್ಗೆ ಚೆನ್ನಾಗಿ ಹೇಳಿದರು. ವಿಲೇಜ್ ಪಂಚಾಯಿತಿಗಳಲ್ಲಿ ರಸ್ತೆಗಳಿಗೆ ಲೈಟ್ ಹಾಕಿಲ್ಲ. ಇನ್ನು ಪಂಚಾಯಿತಿ ಆಫೀಸಿಗೆ ಬಲ್ಬು ತಂದು ಹಾಕಲಿಕ್ಕೆ ಕಷ್ಟ ಇದೆ ಎಂದು. ಹಾಗೆ ಇರುವಾಗ ನೀವು ಹುಕುಂ ಕೊಡುತ್ತೀರಾ ಸಂತೋಷ. ಅವರೂ ಮಾಡಬೇಕು, ನೀವೂ ಮಾಡಬೇಕು. ನೈತಿಕ ಹಕ್ಕು ಏನೋ ಇದೆ. ಇವೊತ್ತು ೧೮ ಪರ್‌ಸೆಂಟ್ ಈ ಎರಡು ಸಂಸ್ಥೆಗಳಿಂದ ಬರತಕ್ಕ ಹಣವನ್ನು ವಿನಿಯೋಗಿಸತಕ್ಕ ರೀತಿಯಲ್ಲಿ ಸಮರ್ಪಕವಾಗಿಲ್ಲ. ಇದು ಸರ್ಕಾರದವರ ಜವಾಬ್ದಾರಿ. ಇನ್ನು ಮಿಡಲ್‌ಸ್ಕೂಲುಗಳಲ್ಲಿ ೫–೧೦ ರೂಪಾಯಿ ಸ್ಕಾಲರ್‌ಷಿಪ್ ಕೊಡುತ್ತಾರೆ. ಮಾನ್ಯ ಮಂತ್ರಿಗಳು ಓದುವಾಗ ಎಷ್ಟು ಇತ್ತೋ ಈಗಲೂ ಅಷ್ಟೇ ಇದೆ. ಅದು ಮಾನ್ಯ ಬಸವಲಿಂಗಪ್ಪನವರಿಗೆ ಗೊತ್ತಿದೆ. ಇವರು ಹಿಂದೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಆಗಿದ್ದಾಗ ಎಷ್ಟು ಇತ್ತು ರೆವಿನ್ಯೂ ಮಿನಿಸ್ಟರ್ ಆದರೂ ಅಷ್ಟೇ ಇದೆ. ಇವರು ಚೀಫ್ ಮಿನಿಸ್ಟರ್ ಆದರೂ ಅಷ್ಟೇ ಇರುತ್ತದೆ. ಇದರಿಂದ ಬರತಕ್ಕ ೧೮ ಪರ್ಸೆಂಟ್ ಹಣ ಏನಿವೆ ಅದನ್ನು ಹಿಂದುಳಿದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಬಾಲವಾಡಿಗಳನ್ನು ನಡೆಸುವುದಕ್ಕೋಸ್ಕರ, ಬಹಳ ಗರೀಬರಾಗಿದ್ದ ಪಕ್ಷದಲ್ಲಿ ಆ ಮಕ್ಕಳಿಗೆ ಸ್ಲೇಟು, ಪುಸ್ತಕಗಳನ್ನು ಕೊಟ್ಟು ವಿದ್ಯಾವಂತರನ್ನಾಗಿಮಾಡಿ. ಬಹುಶಃ ಇದಕ್ಕಿಂತ ಪುಣ್ಯವಾದಂಥ ಸೇವೆ ಮತ್ತೊಂದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಇಂತಹ ಸ್ಕೀಮನ್ನು ಜಾರಿಗೆ ತರಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರ ತಮ್ಮಲ್ಲಿ ಹೇಳುವುದೇನೆಂದರೆ, ಬಿ.ಡಿ.ಒ. ಎಕ್ಸಿಕ್ಯೂಟೀವ್ ಆಫೀಸರ್ ಏನಿದ್ದಾರೆ ಇವರಿಗೆ ತಾವು ಆಕ್ಟ್‌ನಲ್ಲಿ ಪವರ್ಸ್ ಕೊಟ್ಟಿದ್ದೀರಿ. ತಾವು ಇದನ್ನು ಆಲೋಚನೆ ಮಾಡಿ. ಬಿ.ಡಿ.ಒ.ಗೆ ಆಕ್ಟ್‌ನಲ್ಲಿ ಎರಡು ಪವರ್ಸ್ ಇದೆ. ಮೊದಲನೆಯದು, ಡೆಪ್ಯುಟಿ ಕಮಿಷನರಿಂದ ಮತ್ತು ಮಂತ್ರಿಗಳಿಂದ ಯಾವುದಾದರೂ ಲೆಟರ್ಸ್ ಬಂದರೆ ಅದನ್ನು ವಿಲೇಜ್ ಪಂಚಾಯಿತಿ ಛೇರ್ಮನ್‌ಗೆ ಫಾರ್ವರ್ಡ್ ಮಾಡುವುದು, ಎರಡನೆಯದು ಅವರಿಂದ ಏನಾದರೂ ಪ್ರಪೋಸಲ್ ಬಂದರೆ ಅದನ್ನು ಸಬ್ಮಿಟ್ ಮಾಡುವುದು. ಇವೆರಡೇ ಅವರ ಕೆಲಸ. ತಾಲ್ಲೂಕ ಬೋರ್ಡ್ ಆಕ್ಟ್‌ನಲ್ಲಿ ತಹಸೀಲ್ದಾರ್‌ಗೆ ಯಾವರೀತಿ ರೆವಿನ್ಯೂ ಮ್ಯಾನ್ಯುವಲ್ ಆಗಿದೆ, ಅವರ ಅಧಿಕಾರ ವ್ಯಾಪ್ತಿಯನ್ನು ಏನು ನಿರೂಪಣೆ ಮಾಡಿದ್ದೀರಿ ಅದೇರೀತಿ ಇವರ ಅಧಿಕಾರ ವ್ಯಾಪ್ತಿಯನ್ನು ನಮೂದು ಮಾಡುವುದಕ್ಕೆ ಏಕೆ ಮನಸ್ಸು ಮಾಡಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಮಾಡುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಬಹಳ ಸಂತೋಷ. ಇವೆರಡು ಬಿ.ಡಿ.ಒ. ಜವಾಬ್ದಾರಿ. ದುರದೃಷ್ಟಕರವಾದ ಸಂಗತಿ ಎಂದರೆ, ಅಮಲ್ದಾರ್ ಆಗಿ ಬೇಕಾದರೆ ಬಿ.ಡಿ.ಒ. ಹೋಗುತ್ತಾನೆ, ಬಿ.ಡಿ.ಒ. ಏಕೆ ತಹಸೀಲ್ದಾರಾಗಿ ಹೋಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅವರ ರಿಕ್ರೂಟ್‌ಮೆಂಟ್ ಬೇರೆ, ಇವರ ರಿಕ್ರೂಟ್‌ಮೆಂಟ್ ಬೇರೆ.

ಶ್ರೀ ವೈ. ರಾಮಕೃಷ್ಣ.—ಎಸ್.ಸಿ.ಒ. ಸಿ.ಇ.ಒ. ಇವರೆಲ್ಲಾ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರೇ, ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಇಲ್ಲಿಗೆ ಕಳಿಸುತ್ತೀರಿ. ಏಕೆಂದರೆ ಇವರೆಲ್ಲಾ ಬಹಳ ಜಬರ್ದಸ್ತಿನ ಜನ.

SRI B. BASAVALINGAPPA.—The practice has been that the officers belonging to the Revenue Department are presumed to know everything and they can handle any department. That is the presumption.

SRI Y. RAMAKRISHNA.—Planning Department is the department of co-operation and co-ordination. ಅದನ್ನು ನೀವು ಮಾಡದೇ ಹೋದರೆ, The entire planning will fail in our country; the entire planning will be

jeoperdised. ಇದನ್ನು ನೀವು ಮಾಡಬೇಕಾದರೆ ಇವತ್ತು ೧೮ ಡಿಪಾರ್ಟ್‌ಮೆಂಟ್‌ಗಳು ಏನಿವೆ ಅದರಲ್ಲಿ ಪ್ರತಿಯೊಬ್ಬರೂ ಕಾರ್ಯವನ್ನು ನಿರ್ವಹಿಸಬೇಕು. ಇವತ್ತು ಗ್ರಾಮಸೇವಕರು ಇದ್ದಾರೆ. ಗ್ರಾಮಸೇವಕರನ್ನು ಪ್ರಮೋಟ್ ಮಾಡುತ್ತೀರಿ. ಗ್ರಾಮಸೇವಕ ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ಆಫೀಸರಾಗಿ ಹೋದರೆ ಅವರಿಗೆ ಒಂದು ತರಹ ಸಂಬಳ ಇದೆ. ಅದೇ ಗ್ರಾಮಸೇವಕ ಕೋಆಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರಾಗಿ ಹೋದರೆ ಮತ್ತೊಂದು ಸಂಬಳ ಇದೆ. ಅದೇ ಗ್ರಾಮಸೇವಕ ಸೋಷಿಯಲ್ ಎಜುಕೇಷನ್ ಆರ್ಗನೈಸರಾಗಿ ಹೋದರೆ ಒಂದು ತರಹ ಸಂಬಳ ಇದೆ. ಅದೇ ಗ್ರಾಮ ಸೇವಕ ಪಂಚಾಯಿತಿ ಎಕ್ಸ್‌ಟೆನ್‌ಷನ್ ಆಫೀಸರಾಗಿ ಹೋದರೆ ಒಂದು ತರಹ ಸಂಬಳ ಇದೆ, ಇದು ಮಿಸರಬಲ್; ಇದೇನು ಅನಾಮಲಿ. ಗಾಮಸೇವಕರನ್ನು ನಾಲ್ಕೈದು ಡಿಪಾರ್ಟ್‌ಮೆಂಟ್‌ಗಳಿಗೆ ನಾವು ಕಳಿಸಿದರೆ ಒಂದೇ ಸ್ಕೇಲ್ ಪ್ರಮೋಷನ್ ಇರಬೇಡವೇ. ಆದುದರಿಂದ ಆಕ್ಟನ್ನು ಅಮೆಂಡ್‌ಮೆಂಟ್ ಮಾಡಿ ತೆಗೆದುಕೊಂಡು ಬನ್ನಿ. ಇದರಲ್ಲಿ ಜೂನಿಯರ್ ಇಂಜನಿಯರನ್ನು ಬೇಕಾದರೆ ಸೇರಿಸಿಕೊಳ್ಳಿ. ಬಿ.ಡಿ.ಒ. ಸ್ಥಾನಮಾನ ಏನು, ಎ.ಇ.ಒ., ಎಸ್.ಸಿ.ಒ., ಪಿ.ಇ.ಒ., ಜೂನಿಯರ್ ಇಂಜನಿಯರ್ ಸ್ಥಾನ ಏನು ಎಂದು ಮಾಡಿದಿರಿ ಇದರಿಂದ ಅವರಲ್ಲಿ ತೃಪ್ತಿ ಮೂಡುತ್ತದೆ ಎಂದು ನಾನು ಭಾವಿಸಿ ಕೊಂಡಿದ್ದೇನೆ. ಜೂನಿಯರ್ ಇಂಜನಿಯರ್‌ಗೆ ತಾಲ್ಲೂಕ್ ಬೋರ್ಡ್‌ನಲ್ಲಿ ರಿಸೋರ್ಸಸ್ ಇಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ೧೦ ಎಕರೆಗಿಂತ ಕಡಿಮೆ ಅಚ್ಚುಕಟ್ಟು, ದುರಸ್ತು ಮಾಡುವುದಕ್ಕೆ, ಮೇಂಟೈನ್ ಮಾಡುವುದಕ್ಕೆ ಬಜೆಟ್‌ನಲ್ಲಿ ಎಷ್ಟು ಹಣ ತೆಗೆದುಕೊಂಡಿದ್ದೀರಿ ಎಂದು ತೋರಿಸಿ. ಮೊನ್ನೆ ಡೆವಲಪ್ ಮೆಂಟ್ ಏನೂ ಮಾಡಿಲ್ಲ ಎಂದು ಹೇಳಿದ್ದಕ್ಕೆ ಅವರಿಗೆ ಕೋಪ ಬಂದಿರಬಹುದು. ಅದನ್ನು ನಾನು ಸಮರ್ಥಿಸುತ್ತೇನೆ. ತಾವು ದಯವಿಟ್ಟು ಸಮಗ್ರವಾಗಿ ಕಾನೂನನ್ನು ಬದಲಾವಣೆ ಮಾಡಿ ಶಾಸನವನ್ನು ತೆಗೆದುಕೊಂಡು ಬನ್ನಿ. ಐ.ವಿ.ಸಿ. ರೋಡ್‌ಗೆ ಗ್ರಾಂಟ್ ಏನೂ ಇಲ್ಲ. ರಿಲೀಫ್ ವರ್ಕ್ಸ್ ಮುಗಿದ ತಕ್ಷಣ ಇದಕ್ಕೂ ರಿಲೀಫ್ ಕೊಟ್ಟುಬಿಡುತ್ತೀರಿ. ಲ್ಯಾಂಡ್ ಆರ್ಮಿ ರೋಡ್ಸ್ ಏನಿವೆ ಇದನ್ನು ಮೇಂಟೈನ್ ಮಾಡುವುದಕ್ಕೆ ಆಗದೇ ಬಿಟ್ಟುಬಿಟ್ಟಿದ್ದೀರಿ. ಇದನ್ನು ನಾನು ಮಂತ್ರಿಯಾಗಿದ್ದಾಗ ತಂದದ್ದು. ಜೊತೆಗೆ ವಿಲೇಜ್ ರೋಡ್, ತಾಲ್ಲೂಕುಬೋರ್ಡ್ ರೋಡ್ಸ್ ಏನಿವೆ ತಾಲ್ಲೂಕು ಬೋರ್ಡ್‌ಗೆ ಗ್ರಾಂಟ್ ೧ ಲಕ್ಷ ಇಲ್ಲ. ಆದರೆ ಇವರಿಗೆ ಕೊಟ್ಟಿರುವ ಜವಾಬ್ದಾರಿ ನೋಡಿದಾಗ ನಮಗೆ ಆಶ್ಚರ್ಯವಾಗುತ್ತದೆ. ದಯವಿಟ್ಟು ಇದರ ಕಡೆಗೆ ಹೆಚ್ಚು ಗಮನಕೊಟ್ಟು ಕೆಲಸ ಆಗಲೇಬೇಕು ಎನ್ನತಕ್ಕ ರೀತಿಯಲ್ಲಿ ಯಾವರೀತಿ ಆಕ್ಟ್ ಅಮೆಂಡ್‌ಮೆಂಟ್ ಮಾಡಬೇಕೋ ಅದನ್ನು ಮಾಡಿ.

ಮತ್ತೊಂದು ವಿಚಾರ ಏನೆಂದರೆ, ಪ್ರತಿಯೊಂದು ಬಿ.ಡಿ.ಒ. ಆಫೀಸಿಗೂ ಒಂದೊಂದು ಕನ್ನಡ ಟೈಪ್‌ರೈಟಿಂಗ್ ಮಿಷನ್ ಕೊಡಿ. ಅಲ್ಲಿ ಕನ್ನಡದಲ್ಲಿ ವ್ಯವಹಾರ ಮಾಡುವುದಕ್ಕೆ ಕನ್ನಡ ಟೈಪ್‌ರೈಟರ್ ಇಲ್ಲ, ಆದುದರಿಂದ ಕನ್ನಡ ಟೈಪ್‌ರೈಟರನ್ನು ದಯವಿಟ್ಟು ಕೊಡಿಸಿ ಎಂದು ಹೇಳುತ್ತೇನೆ. ಬಿ.ಡಿ.ಒ. ಗಳಿಗೆ ಜೀಪ್ ಕೊಟ್ಟಿದ್ದೀರಿ. ಮುರುಕಲು ಲಾರಿಯೊಳಗೆ ಕುಳಿತುಕೊಂಡರೆ ಎಷ್ಟೋ ಮೇಲು. ಅವರು ಅದನ್ನು ಓಡಿಸುತ್ತಾರೆ. ಅದು ಕಾಮನ್ ಪ್ರಾಪರ್ಟಿ. ಪೋಲೀಸ್ ಅಧಿಕಾರಿಗಳು ಜೀಪ್ ಕಳಿಸಿ ಅಂದರೆ ಕಳಿಸಬೇಕು. ಜುಡಿಶಿಯರಿ ಒಂದು ಬಿಟ್ಟು ಬೇರೆ ಯಾವ ಡಿಪಾರ್ಟ್‌ಮೆಂಟಿನವರು ಒಂದು ಜೀಪ್ ಕಳಿಸಿ ಎಂದರೆ ಕಳಿಸಬೇಕು. ಅವರಿಗೆ ಪೆಟ್ರೋಲ್ ಕೊಡುವುದು ಬಹಳ ಕಡಿಮೆ. ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕ ಜನರ ಜೀವನ ಹೇಗಿದೆ ಎಂದು ಹೋಗಿ ತಿಳಿದುಕೊಳ್ಳ ಬೇಡವೇ ?

ಶ್ರೀ ಬಿ. ಬಸವಲಿಂಗಪ್ಪ.—ಈಗ ಜಾಸ್ತಿ ೬೦೦ ಮಾಡಿದ್ದೇವೆ.

ಶ್ರೀ ವೈ. ರಾಮಕೃಷ್ಣ.—೬೦೦ ಎಂದು ಇಮ್ಮಿಡಿಯೇಟಾಗಿ ಆಗಬೇಕಾದಂಥ ಆರ್ಡರು. ನೀವು ಕೊಡುವ ಪೆಟ್ರೋಲ್ ಒಂದು ವಾರಕ್ಕೆ ಸಾಕಾಗುವುದಿಲ್ಲ. ಇವೆಲ್ಲಕ್ಕಿಂತ ಮುಖ್ಯವಾಗಿ, ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ನೇರವಾಗಿ ಕೇಳುತ್ತೇನೆ. ಏನೆಂದರೆ, ನಮ್ಮ ಬೆಂಗಳೂರು ನಗರದಲ್ಲಿ ಡಿಸ್ಟ್ರಿಕ್ಟ್‌ಬೋರ್ಡ್ ಆಫೀಸ್ ಬಿಲ್ಡಿಂಗ್ ಇದೆ. ಕೆಂಪೇಗೌಡ ರೋಡಿನಲ್ಲಿರತಕ್ಕ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸ್ ಬಿಲ್ಡಿಂಗನ್ನು ಮಾರುವುದಕ್ಕೆ ನೆಗೋಸಿಯೇಷನ್ ನಡೆಯುತ್ತಾ ಇದೆಯೆಂದು ಕೇಳಿದ್ದೇನೆ. ಇದು ಮನಸ್ಸಿಗೆ ನೋವು ಉಂಟು ಮಾಡತಕ್ಕ ವಿಚಾರ. ಇದು ೧೧ ತಾಲ್ಲೂಕುಗಳ ಪ್ರಾಪರ್ಟಿ, ನಮ್ಮ ಬೆಂಗಳೂರಿನ ೧೧ ಜಿಲ್ಲೆಗಳ ಪ್ರಾಪರ್ಟಿ. ಅದಕ್ಕೆ ಬೆಲೆ ಕಟ್ಟುವುದಕ್ಕಾಗುವುದಿಲ್ಲ. ವಿಧಾನಸೌಧ ಮಾರಿದರೆ ಏನಾಗುತ್ತದೋ ಆ ಬಿಲ್ಡಿಂಗನ್ನು ಮಾರಿದರೆ ಅದೇ ಆಗುತ್ತದೆ. ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್ ಸುತ್ತಲೂ ಸಿನಿಮಾ ಟಾಕೀಸ್‌ಗಳಿವೆ. ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಇದೆ, ಅದರ ಮೇಲೆ

ಳ ಅಂತಸ್ತುಗಳನ್ನು ಕಟ್ಟಿಸಬಹುದು. ಇಂತಹ ಬಿಲ್ಡಿಂಗನ್ನು ಎಷ್ಟಕ್ಕೆ ಮಾರಿದರೋ, ಏಕೆ ಮಾರಿದರೋ ನನಗೆ ಗೊತ್ತಿಲ್ಲ. ಅದನ್ನು ಮಾರುವ ಅವಶ್ಯಕತೆಯಾದರೂ ಏನಿತ್ತು ಎಂದು ಕೇಳುತ್ತೇನೆ. ಒಂದುವೇಳೆ ಅದನ್ನು ಮಾರಿದರೆ ನಮ್ಮ ತಾಲ್ಲೂಕುಗಳಿಗೆ ಬರಬೇಕಾದಂಥ ಷೇರನ್ನು ಕೊಡಿ.

ಶ್ರೀ ಪಿ. ರಾಮದೇವ್.—ಆ ಬಿಲ್ಡಿಂಗನ್ನು ಮಾರಬಾರದು, ಒಂದುವೇಳೆ ಮಾರಿದರೆ ಪ್ರತಿಭಟನೆ ಮಾಡಬೇಕು.

ಒಬ್ಬ ಸದಸ್ಯರು.—ವಿಧಾನಸೌಧವನ್ನು ಬೇಕಾದರೆ ಮಾರುತ್ತಾರೆ ಇವರು.

ಶ್ರೀ ವೈ. ರಾಮಕೃಷ್ಣ.—ಮತ್ತೊಂದು ವಿಚಾರ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆ ಎಂದು ೧೯೭೦ನೇ ಇಸವಿಯಲ್ಲಿ ನಾನೇ ಮಂತ್ರಿಯಾಗಿದ್ದಾಗ ಅದನ್ನು ಉದ್ಘಾಟನೆ ಮಾಡಿದೆ. ಅದಕ್ಕಾಗಿ ಮೂರು ಕೋಟಿ ರೂಪಾಯಿಗಳನ್ನು ತೆಗೆದಿರಿಸಿ ಎಂಟು ವರ್ಷಗಳಾಗುತ್ತಾ ಬರುತ್ತಿದ್ದರೂ ಆ ದುಡ್ಡು ಹಾಗೆಯೇ ಇದ್ದರೆ ಆ ಸ್ಕೀಂ ಯಾವರೀತಿ ಕೆಲಸಮಾಡುತ್ತಿದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ನನಗನ್ನಿಸುತ್ತದೆ ಇನ್ನು ೫೦ ವರ್ಷಗಳಾದರೂ ಆ ದುಡ್ಡು ಹಾಗೆಯೇ ಇರುತ್ತದೆಂದು ಭಾವಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಯಾರೂ ಸಣ್ಣ ಹಿಡುವಳಿದಾರರು ಇರಲಿಲ್ಲವೆ ? ಆರ್ಥಿಕವಾಗಿ ಅವಶ್ಯಕತೆ ಇರತಕ್ಕಂಥ ರೈತರು ಯಾರೂ ಇರಲಿಲ್ಲವೇ ? ಚುರುಕಾಗಿ ಕೆಲಸ ಮಾಡತಕ್ಕಂಥ ಹತೋಟಿ ಏತಕ್ಕೆ ಇಟ್ಟುಕೊಳ್ಳಬಾರದು ಎಂದು ಕೇಳುತ್ತಾ ಇದರ ಬಗ್ಗೆ ಹೆಚ್ಚಿನ ತನಿಖೆ ವಹಿಸಬೇಕೆಂದು ಹೇಳುತ್ತೇನೆ.

2–00 P.M.

ಕೊನೆಯದಾಗಿ ನಾನು ಮೊನ್ನೆ ಕಾರವಾರದಬಗ್ಗೆ ಭಾಷಣ ಮಾಡಿದ್ದು ಉಂಟು. ಮನಸ್ಸು ಬಹಳ ನೊಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಶ್ರೀಮಾನ್ ಪ್ರಭಾಕರ್‌ರವರು ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಕಾರ್ಪೊರೇಷನ್ ಅಧ್ಯಕ್ಷರಾಗಿ ಕೆಲಸಮಾಡಿದ್ದಾರೆ. ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಧ್ಯಕ್ಷರಾಗಿಯೂ ಕೆಲಸಮಾಡಿದ್ದಾರೆ. ಅವರ ನಾಯಕತ್ವದಲ್ಲಿ ಅವರ ಅಧಿಕಾರಾವಧಿಯಲ್ಲಿ ಖರ್ಚು ಆಗಿರತಕ್ಕಂಥ ಹಣ ಬರೆ ೩೦ ಲಕ್ಷ ರೂಪಾಯಿಗಳು. ನಿಮ್ಮ ಸರ್ಕಾರ ಇರತಕ್ಕಂಥ ಆಂಧ್ರಪ್ರದೇಶದಲ್ಲಿ ೨೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದನ್ನು ನೋಡಿದರೆ ನಿಮ್ಮ ಅದಕ್ಷತೆಯನ್ನು ತೋರಿಸುತ್ತದೆ. ಬಾರಿ ಅನ್ಯಾಯವನ್ನು ಮಾಡಿದ್ದೀರಿ, ಮೋಸವನ್ನು ಮಾಡಿದ್ದೀರಿ. ಆದ್ದರಿಂದ ಈ ಸ್ಥಾನದಲ್ಲಿರುವುದಕ್ಕೆ ನೀವು ಲಾಯಕ್ ಇಲ್ಲವೆಂದು ಧೈರ್ಯವಾಗಿ ಹೇಳುತ್ತಿದ್ದೇನೆ. ಕೇರಳಾದಲ್ಲಿ ೮ ಕೋಟಿ ಖರ್ಚು ಮಾಡಿದ್ದರೆ, ಮದ್ರಾಸ್‌ನಲ್ಲಿ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆಂಧ್ರದಲ್ಲಿ ೨೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ತಾವು ಟಿಪ್‌ಟಾಪ್ ಆಗಿ ಲಾಂಗ್‌ಕೋಟ್ ಶರಾಯಿ ಮತ್ತು ಟೋಪಿಯನ್ನು ಹಾಕಿಕೊಂಡು ಬಂದಹಾಗೆ ನೀವು ವಹಿಸಿಕೊಂಡಿರತಕ್ಕಂಥ ಸಂಸ್ಥೆಗಳನ್ನು ಏತಕ್ಕೆ ಟಿಪ್‌ಟಾಪ್ ಆಗಿ ಇಡುವುದಕ್ಕೆ ಆಗಲಿಲ್ಲವೆಂದು ಕೇಳುತ್ತೇನೆ. ಒಂದೇ ಜನಾಂಗಕ್ಕೆ ಮೀಸಲಾಗಿರತಕ್ಕಂಥ ಹಣವನ್ನು ಆ ಒಂದು ಜನಾಂಗಕ್ಕೆ ಖರ್ಚು ಮಾಡದೆ ಮೋಸ ಮಾಡಿದ್ದೀರಿ. ಈ ಒಂದು ಕಾರ್ಪೊರೇಷನ್‌ನ್ನು ಡೆವಲಪ್ ಮಾಡುವುದಕ್ಕೆ ಮ್ಯಾನೇಜ್‌ಮೆಂಟ್‌ಗೆ ಶಕ್ತಿ ಸಾಮರ್ಥ್ಯವಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಗ್ರಾಮಾಭಿವೃದ್ಧಿಯನ್ನು ಇಡೀ ರಾಜ್ಯದಲ್ಲಿಯೇ ಅದಕ್ಕೆ ಸಾಕಷ್ಟು ಹಣವನ್ನು ಪಡೆದು ಮಾಡುವಷ್ಟು ಶಕ್ತಿ ಧೈರ್ಯ ನಿಮಗೆ ಇಲ್ಲವೆಂದು ಹೇಳುತ್ತೇನೆ. ನಿಮಗೆ ಬೇರೆ ಕೆಲಸವಿರುತ್ತದೆ, ಬೆಂಗಳೂರಿನಿಂದ ೨೦ ಮೈಲಿ ದೂರದಲ್ಲಿ ೧೦೦ ಎಕರೆ ಫಾರಂ ಮೆನ್‌ಟೈನ್ ಮಾಡತಕ್ಕಂಥ ಕೆಲಸದಲ್ಲಿ ತೊಡಗಿರುತ್ತೀರಿ.

SRI K. PRABHAKAR.—It is utterly false.

ಶ್ರೀ ವೈ. ರಾಮಕೃಷ್ಣ.—ಸಾವಿರಾರು ರೂಪಾಯಿಗಳನ್ನು ತೆಗೆದುಕೊಂಡು ಮಂತ್ರಿಗಳಾಗಿ ನಿಮ್ಮ ಫಾರಮ್ ನೋಡಿಕೊಳ್ಳುವುದಕ್ಕಲ್ಲ. ದಯವಿಟ್ಟು ರಾಜೀನಾಮೆಯನ್ನು ಕೊಟ್ಟು ಬೇರೆಯಾರಾದರೂ ದಕ್ಷತೆಯಿಂದ ಕೆಲಸ ಮಾಡತಕ್ಕಂಥವರಿಗೆ ನಿಮ್ಮ ಸ್ಥಾನವನ್ನು ಬಿಟ್ಟುಕೊಡಿ ಎಂದು ಹೇಳುತ್ತೇನೆ,

SRI J. H. PATEL.—The Hon. Minister said that 'it is utterly false'. I think it is unparliamentary.

SRI K. PRABHAKAR.—If it is unparliamentasy let it be removed.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರು ೨೦ ಮೈಲಿ ದೂರದಲ್ಲಿ ೧೦೦ ಎಕರೆ ಜಮೀನು ಇದೆ ಎಂದು ಹೇಳಿದಕ್ಕೆ ಅದು ಸುಳ್ಳು ಎಂದು ಹೇಳಿದರು. ಅದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಬೇಕಾಗಿತ್ತು. ಅದು ಸುಳ್ಳು ಎಂದು ಹೇಳಿ ಮಾನ್ಯ ಮಂತ್ರಿಗಳು ಹೇಳಿರುತ್ತಾರೆ, ಆರೀತಿಯಾಗಿ ಹೇಳಬಾರದಾಗಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಸ್ನೇಹಿತರಾದಂಥ ಜೆ. ಎಚ್. ಪಟೇಲರು ಕ್ರೀಯಾ ಲೋಪವೆತ್ತಿ ಕಡಿತದಿಂದ ತೆಗೆದುಹಾಕಬೇಕೆಂದು ಹೇಳಿದ್ದಾರೆ. ಅದಕ್ಕೆ ಅಷ್ಟು ಮಹತ್ವವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಮಾನ್ಯ ವೈ; ರಾಮಕೃಷ್ಣರವರು ಮಾನ್ಯ ಮಂತ್ರಿಗಳು ೧೦೦ ಎಕರೆ ಜಮೀನು ಇಟ್ಟುಕೊಂಡು ಅದಕ್ಕಾಗಿ ತಮ್ಮ ಕಾಲವನ್ನು ವಿನಿಯೋಗಿಸುತ್ತಿದ್ದರೆ, ಮಂತ್ರಿಗಳಾಗಿ ಕೆಲಸ ಮಾಡುತ್ತಿಲ್ಲವೆಂದು ಒಂದು ಜವಾಬ್ದಾರಿಯುತವಾದ ಆಪಾದನೆಯನ್ನು ಮಾಡಿದ್ದಾರೆ. ಅದನ್ನು ಶ್ರೀ ವೈ. ರಾಮಕೃಷ್ಣರವರು ಸಬೇಸಾಬೀತು ಮಾಡಿ ಸಭೆಗೆ ನಿದರ್ಶನಗಳನ್ನು ಕೊಡಲಿ ಇಲ್ಲದಿದ್ದರೆ ಆಪಾದನೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ. It is a very serious charge against the Minister. In case if it is false the hon. Member is bound to make an apology to the House. If it is a fact, I must say that the matter will have to be left to the Chief Minister to deal with.

ಅಧ್ಯಕ್ಷರು.—ತಮಗೆ ನನ್ನ ಸಲಹೆ ಏನೆಂದರೆ ಮಾನ್ಯ ಸದಸ್ಯರು ಏನು ಜವಾಬ್ದಾರಿಯುತವಾದ ಆಪಾದನೆಗಳನ್ನು ಮಾಡಿದ್ದಾರೆ ಅದನ್ನು ರುಜುವಾತು ಮಾಡುವುದು ಅವರ ಹೊಣೆಗಾರಿಕೆಯಾರಿಗಿರುತ್ತದೆ. ನಾವೂ ಕೂಡ ಕೇಳಿರುತ್ತೇವೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಇದರ ಬಗ್ಗೆ ಪ್ರಸ್ತಾಪ ಮಾಡಿ ಸಮಂಜಸವಾದ ಉತ್ತರವನ್ನು ಕೊಡುತ್ತಾರೆಂದು ನಾವು ಭಾವಿಸಿರುತ್ತೇವೆ.

† ಶ್ರೀ ಪಿ. ಬಸವನ ಗೌಡ (ಹರಿಹರ).—ಮಾನ್ಯ ಅಧ್ಯಕ್ಷರೆ ಗ್ರಾಮ ಪಂಚಾಯತಿಗಳ ಬಗ್ಗೆ ಮಂತ್ರಿಗಳು ಇಟ್ಟಿರುವ ಬೇಡಿಕೆಗಳನ್ನು ಪುರಸ್ಕರಿಸಿ ಕೆಲವಾರು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಹಿರಿಯರಾದಂಥ ಶ್ರೀ ವೈ. ರಾಮಕೃಷ್ಣರವರು ಮಾತನಾಡುವಾಗ ಹಳ್ಳಿಗಳ ಬಗ್ಗೆ ವಿವರಣೆಯನ್ನು ಬಹಳ ಚೆನ್ನಾಗಿ ಕೊಟ್ಟಿರುತ್ತಾರೆ. ನಾನು ಒಂದು ಪ್ರಶ್ನೆಯನ್ನು ಮಾಡುತ್ತೇನೆ. ಹಳ್ಳಿಗಳ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ, ಉತ್ತಮ ಮಾಡಿಲ್ಲ ಎನ್ನತಕ್ಕಂಥಾದ್ದು ಮೊದಲಿನಿಂದಲೂ ಇದ್ದೆ ಇದೆ. ಇದಕ್ಕೆ ಕಾರಣ ಮಾನ್ಯ ಮಂತ್ರಿಗಳಾಗಿ ಆರೋಗ್ಯ ಖಾತೆಯನ್ನು ತೆಗೆದುಕೊಂಡು ಮಾಡಿರತಕ್ಕಂಥ ತಪ್ಪಿನಿಂದಲೇ ಎಂದು ಹೇಳಬಯಸುತ್ತೇನೆ. ಏತಕ್ಕೆಂದರೆ ಸುಮಾರು ೧೦—೧೫ ವರ್ಷಗಳ ಹಿಂದೆ ಅವರು ಆರೋಗ್ಯ ಖಾತೆಯನ್ನು ತೆಗೆದುಕೊಂಡಾಗ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಸರಿಯಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತಂದಿದ್ದರೆ ನಮ್ಮ ಹಳ್ಳಿಗಾಡಿನ ಜನರಿಗೆ ಇಷ್ಟೊಂದು ತೊಂದರೆಯಾಗುತ್ತಿರಲಿಲ್ಲವೆಂದು ಈವತ್ತಿನ ದಿವಸ ಹೇಳಬೇಕಾಗಿದೆ. ಹಳ್ಳಿಗಾಡಿನ ಜನಗಳ ಬಗ್ಗೆ ಈ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಯಾವ ವಿದವಾದ ಯೋಜನೆಯನ್ನು ಹಾಕಿಕೊಳ್ಳಲಿಲ್ಲ. ಇವತ್ತು ಹಳ್ಳಿಗಳಿಗೆ ಆಗಬೇಕಾದ ಕೆಲಸ ಸ್ವಲ್ಪಮಟ್ಟಿಗಾದರೂ ಆಗಿದೆ. ಇವತ್ತಿನ ದಿವಸ ಹಳ್ಳಿಯಿಂದ ಚುನಾಯಿತರಾಗಿ ಬಂದಂತಹ ಪ್ರತಿನಿಧಿಗಳು ಇಲ್ಲಿ ನಾವು ಎಷ್ಟು ಜನ ಇದ್ದೇವೆ ಎಂದರೆ ೧೫೦ ಜನ ಇದ್ದೇವೆ. ನಾವೆಲ್ಲರೂ ಹಳ್ಳಿಗಳಿಂದ ಆರಿಸಿಬಂದಿರತಕ್ಕವರು. ನಮ್ಮ ಸೇವೆ ಅವರಿಗೆ ಮುಟ್ಟಿರುವುದರಿಂದ ನಾವು ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. ನಮ್ಮ ಕೆಲಸ ಸರಿಯಾಗಿ ಆಗದಿದ್ದರೆ, ಅದು ಅವರಿಗೆ ಮುಟ್ಟದಿದ್ದರೆ ನಾವು ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಮಾನ್ಯ ಸದಸ್ಯರನೇಕರು ಹಳ್ಳಿಗಳ ಗೋಸ್ಕರ ಆಗಬೇಕಾದ ಕೆಲಸ ಹೆಚ್ಚಿನ ಪ್ರಮಾಣದಲ್ಲಿ ಆಗಿಲ್ಲ ಎಂದು ಹೇಳಿದ್ದಾರೆ. ಅದನ್ನು ನಾನು ಅನುಮೋದಿಸುತ್ತೇನೆ. ಈ ಬಗ್ಗೆ ನಾನು ಹೇಳಬೇಕೆಂದರೆ ಹಳ್ಳಿಗರಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಕೆಲಸಗಳು ಆಗದೇ ಇದ್ದರೂ ಸಹ ಸ್ವಲ್ಪ ಮಟ್ಟಿಗಾದರೂ ಅಲ್ಲಿ ಕೆಲಸಗಳು ಆಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ ಇದಕ್ಕೆ ಕಾರಣ ಇದೆ. ಏನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿಯಾಗಲೀ ಅಥವಾ ನಮ್ಮ ರಾಷ್ಟ್ರದಲ್ಲಿಯಾಗಲೀ ಇವತ್ತು ೧೦೦ಕ್ಕೆ ೮೦ ಪರ್ಸೆಂಟ್ ಬಡವರು ಇರುವಾಗ, ನಮ್ಮಲ್ಲಿ ರಿಸೋರ್ಸಸ್ ಕಡಿಮೆ ಇರುವಾಗ ಒಂದೇ ಸಾರಿ ಎಲ್ಲ ಸಮಸ್ಯೆಗಳನ್ನೂ ನಿವಾರಣೆ ಮಾಡಿಬಿಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಹಂತಹಂತವಾಗಿ ಕಾರ್ಯ ಸಾಧಿಸಬೇಕಾಗಿದೆ.

ಇದು ನಮ್ಮೆಲ್ಲರ ಉದ್ದೇಶವೂ ಆಗಿದೆ. ಇಲ್ಲಿ ನಾವು ಹಳ್ಳಿಗಳ ಉದ್ಧಾರವಾಗಬೇಕು, ಹಳ್ಳಿಯ ಜನರ ಉದ್ಧಾರವಾಗಬೇಕು, [illegible] ಹಳ್ಳಿಗಳ ಉದ್ಧಾರವಾಗುವುದಿಲ್ಲ ಅಲ್ಲಿಯವರೆಗೆ ಈ ರಾಷ್ಟ್ರದ ಉದ್ಧಾರವಾಗುವುದಿಲ್ಲ ಎಂದು ಭಾಷಣ ಮಾಡುತ್ತೇವೆ. ಆದರೆ ಬಗ್ಗೆ ಒಳ್ಳೆಯ......

ಶ್ರೀ ಸಿ. ಎಂ. ಇಬ್ರಾಹಿಂ.—ಆಗ ಏನಾದರೂ ಆಪರೇಷನ್ ಮಾಡಿದ್ದರೆ ನೀವು ಹುಟ್ಟಿ ಎಂ. ಎಲ್. ಎ ಆಗಿ ಇಲ್ಲಿಗೆ ಬರುತ್ತಿದ್ದಿರಾ ಎಂದು ನಮಗೆ ಅನುಮಾನ ಬಂದಿದೆ ;

ಶ್ರೀ ಪಿ. ಬಸವನಗೌಡ.—ಅದಕ್ಕೆ ಏನು ತೊಂದರೆಯಾಗಿದೆ ಎಂಬುದನ್ನು ನಾನು ಆಮೇಲೆ ಹೇಳುತ್ತೇನೆ. ಆದರೆ ನೀವು ಹೀಗೆ ಮಧ್ಯೆ ಇಂಟರ್‌ಫಿಯರ್ ಮಾಡಿದರೆ ನಾವು ಏನು ಹೇಳಬೇಕೋ ಅದು ಮರೆತು ಹೋಗುತ್ತದೆ. ನಾವು ಇಲ್ಲಿಗೆ ಹೊಸ ಸದಸ್ಯರು ಇದ್ದೇವೆ. ದಯವಿಟ್ಟು ನಾವು ಮಾತನಾಡುವುದಕ್ಕೆ ಸಹಕಾರ ಕೊಡಿ. ಮಾನ್ಯ ಪಟೇಲ್‌ರವರು ಹಳ್ಳಿಗಳ ಅಭಿವೃದ್ಧಿ ವಿಚಾರ ಹೇಳುವಾಗ ಒಳ್ಳೆಯ ಸ್ಟಾಟಿಸ್‌ಟಿಕ್ಸ್ ಕೊಟ್ಟು ಹೇಳಿದರು: ಹಳ್ಳಿಗಳ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಮಾನ್ಯ ಮಂತ್ರಿಯವರು ಇಟ್ಟಿರತಕ್ಕ ಹಣ ಯಾತಕ್ಕೂ ಬರದು, ಆ ಹಣ ಅದಕ್ಕೆ ಸಾಕಾಗುವುದಿಲ್ಲ ಎಂದು ಹೇಳಿದರು. ಈ ಬಗ್ಗೆ ನಾನು ಹೇಳುವುದೇನೆಂದರೆ ನಾನಾ ಡಿಪಾರ್ಟ್‌ಮೆಂಟ್‌ಗಳು ಸೇರಿ ಈ ರೂರಲ್ ಡೆವ ಪ್‌ಮೆಂಟ್ ಪ್ರೊಗ್ರಾಂ ಹಾಕಿಕೊಂಡಿದ್ದಾರೆ. ರೋಡುಗಳನ್ನು ಮಾಡಿಸಲು ಒಬ್ಬ ಮಂತ್ರಿಯಿದ್ದಾರೆ, ಹೆಲ್ತ್ ಗೋಸ್ಕರ ಒಬ್ಬರು ಇದ್ದಾರೆ. ಹೀಗೆ ೧೩—೧೪ ಡಿಪಾರ್ಟ್‌ಮೆಂಟ್‌ಗಳು ಸೇರಿ ಈ ಎಲ್ಲಾ ಕೆಲಸಗಳನ್ನು ಮಾಡಿಸಲು ರೂರಲ್ ಡೆವೆಲಪ್‌ಮೆಂಟ್ ಪ್ರೋಗ್ರಾಂ ಹಾಕಿಕೊಂಡಿದ್ದಾರೆ, ಅವರೆಲ್ಲಾ ಸೇರಿ ಈ ಎಲ್ಲಾ ಕಾರ್ಯಕ್ರಮಗಳನ್ನು ಮಾಡುತ್ತಾರೆ. ಮಾನ್ಯ ಸದಸ್ಯರು ಮುಂದುವರಿದು ರಸ್ತೆಗಳಿಗಾಗಿ ೧೦ ಸಾವಿರ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ, ಇದು ಏತಕ್ಕೂ ಸಾಲುವುದಿಲ್ಲ ಎಂಬುದಾಗಿ ಕೊಂಕು ಮಾತಿನಲ್ಲಿ ಹೇಳಿದರು. ಈ ೧೦ ಸಾವಿರ ರೂಪಾಯಿಗಳನ್ನು ಏತಕ್ಕಾಗಿ ಇಟ್ಟಿದ್ದಾರೆ ಎಂಬುದು ಅವರಿಗೂ ಗೊತ್ತು. ಆದರೆ ಕೆಳದರ್ಜೆಯ ರೋಡ್‌ಗಳನ್ನು ಮಾಡುವುದಕ್ಕಾಗಿ ಈ ಒಂದು ವ್ಯವಸೆ ಇರಲಿ, ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ಇನ್ನುಳಿದ ಕೆಲಸ ಮಾಡುವುದಕ್ಕೆ ಬಜೆಟ್‌ನಲ್ಲಿ ಇಷ್ಟು ಹಣವನ್ನು ಇಟ್ಟುಕೊಂಡಿ ಎನ್ನತಕ್ಕಂಥ ಅವರ ವಾದ ಸರಿಯಲ್ಲ ಎಂದು ಮಾನ್ಯ ಪಟೀಲರಿಗೆ ಸ್ಪಷ್ಟವಾಗಿ ಹೇಳುತ್ತೇನೆ. ಎಲ್ಲಾ ಡಿಪಾರ್ಟ್‌ಮೆಂಟ್‌ಗಳವರು ಎಷ್ಟು ಹಣ ಕೇಳುತ್ತಾರೆ ಅಷ್ಟು ಹಣವನ್ನು ಕೊಡಬೇಕಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—೧೦ ಸಾವಿರ ರೂಪಾಯಿಗಳನ್ನು ರೋಡ್ ಗೋಸ್ಕರ ಇಟ್ಟುಕೊಂಡಿದ್ದಾರೆ ಎಂದು ನಾನು ಹೇಳಿಲ್ಲ. ೧೮ ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ಸಿಬ್ಬಂದಿ ಖರ್ಚಿಗೆ ಏನು ಇಟ್ಟುಕೊಂಡಿದ್ದಾರೆ ಅದರಲ್ಲಿ ೧೦ ಸಾವಿರ ರೂಪಾಯಿಗಳನ್ನು ರೋಡಿಗೆ ಇಟ್ಟುಕೊಂಡಿದ್ದಾರೆ ಎಂದು ಹೇಳಿದ್ದೇನೆ. ಬಜೆಟ್‌ನಲ್ಲಿ ಈ ರೋಡ್‌ಗಾಗಿ ಇಟ್ಟುಕೊಂಡಿರುವುದು ಅದು ಬೇರೆ. ನಾನು ಹೇಳಿದ್ದು ಈ ನಿಮ್ಮ ಅಡ್ಮಿನ್ಸ್ಟ್ರೇಟಿವ್ ಸ್ಟಾಫ್ ಗೋಸ್ಕರ ಏನು ಹೆಚ್ಚುವರಿ ಹಣವನ್ನು ಇಟ್ಟುಕೊಂಡಿದ್ದಾರೆ ಅದನ್ನು ನಾನು ಹೇಳಿದ್ದು. ಇಲ್ಲಿ ರೋಡ್ಸ್, ಹೆಲ್ತ್ ಸ್ಯಾನಿಟೇಷನ್‌ಗೆ ೩ ಲಕ್ಷ ೭೮ ಸಾವಿರ ರೂಪಾಯಿಗಳೆಂದು ಮೆನ್‌ಷನ್ ಮಾಡಿದ್ದಾರೆ.

(ಮಾನ್ಯ ಗೋವಿಂದ ಪಿ. ಒಡೆಯರಾಜ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಪೆ. ಬಸವನಗೌಡ. —ಇಷ್ಟು ಹೇಳಿ ನಾನು ಈ ಬಗ್ಗೆ ಕೆಲವಾರು ಸಲಹೆಗಳನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಈ ಹೌಸಿಂಗ್ ಸ್ಕೀಮ್ ಬಗ್ಗೆ ಇಲ್ಲಿ ಸಾಕಷ್ಟು ವಾದಗಳು ನಡೆದಿವೆ. ಈ ಬಗ್ಗೆ ನನ್ನದೊಂದು ಸಲಹೆ ಏನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಿವೇಶನಗಳನ್ನು ಮನೆ ಕಟ್ಟಿಕೊಳ್ಳುವುದಕ್ಕಾಗಿ ನಾವು ಕೊಡುತ್ತಿದ್ದೇವೆ. ಈ ದಿಶೆಯಲ್ಲಿ ನಾವು ಬಹಳ ಆತುರಾತುರವಾಗಿ ಇದ್ದೇವೆ. ಕೇಳಿದವರಿಗೆಲ್ಲಾ ನಿವೇಶನಗಳನ್ನು ಕೊಟ್ಟು ಬಿಡುತ್ತಿದ್ದೇವೆ. ಇದರಲ್ಲಿ ನನಗೆ ಒಂದು ಸಂಶಯ ಬರುತ್ತಿದೆ. ಏನೆಂದರೆ ನಮ್ಮ ರಾಜ್ಯದಲ್ಲಿ ವ್ಯವಸಾಯದಿಂದಲೇ ಜೀವನ ಮಾಡತಕ್ಕಂಥ ಜನರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ನಾವು ಆತುರಾತುರದಲ್ಲಿ ಈ ವ್ಯವಸಾಯ ಮಾಡತಕ್ಕಂಥ ಜಮೀನನ್ನು ಸೈಟುಗಳನಾಗಿ ಮಾಡಿ ಮನೆ ಕಟ್ಟಿಕೊಳ್ಳಲು ಕೊಡುವುದಾದರೆ ನಮ್ಮ ರಾಜ್ಯದಲ್ಲೇ ಆಗಲೀ ಅಥವಾ ನಮ್ಮ ರಾಷ್ಟ್ರದಲೇ ಆಗಲೀ ಕೆಲವಾರು ವರ್ಷಗಳಲ್ಲೇ ಈ ವ್ಯವಸಾಯ ಮಾಡತಕ್ಕಂಥ ಜಮೀನೆಲ್ಲವೂ ಈ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಉಪಯೋಗವಾಗಬಹುದು, ಇದರಿಂದ ವ್ಯವಸಾಯಗಾರರಿಗೆ

ತೊಂದರೆಯಾಗಬಹುದು ಎಂಬ ಸಂಶಯ ನನ್ನಲ್ಲಿ ಉಂಟಾಗಿದೆ. ಈ ಬಗ್ಗೆ ಬೇರೆ ದೇಶಗಳಲ್ಲಿ ಏನು ಮಾಡುತ್ತಿದ್ದಾರೆ ಎಂದರೆ ಕೇಳಿದವರಿಗೆಲ್ಲರಿಗೂ ಸೈಟುಗಳನ್ನು ಕೊಡುತ್ತಾ ಇಲ್ಲ; ಅವರ ಬದಲಾಗಿ ಏನು ಮಾಡುತ್ತಿದ್ದಾರೆ ಎಂದರೆ ನಿವೇಶನಗಳು ಅಗಲವಾಗಿ ಹೋಗುವುದರ ಬದಲು ಎತ್ತರವಾಗಿ ಹೋಗಲಿ, ಆಗ ನಿವೇಶನಗಳು ಉಳಿಯುತ್ತವೆ ಎಂದು ಹೇಳಿ ಎತ್ತರವಾಗಿ ಅಪ್‌ಸ್ಟೇರ್ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಸಾಮಾನ್ಯ ಬಡವರಿಗೆ ಸಾಧ್ಯವಾಗುವುದಿಲ್ಲ. ಇದಕ್ಕೋಸ್ಕರ ಬೇರೆ ರಾಜ್ಯಗಳಲ್ಲಿ ಸರ್ಕಾರದವರೇ ೫, ೧೦, ೨೦ ಅಂತಸ್ತಿನ ಕಟ್ಟಡಗಳನ್ನು ಕಟ್ಟಿಸಿ ಮನೆಗಳನ್ನು ಕೊಡುತ್ತಿದ್ದಾರೆ. ಈ ರೀತಿ ನಾವು ಮಾಡುವುದಾದರೆ ವ್ಯವಸಾಯ ಜಮೀನು ಮನೆಗಳ ನಿವೇಶನಕ್ಕೆ ಉಪಯೋಗವಾಗತಕ್ಕಂಥಾದ್ದು ತಪ್ಪಿ ಬಡ ವ್ಯವಸಾಯಗಾರರಿಗೆ ಅನುಕೂಲವಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ಪ್ರತಿಯೊಬ್ಬರಿಗೂ ಅಗಲವಾಗಿ ನಿವೇಶನಗಳನ್ನು ಕೊಡದೇ ಎತ್ತರವಾಗಿ ಅಪ್‌ಸ್ಟೇರ್ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು, ಹಳ್ಳಿಯಲ್ಲಿ ಸ್ಕೂಲ್ ಬಿಲ್ಡಿಂಗ್‌ಗಳ ವಿಚಾರವಾಗಿ ಮಾನ್ಯ ರಾಮಕೃಷ್ಣ ಅವರು ಹೇಳಿದ್ದಾರೆ. ಅದು ಸರಿ. ನಮ್ಮ ನಮ್ಮ ಸರ್ಕಾರದವರು ಸ್ಕೂಲ್ ಬಿಲ್ಡಿಂಗ್‌ಗಾಗಿ ಹೆಚ್ಚು ಹಣವನ್ನು ಕೊಡುತ್ತಿದ್ದಾರೆ. ಅವುಗಳ ರಿಪೇರಿಗಾಗಿ ಬಹಳ ಕಡಿಮೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಸ್ಕೂಲ್ ಬಿಲ್ಡಿಂಗ್‌ಗಳ ಹೆಂಚು ಹಾರಿಹೋದರೆ ಪುನಃ ಹೆಂಚು ಹಾಕಿಕೊಳ್ಳುವುದಕ್ಕೆ ದುಡ್ಡು ಇಲ್ಲದೇ ಮಕ್ಕಳು ಹಳ್ಳಿಯಲ್ಲಿ ಮಳೆಯಲ್ಲಿಯೇ ಓದುವಂಥ ಸಂದರ್ಭ ಉಂಟಾಗಿದೆ. ಆದ್ದರಿಂದ ಮಾನ್ಯ ಮಂತ್ರಿಯವರು ಪ್ರತಿವರ್ಷ ಹಳ್ಳಿಯಲ್ಲಿರುವ ಸ್ಕೂಲ್ ಬಿಲ್ಡಿಂಗ್‌ಗಳನ್ನು ರಿಪೇರಿ ಮಾಡಿಸಿಕೊಡಬೇಕು ಎಂದು ಅವರನ್ನು ಕೋರುತ್ತಿದ್ದೇನೆ.

ಇನ್ನು ಅಂತ್ಯೋದಯ ಯೋಜನೆಯ ಬಗ್ಗೆ ಮಾನ್ಯ ರಾಮಕೃಷ್ಣರವರು ಮಾತನಾಡುತ್ತಾ 'ಈ ಒಂದು ಯೋಜನೆ ಬೇರೆ ರಾಜ್ಯಗಳಲ್ಲಿ ನಡೆಯುತ್ತಿದೆ, ನಮ್ಮ ರಾಜ್ಯದಲ್ಲಿ ಅದು ನಡೆಯುತ್ತಿಲ್ಲ, ಇದಕ್ಕಾಗಿ ಒಂದು ಪ್ರಾಜೆಕ್ಟ್ ತಯಾರು ಮಾಡಬೇಕು; ಇದರಿಂದ ಹಳ್ಳಿಗಳ ಉದ್ಧಾರವಾಗುವುದಕ್ಕೆ ಸಹಾಯಕವಾಗುತ್ತದೆ' ಎಂದು ಹೇಳಿದ್ದಾರೆ. ಅದು ಸತ್ಯವಾದ ಮಾತು, ಇವತ್ತು ನಮ್ಮಲ್ಲಿ ಹಳ್ಳಿಗರಿಗೆ ಕೆಲಸ ಕೊಡುವುದನ್ನು ಬಿಟ್ಟರೆ, ಇನ್ನುಳಿದ ಎಲ್ಲಾ ವ್ಯವಸ್ಥೆಗಳನ್ನೂ ಅವರಿಗೆ ಒದಗಿಸಿಕೊಡುವ ಪ್ರಯತ್ನ ನಡೆಯುತ್ತಾ ಇದೆ. ಸರ್ಕಾರದವರು ಬಡಜನರಿಗೆ ಮನೆಗಳನ್ನಾಗಲೀ, ಹೊಲಗಳನ್ನಾಗಲಿ ಇನ್ನಿತರ ವ್ಯವಸ್ಥೆಗಳನ್ನಾಗಲೀ ಹಂತಹಂತವಾಗಿ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ದಿಶೆಯಲ್ಲಿ ಕೆಲಸಗಳು ನಿಧಾನವಾಗಬಾರದು. ಹಳ್ಳಿಯಲ್ಲಿ ಬಡವನ ಉದ್ಧಾರವಾಗಬೇಕಾಗಿರುವುದರಿಂದ ಸರ್ಕಾರದವರು ನಮ್ಮೆಲ್ಲರ ಸಹಕಾರದಿಂದ ಆದಷ್ಟು ಜಾಗ್ರತೆ ಈ ಕೆಲಸವನ್ನು ಮಾಡಬೇಕಾಗಿದೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಯವರು ನಮ್ಮ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳು ಸಮಂಜಸವಾಗಿದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಟಿ. ಮಾಯಣ್ಣ (ಹುಲಿಯೂರ್‌ದುರ್ಗ).—ಮಾನ್ಯ ಅಧ್ಯಕ್ಷರೇ, ಸಮುದಾಯ ಅಭಿವೃದ್ಧಿ ಸಂಸ್ಥೆ, ಅಭಾವ ಪೀಡಿತ ಪರಿಹಾರ ಕಾಮಗಾರಿ ಯೋಜನೆ, ಮತ್ತು ಸ್ಥಳೀಯ ಪಂಚಾಯಿತಿ ರಾಜ್ಯ ಈ ವಿಚಾರದಲ್ಲಿ ನಮ್ಮ ಮಾನ್ಯ ಮಂತ್ರಿಗಳು ಏನೊಂದು ಡಿಮ್ಯಾಂಡನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ಹಳ್ಳಿಗಾಡಿನಲ್ಲಿ ೧೦೦ಕ್ಕೆ ೮೦ ಜನ ವಾಸಮಾಡುತ್ತಿದ್ದಾರೆ. ಈ ದಿನ ಹೆಚ್ಚಿಗೆ ಐಶ್ವರ್ಯವನ್ನು ಉತ್ಪತ್ತಿ ಮಾಡತಕ್ಕಂಥ ಜನ ಹಳ್ಳಿಗಾಡಿನಲ್ಲಿದ್ದಾರೆ. ಪ್ರಕೃತಿಯ ಮೇಲೆ ತಾವು ಅವಲಂಬಿಸಿಕೊಂಡು ತಮ್ಮ ಬೆವರನ್ನು ಸುರಿಸಿ ದಿನಕ್ಕೆ ಸುಮಾರು ೧೭ ಘಂಟೆಗಳ ಕಾಲ ಕೆಲಸ ಮಾಡುವಂತಹ ಜನ ಇವತ್ತು ಹಳ್ಳಿಗಾಡಿನಲ್ಲಿದ್ದಾರೆ. ನೀವು ನಿರುದ್ಯೋಗ ಸಮಸ್ಯೆಯ ಯೋಜನೆಯನ್ನು ಪಟ್ಟಣಗಳಲ್ಲಿ ತರುತ್ತೀರಿ. ಪಟ್ಟಣಗಳಲ್ಲಿ ನಿರುದ್ಯೋಗ ಸಮಸ್ಯೆಯ ಯೋಜನೆಯನ್ನು ತಂದರೆ ಕೆಲವೇ ಜನಗಳಿಗೆ ಮಾತ್ರ ಕೆಲಸ ಸಿಕ್ಕುತ್ತದೆ. ಹೆಚ್ಚಿಗೆ ಜನ ಇವತ್ತು ಅವಿದ್ಯಾವಂತರು, ವಿದ್ಯಾವಂತರು, ಹಳ್ಳಿಗಾಡಿನಲ್ಲಿ ವಾಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಪ್ರತಿಯೊಂದು ಹಳ್ಳಿಗಾಡಿನ ಅಭಿವೃದ್ಧಿ ಮಾಡದೇ, ನಿರುದ್ಯೋಗ ಸಮಸ್ಯೆ, ಬಡತನ ಈ ದೇಶದಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ತಾವೆಲ್ಲರೂ ಅಂದರೆ ಸರ್ಕಾರದವರು ಹೆಚ್ಚಿಗೆ ಆ ಒಂದು ದಿಶೆಯಲ್ಲಿ ಕೆಲಸ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನೆಹರೂರವರು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಹಾತ್ಮ ಗಾಂಧೀಜಿಯವರು

ಅವರಿಗೆ ಒಂದು ಕಾಗದವನ್ನು ಬರದಿದ್ದರು. ಅದರಲ್ಲಿ ಈ ದೇಶ ಹಳ್ಳಿಗಾಡಿನ ಡೇಶ. ಪ್ರತಿಯೊಂದು ಹಳ್ಳಿಯವರೂ ವಿದ್ಯಾವಂತರಾಗಬೇಕು. ಅವರು ಯೋಗ್ಯವಾಗಿ ವಾಸಮಾಡುವುದಕ್ಕೆ ಅವಕಾಶ ಇರ ಬೇಕು, ಹಳ್ಳೀ ಪಟ್ಟಣ ಸಮಾನಾವಗಿರಬೇಕು, ಅಂತಹ ಸಮಾಜ ನಿರ್ಮಾಣಮಾಡಬೇಕೆಂದು ಅಂದಿನ ಪ್ರಧಾನಿಯವರಿಗೆ ಮಹಾತ್ಮ ಗಾಂಧೀಜಿಯವರು ಕಾಗದ ಬರೆದಿದ್ದರು. ಆದರೆ ನಾವು ಅದನ್ನು ಕಳೆದ ೩೦ ವರ್ಷಗಳಿಂದಲೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಈಗ ಈ ಸಮುದಾಯ ಅಭಿವೃದ್ಧಿ ವಿಚಾರದಲ್ಲಿ ತಾಲ್ಲೂಕಿನೊಳಗೆ ಸಾಮಾನ್ಯವಾಗಿ ಪೋಲೀಸ್ ಮತ್ತು ರೆವಿನ್ಯೂ ಈ ಎರಡು ಇಲಾಖೆಗಳನ್ನು ಬಿಟ್ಟರೆ ಉಳಿದೆಲ್ಲಾ ೧೬ ಇಲಾಖೆಗಳೂ ಈ ಅಭಿವೃದ್ಧಿ ಸಂಸ್ಥೆಯಲ್ಲಿ ಸೇರುತ್ತವೆ. ಒಳ್ಳೆಯ ಸಮಾಜ ವನ್ನು ನಿರ್ಮಾಣ ಮಾಡುವುದಕ್ಕೆ ಯೋಗ್ಯವಾದ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ತಾವು ಮನ ಸ್ಸುಮಾಡಬೇಕು. ಸಮಾಜದಲ್ಲಿ ಎಲ್ಲರನ್ನೂ ಅಕ್ಷರಸ್ತರನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಬಡತನದಲ್ಲಿರುವ ಜನ ಈ ಯೋಜನೆಗಳಿಂದ ಒಳ್ಳೆಯ ಅನುಕೂಲತೆಯಿಂದ ವಾಸ ಮಾಡುವುದಕ್ಕಾಗುವುದಿಲ್ಲ. ಹೆಚ್ಚಿಗೆ ಕೈಗಾರಿಕೆಗಳಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡ ಬೇಕು. ಹಳ್ಳಿಗಾಡಿನ ಉತ್ಪತ್ತಿ ಹೆಚ್ಚಿಸಬೇಕೆಂಬುದನ್ನು ಸರ್ಕಾರ ತಿಳಿದುಕೊಂಡು ಹೆಚ್ಚಿನ ಅನುಕೂಲ ಗಳನ್ನು ಹಳ್ಳಿಗಾಡಿನಲ್ಲಿರುವವರಿಗೆ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ನಾನು ಕೂಡ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಬೇರೆ ಇಲಾಖೆಯಿಂದ ೧೦ ಸಾವಿರ, ೫ ಸಾವಿರ ರೂಪಾಯಿ ಹಣ ಬರಬೇಕಾಗಿದ್ದರೆ ಅದನ್ನೇ ಕಾಯಿಕೊಂಡಿರಬೇಕು. ಅಧಿಕಾರವನ್ನು ವಿಕೇಂದ್ರೀ ಕರಣ ಮಾಡಿ. ಜನತೆಗೆ ಬೇಕಾದಂತಹ ಸಂಪನ್ಮೂಲವನ್ನು ಒದಗಿಸಿಕೊಡುವುದಕ್ಕೆ ಯಾವ ಅಧಿಕಾರವೂ ಈಗಿನ ನಿಮ್ಮ ಕಾನೂನಿನಲ್ಲಿ ಇಲ್ಲ. ಆದ್ದರಿಂದ ಹೆಚ್ಚಿನ ಸಂಪನ್ಮೂಲವನ್ನು ಒದಗಿಸಿಕೊಡುವುದಕ್ಕೆ ಅನು ಕೂಲವಾದಂತಹ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕು. ಎಂಬುದಾಗಿ ಸರ್ಕಾರವನ್ನು ಕೇಳಿ ಕೊಳ್ಳುತ್ತೇನೆ. ಹೆಚ್ಚಿಗೆ ಇದರಲ್ಲಿ ಕಾಮಗಾರಿ ಕೆಲಸ ಇರುವುದರಿಂದ, ಕಾಮಗಾರಿ ಕೆಲಸಗಳಲ್ಲಿ ಅಸಿಸ್ಟೆಂಟ್ ಇಂಜನೀಯರ್‌ರವರು ಹೇಳಿದ್ದನ್ನೇ ಮಾಡಬೇಕು. ಇದರಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಹೆಚ್ಚಿನ ಅನುಕೂಲ ಸಿಕ್ಕುವುದಿಲ್ಲ. ಹೆಚ್ಚಿನ ಆರ್ಥಿಕ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ.

ಇನ್ನು ಮಕ್ಕಳ ಕಲ್ಯಾಣದ ವಿಚಾರ. ಇದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಬರಬಹುದು. ಆದರೆ ಹೆಚ್ಚಿಗೆ ಮಕ್ಕಳಿಗೆ ನರ್ಸರಿ ಸ್ಕೂಲುಗಳನ್ನು ಕಟ್ಟಿಸಿಕೊಡಬೇಕಾದುದು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಕೆಲಸವಾಗಿದೆ. ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ನರ್ಸರಿ ಸ್ಕೂಲುಗಳನ್ನು ಕಟ್ಟಿಸಿಕೊಡಬೇಕು. ಇದಕ್ಕೆ ಅನುಕೂಲಮಾಡಬೇಕು. ನರ್ಸರಿ ಶಿಕ್ಷಣ ವ್ಯವಸ್ಥೆ ಕೂಡ ಇದರಲ್ಲಿ ಬರುವುದರಿಂದ ಮ್ಯಾನೇಜ್‌ಮೆಂಟ್ ಕೂಡ ತಾಲ್ಲೂಕುಬೋರ್ಡಿನ ಅಧೀನದಲ್ಲಿರುತ್ತದೆ. ಕಾಮಗಾರಿ ಕೆಲಸಗಳನ್ನು ಹೆಚ್ಚಿಗೆ ಅನುಕೂಲ ಇರುವ ಕೆಲಸಗಳನ್ನು ಕೊಡಿ. ದೊಡ್ಡ ದೊಡ್ಡ ಕೆಲಸ ಗಳನ್ನು ಬಿಟ್ಟು, ಸಣ್ಣ ಸಣ್ಣ ಕೆಲಸಗಳನ್ನು ತಾಲ್ಲೂಕುಬೋರ್ಡ್ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕು. ಗ್ರಾಮಾಭಿವೃದ್ಧಿ ವಿಚಾರದಲ್ಲಿ ಏನೇನು ಮಾಡಬೇಕು, ಅಂತಾದ್ದನ್ನು ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ. ಹಳ್ಳಿಗಾಡಿನ ಜನಗಳ ಜೀವನ ಸುಗಮವಾಗಿ ನಡೆಯುವುದಕ್ಕೆ ಅನು ಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸಣ್ಣ ನೀರಾವರಿ ವಿಚಾರವಾಗಿ ಹೇಳುವು ದಾದರೆ ೧೦ ಎಕರೆಗಿಂತ ಕಡಿಮೆ ಬರುವ ನಿರಾವರಿ ಕೆಲಸಗಳನ್ನು ಮಾಡಿಕೊಡುವುದಕ್ಕೆ ತಾಲ್ಲೂಕಿನಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಅವಕಾಶ ಇದೆ. ಯಾವ ಯಾವ ಗ್ರಾಮದಲ್ಲಿ ಏನೇನು ಆಗಬೇಕೆಂಬ ಬಗ್ಗೆ ಇಂಜಿನೀಯರಿಂಗ್ ಇಲಾಖೆಯವರು ಪ್ರತಿಯೊಂದು ಹಳ್ಳಿಗೂ ಹೋಗಿ ಎಲ್ಲೆಲ್ಲಿ ಕೆರೆ ಕಟ್ಟಿಸಿಕೊಟ್ಟು ಜನಗಳಿಗೆ ಅನುಕೂಲ ಮಾಡಿಕೊಡಬೇಕು. ಮತ್ತು ಹೆಚ್ಚಿನ ಆರ್ಥಿಕ ವ್ಯವಸ್ಥೆಯನ್ನು ಮಾಡಿಕೊಡ ಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಮನೆ ಕಟ್ಟಿಸಿ ಕೊಡುವ ಯೋಜನೆ. ಹಳ್ಳಿಗಾಡಿನಲ್ಲಿ ವಾಸಕ್ಕೆ ಮನೆಗಳೇ ಇರುವುದಿಲ್ಲ. ಆದ್ದರಿಂದ ಹಳ್ಳಿಗಾಡಿನಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೋಸ್ಕರ ರೂರಲ್ ಡೆವಲಪ್‌ಮೆಂಟ್ ಹೌಸಿಂಗ್ ಬೋರ್ಡ್ ಎಂಬುದಾಗಿ ಸ್ಥಾಪನೆ ಮಾಡಿ ಮನೆಗಳನ್ನು ಕಟ್ಟಿಸಿಕೊಟ್ಟು ಹಳ್ಳಿಗಳು ಅಭಿವೃದ್ಧಿ ಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಪಟ್ಟಣದಲ್ಲಿ ವಾಸ ಮಾಡತಕ್ಕಂಥ ಜನ ಸ್ಲಮ್‌ಗಳೆಂದು ಏನು ಹೇಳುತ್ತಿದಾರೆ ಅದರಂತೆ ಪ್ರತಿಯೊಂದು ಹಳ್ಳಿಯೂ ಕೂಡ ಸ್ಲಮ್ಸ್‌ಗಳೆಂದು ಹೇಳಬಹುದು. ಏತಕ್ಕೆಂದರೆ ಹಳ್ಳಿ ಚೊಕ್ಕಟವಾಗಿ ಇರುವುದಿಲ್ಲ. ದಾರಿ ಸರಿ

ಯಾಗಿ ಇರುವುದಿಲ್ಲ. ಇಂತಹ ಕಷ್ಟಪರಿಸ್ಥಿತಿಯಲ್ಲಿ ಜನ ವಾಸ ಮಾಡುತ್ತಿದ್ದಾರೆ. ಹಳ್ಳಿಯ ಜನರು ಚೊಕ್ಕಟವಾಗಿ ವಾಸಮಾಡುವುದಕ್ಕೆ ಅನುಕೂಲಮಾಡಿಕೊಡಬೇಕು. ಒಳ್ಳೆಯ ವಾತಾವರಣದಲ್ಲಿ ನಾವು ಬೆಳೆಯಬೇಕೆಂಬ ಮನಸ್ಸು ಹಳ್ಳಿಯವರಲ್ಲಿ ಬರುವಂತ ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿನ ವಿಚಾರವಾಗಿ ಹೇಳುವುದಾದರೆ ಇನ್ನೂ ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ಅವಶ್ಯಕತೆ ಪೂರೈಸಿಲ್ಲ. ಕೆಲವು ಕಡೆ ಓಪನ್ ವೆಲ್ಸ್‌ಗಳನ್ನು ತೆಗೆಸಿದರು. ಅವು ಫೈಲ್ಯೂರ್ ಆಗಿವೆ. ಆದ್ದರಿಂದ ಹೆಚ್ಚಿಗೆ ಕೊಳವೆ ಬಾವಿಗಳನ್ನು ತೆಗೆಸಿ ನೀರನ್ನು ಒದಗಿಸಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕು.

ಇನ್ನು ಹೈನುಗಾರಿಕೆ ವಿಚಾರದಲ್ಲಿ ಹೇಳುವುದಾದರೆ, ಡೈರಿ ಡೆವಲಪ್‌ಮೆಂಟ್ ಹಳ್ಳಿಗಾಡಿನಲ್ಲಿ ಬೆಳೆಯಬೇಕಾದುದು ಸೂಕ್ತವೆಂದು ಕಾನೂನು ಹೇಳುತ್ತದೆ. ಹೈನುಗಾರಿಕೆ ವಿಚಾರದಲ್ಲಿ ಮೆಡಿಕಲ್ ಡಿಪಾರ್ಟ್‌ಮೆಂಟ್‌ನವರು ಪ್ರತಿಯೊಂದು ಹಳ್ಳಿಗಳಿಗೂ ಹೋಗಿ ಯಾವ ರೀತಿಯ ಅನುಕೂಲವನ್ನು ಮಾಡಿಕೊಡಬೇಕೆಂದು, ಯಾವ ದನಗಳನ್ನು ಕೊಡಬೇಕು. ಯಾವ ಕುರಿಗಳನ್ನು ಕೊಡಬೇಕು, ಯಾವ ಕೋಳಿಗಳನ್ನು ಕೊಟ್ಟರೆ ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆಂದು ತಿಳಿದು ಅಂತಹ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಶಾಲಾ ಕಟ್ಟಡಗಳ ವಿಚಾರವಾಗಿ ಹೇಳುವುದಾದರೆ, ಸರ್ಕಾರದವರು ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಸ್ಕೀಂ ಮಾಡಿದರು. ನಂತರ ಮಧ್ಯದಲ್ಲಿ ಪಂಚಾಯಿತಿಯವರು ತಾಲ್ಲೂಕು ಬೋರ್ಡ್‌ನವರು ಕಟ್ಟಿಸಿಕೊಡಬೇಕೆಂದು ಸ್ಕೀಂ ಮಾಡಿದರು. ಆ ರೀತಿ ತಿಳಿಸಿದ ನಂತರ ತೆಗೆದುಕೊಂಡಂತಹ ಕಟ್ಟಡಗಳು ಹಾಗೇ ಉಳಿದಿವೆ. ಕೆಲವಕ್ಕೆ ೮ ಸಾವಿರ ರೂಪಾಯಿಗಳವರೆಗೂ ಹಣ ಖರ್ಚಾಗಿದೆ. ಕಳೆದ ಮೂರು ವರ್ಷಗಳಿಂದಲೂ ಹಾಗೆಯೇ ಉಳಿದಿವೆ. ಆದ್ದರಿಂದ ಸರ್ಕಾರ ಅವುಗಳನ್ನು ತಾವೇ ವಹಿಸಿಕೊಂಡು ಹೆಚ್ಚಿನ ದುಡ್ಡನ್ನು ಕೊಟ್ಟು ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಅಭಿವೃದ್ಧಿ ಮಂಡಲಿಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಪಂಚಾಯಿತಿಯ ಛೇರ್ಮನ್ ಮತ್ತು ವೈಸ್ ಛೇರ್ಮನ್ ವಿಚಾರದಲ್ಲಿ ಕೆಲವರು ಕೋರ್ಟಿಗೆ ಹೋಗಿದ್ದರೂ ಕೂಡ ಅಂದರೆ ತಾಲ್ಲೂಕಿನಲ್ಲಿ ಟ್ರಿಬ್ಯೂನಲ್‌ಗಳು ಇರುವಂತೆ ಪಂಚಾತಿಗಳು ಇರುತ್ತವೆ. ಆದರೆ ಪಂಚಾಯಿತಿ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಅಧಿಕಾರ ಇರುವುದಿಲ್ಲ. ಹಳ್ಳಿಯ ಪಂಚಾಯಿತಿಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ತೀರ್ಮಾನಿಸಿದರೆ, ಅದನ್ನು ಇನ್ನೊಬ್ಬ ಸದಸ್ಯರು ಅದಕ್ಕೆ ಅಬ್ಜಕ್ಷನ್ ತೆಗೆದರೆ ಆಗ ಪಂಚಾಯಿತಿ ಅಧ್ಯಕ್ಷರು ಅದನ್ನು ಡಿಕ್ಲೇರ್ ಮಾಡುವುದಕ್ಕೆ ಅವಕಾಶ ಇಲ್ಲ. ಲ್ಯಾಂಡ್ ಟ್ರಿಬ್ಯೂನಲ್‌ಗಳು ಮಾಡಿ ಅವುಗಳಿಗೆ ಯಾವ ರೀತಿ ಅಧಿಕಾರವನ್ನು ಕೊಟ್ಟಿದ್ದೀರೋ ಅದೇ ರೀತಿ ಪಂಚಾಯಿತಿ ಅಧ್ಯಕ್ಷರಿಗೂ ಅಧಿಕಾರವನ್ನು ಕೊಡಬೇಕು. ಇಷ್ಟು ವಿಚಾರಗಳನ್ನು ಹೇಳವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ,

೨.೩೦ ಪಿ.ಎಂ.

†ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಮಾಯಕೊಂಡ).—ಮಾನ್ಯ ಅಧ್ಯಕ್ಷರೇ ಈ ದಿವಸ ನಮ್ಮ ಮಂತ್ರಿಗಳು ಈ ಸಭೆಯ ಮುಂದಿಟ್ಟಿರುವ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೆಲವು ಬೇಡಿಕೆಗಳ ಬಗ್ಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ನಾವು ಬಹಳ ಕೇಳುತ್ತೇವೆ. ಏನೆಂದರೆ.—

V.P. is the very base of democracy and it plays very important role in community programmes and rural development of the villages ಎಂದು; ಈ ಮಾತನ್ನು ನಾವು ಪದೆಪದೇ ಕೇಳುತ್ತೇವೆ. ಆದರೆ ಈ ಗ್ರಾಮ ಪಂಚಾಯಿತಿಗಳು ಯಾವ ದುಸ್ಥಿತಿಯಲ್ಲಿವೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. their financial position is going from bad to worse. ಎಂದರೆ ತಪ್ಪಾಗಲಾರದು. ನಿಮ್ಮ ಒಂದು ಬೇಡಿಕೆಯ ಮೇಜರ ಹೆಡ್ಡನಲ್ಲಿ ಅಂದರೆ ೭೧೪ರಲ್ಲಿ Rs. 8 lakhs mention is made regarding creation of remunerative assets I feel this too is a small figure. ನಮ್ಮ ರಾಜ್ಯದಲ್ಲಿರ ತಕ್ಕಂಥ ೮೪೧೧ ಗ್ರಾಮಪಂಚಾಯಿತಿಗಳಿಗೆ ಈ ರೀತಿ ೮ ಲಕ್ಷ ರೂಪಾಯಿಗಳನ್ನು ಇಟ್ಟಿರುವುದು ಬಹಳ

ಕಡಿಮೆ ಎಂದು ನನಗನ್ನಿಸುತ್ತದೆ. ಇದನ್ನು ಸಾಲ ಎಂದು ಪರಿಗಣಿಸುವುದಕ್ಕಿಂತ ಗ್ರಾಂಟ್ಸ್ ಎಂದು ಕನ್ಸಿಡರ್ ಮಾಡಿದರೆ ಇವುಗಳಿಗೆ ಇನ್ನೂ ಹೆಚ್ಚಿನ ಆದಾಯ ಬರದಂತೆ ಆಗುತ್ತದೆ. ಆದಕಾರಣ ಇದನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಈ ಮೊದಲು ಮಾತನಾಡಿದ ಮಾನ್ಯ ಸದಸ್ಯರು ತಾಲ್ಲೂಕ್ ಬೋರ್ಡ್ ರಸ್ತೆಗಳ ವಿಷಯ ಹೇಳಿದ್ದಾರೆ. ಕೆಲವು ರಸ್ತೆಗಳನ್ನು ಈಗ ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡಿದ್ದಾರೆ. ಆದರೆ ಇನ್ನೂ ಹೆಚ್ಚಿನ ರಸ್ತೆಗಳು ತಾಲ್ಲೂಕ್ ಬೋರ್ಡುಗಳ ವಶದಲ್ಲಿಯೇ ಇವೆ. ಈ ರಸ್ತೆಗಳಿಗೆ ಅಸ್ಫಾಲ್ಟಿಂಗ್ ಮಾಡಿಸುವುದಿರಲಿ ಮಣ್ಣನ್ನು ಹಾಕಿಸಲೂ ಸಹ ಹಣವಿಲ್ಲ. ಈ ದೃಷ್ಟಿಯಿಂದ ತಾಲ್ಲೂಕ್ ಬೋರ್ಡುಗಳಿಗೆ ಈ ಬಾಬಿಗಾಗಿ ಹೆಚ್ಚಿನ ಹಣ ಕೊಟ್ಟು ಈ ರಸ್ತೆಗಳನ್ನು ಇಂಪ್ರೂವ್ ಮಾಡುವುದಕ್ಕೆ ತಾವು ಸಹಕಾರ ನೀಡಬೇಕೆಂದು ಹೇಳುತ್ತೇನೆ. Good communication is a sign of progress ಎಂದು ಹೇಳುತ್ತಾರೆ. ಈ ಮಾತನ್ನು ತಾವು ಗಮನದಲ್ಲಿಟ್ಟುಕೊಂಡು ಹೆಚ್ಚಿನ ಹಣ ಕೊಡುತ್ತೀರೆಂದು ನಾನು ಭಾವಿಸುತ್ತೇನೆ.

ಇನ್ನು ಗ್ರಾಮಗಳಿಗೆ ನೀರು ಸರಬರಾಜು ಸಹ ಬಹಳ ಮುಖ್ಯವಾದುದು. ನಮ್ಮ ಸರ್ಕಾರ ಓಪನ್ ವೆಲ್ಸ್‌ಗೆ ಹೆಚ್ಚಿನ ಆದ್ಯತೆ ಕೊಡದೆ ಪ್ರೊಟೆಕ್ಟೆಡ್ ವಾಟರ್ ಸಪ್ಲೈಗೆ ಹೆಚ್ಚಿನ ಆದ್ಯತೆ ಕೊಟ್ಟು ಈ ವರ್ಷ ಇದಕ್ಕಾಗಿ ೫ ಕೋಟಿ ರೂ.ಗಳನ್ನು ತೆಗೆದಿಟ್ಟಿದೆ. ಇದಕ್ಕಾಗಿ ನಾನು ನಮ್ಮ ಸರ್ಕಾರವನ್ನು ಅಭಿನಂದಿಸುತ್ತೇನೆ. ಬೋರ್‌ವೆಲ್ಸ್‌ನ್ನು ಸಿಂಕ್ ಮಾಡುತ್ತಾರೆ. ರಿಗ್ ಮಿಷನ್ ಬರುತ್ತದೆ, ಆದರೆ ಒಂದು ತಿಂಗಳು, ಎರಡು ತಿಂಗಳಾದರೂ ಬೋರ್‌ವೆಲ್ಸ್‌ಗೆ ಪಂಪ್‌ನ್ನು ಫಿಕ್ಸ್ ಮಾಡುವುದಿಲ್ಲ, ಒಂದು ಕಡೆ ಹಳ್ಳಿಯ ಜನರು ನೀರು ಬಂತು ಎಂದು ಸಂತೋಷ ಪಡುತ್ತಾರೆ. ಮತ್ತೊಂದು ಕಡೆ ನೀರು ಸರಬರಾಜಾಗುವುದು ನಿಧಾನವಾದರೆ ಬೇಜಾರು ಮಾಡಿಕೊಳ್ಳುತ್ತಾರೆ. ಆದಕಾರಣ ಪಂಪನ್ನು ಫಿಕ್ಸ್ ಮಾಡುವುದು ಮತ್ತು ಅದಕ್ಕೆ ಬೆಡ್ ಕಟ್ಟುವ ಕೆಲಸವನ್ನು ೧೫ ಇಲ್ಲವೇ ೨೦ ದಿವಸಗಳಲ್ಲಿ ಮಾಡಿ ಮುಗಿಸುವಂತಹ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಎಸ್.ಆರ್ ಡಬ್ಲ್ಯು.ಸ್ಕೀಮಿನಲ್ಲಿ ಪಂಪ್ಸ್ ಬಹಳ ಕೆಡುತ್ತವೆ. ಎಲ್ಲ ಕಡೆಯೂ ಈ ರೀತಿ ಕೆಡುತ್ತಿವೆ ಎನ್ನುವ ದೂರು ಇದೆ. ಎಷ್ಟೋ ಕಡೆಗಳಲ್ಲಿ ಕೆಟ್ಟು ವರ್ಷಗಟ್ಟಲೆಯಾದರೂ ರಿಪೇರಿಯಾಗುವುದಿಲ್ಲ. ಇದು ರಿಪೇರಿಯಾಗದೆ ನೀರು ಸಿಗುವುದಿಲ್ಲ. ನೀರು ಸಿಗದಿದ್ದರೂ ಸಹ ಅಲ್ಲಿನ ಜನತೆ ವಿದ್ಯುಚ್ಛಕ್ತಿ ದರವನ್ನು ಮಿನಿಮಮ್ ಕೊಡಲೇ ಬೇಕಾಗುತ್ತದೆ. ಎಷ್ಟೋ ಹಳ್ಳಿಗಳಲ್ಲಿ ಈ ಸ್ಕೀಮಿನಲ್ಲಿ ಸಾವಿರಾರು ರೂ.ಗಳಷ್ಟು ಬಾಕಿ ನಿಂತಿರುವ ಹಣವನ್ನು ಕಟ್ಟಬೇಕಾಗಿದ್ದು, ಆ ಹಣವನ್ನು ಕಟ್ಟುವುದೇ ಬೇಡ ಎನ್ನುವ ರೀತಿಯಲ್ಲಿ ನಮ್ಮ ಹಳ್ಳಿಯ ಜನರು ಮಾತನಾಡುತ್ತಿದ್ದಾರೆ. ಆದಕಾರಣ ಪಂಪ್‌ಗಳು ಕೆಟ್ಟಾಗ, ಅವುಗಳನ್ನು ಬೇಗನೆ ರಿಪೇರಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈಗ ಒಂದು ಸಾವಿರ ಜನಸಂಖ್ಯೆ ಇರುವ ಹಳ್ಳಿಗಳಿಗೆ ಮಾತ್ರ ಈ ಎಸ್.ಆರ್.ಡಬ್ಲ್ಯು.ಸ್ಕೀಮನ್ನು ಮಂಜೂರು ಮಾಡುತ್ತಿದ್ದೀರಿ. ಇದರ ಜೊತೆಗೆ ಒಂದು ಮಿನಿ ಸ್ಕೀಮನ್ನು ಹಾಕಿಕೊಂಡು ೫೦೦–೬೦೦ ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಲ್ಲಿಯೂ ಸಹ ಬಾವಿಗಳಿಗೆ ಪಂಪ್‌ಗಳನ್ನು ಅಳವಡಿಸಿ, ಒಂದು ಇಲ್ಲವೇ ಅರ್ಧ ಎಚ್.ಪಿ.ಯ ಸಣ್ಣ ಟ್ಯಾಂಕ್‌ಗಳನ್ನು ಕಟ್ಟಿಸಿ, ಪೈಪ್‌ಗಳನ್ನು ಎಳೆಯುವುದಕ್ಕೆ ಬದಲು ಒಂದೇ ಕಡೆ ೪–೫ ನಲ್ಲಿಗಳನ್ನು ಹಾಕಿ, ಅದರ ಮೂಲಕ ಜನರು ನೀರನ್ನು ಪಡೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮಹಿಳಾ ಮಂಡಲಗಳಿಗೆ ಹೆಚ್ಚಿನ ಆದ್ಯತೆ ಕೊಡಲಾಗುತ್ತಿದೆ. ಸೆಂಟ್ರಲ್ ಗೌರ್ನ್ಮೆಂಟ್ ಸಹಾಯದಿಂದ ೧೦೦ ಮಹಿಳಾ ಮಂಡಲಿಗಳ ಆಫೀಸ್ ಬೇರರ್ಸ್‌ಗೆ ಟ್ರೈನಿಂಗ್ ಕೊಟ್ಟಿದ್ದೇವೆಂದು ಹೇಳಿದ್ದೀರಿ, ಇದು ಸಂತೋಷದ ವಿಷಯ. ಆದರೆ ಈಗ ಸಧ್ಯಕ್ಕೆ ಈ ಮಹಿಳಾ ಮಂಡಲಿಗಳಲ್ಲಿ ಹೊಲಿಗೆ ತರಗತಿ ಮತ್ತು ಕುಕಿಂಗ್ ಡೆಮಾನ್ಸ್‌ಟ್ರೇಷನ್ ಬಿಟ್ಟರೆ ಬೇರೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಇನ್ನುಮುಂದೆ ಈ ಮಹಿಳಾ ಮಂಡಲಗಳಲ್ಲಿ ಸೋಷಿಯೋ-ಎಕನಾಮಿಕ್ ಸ್ಕೀಮಿನ ಮೂಲಕ ಪೌಲ್ಟ್ರಿ, ಡೈರಿ,ಹಾರ್ಟಿಕಲ್ಚರ್, ಹ್ಯಾಂಡಿಕ್ರಾಫ್ಟ್ ಮುಂತಾದ ವಿಷಯಗಳಲ್ಲಿ ಹೆಣ್ಣುಮಕ್ಕಳಿಗೆ ಟ್ರೈನಿಂಗ್ ಕೊಡಬೇಕು. ಜೊತೆಗೆ ಸೋಷಿಯಲ್ ವೆಲ್‌ಫೇರ್ ಬೋರ್ಡಿನ ಮೂಲಕ ಈ ಸ್ಕೀಮುಗಳನ್ನು ತೆಗೆದುಕೊಳ್ಳಲು ಹೆಣ್ಣುಮಕ್ಕಳಿಗೆ ಹಣವನ್ನು ಸಾಲದ ರೂಪದಲ್ಲಿ ಕೊಟ್ಟು ತನ್ಮೂಲಕ ಅವರು ಹಣ ಸಂಪಾದನೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನಿರುದ್ಯೋಗದ ಸಮಸ್ಯೆಯ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಹಿಂದಿನ ವಾರ ಮಾನ್ಯ ಕಂದಾಯ ಸಚಿವರು ನಮಗೆಲ್ಲರಿಗೂ ಒಂದು ನೋಟನ್ನು ಕಳುಹಿಸಿದ್ದಾರೆ. ಅದರಲ್ಲಿ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮು ಒಂದನ್ನು ಹಾಕಿಕೊಳ್ಳಬೇಕು, ಏಕೆಂದರೆ, Directive Principles of Constitution ಪ್ರಕಾರ Right to work ಎಂದು ಇರುವುದರಿಂದ, ಪ್ರತಿಯೊಬ್ಬ ಗಟ್ಟಿಮುಟ್ಟಾದ ಮನುಷ್ಯನಿಗೆ ಕೆಲಸ ಒದಗಿಸುವುದು ಒಳ್ಳೆಯದು ಮತ್ತು ಇದು ಸರ್ಕಾರದ ಒಂದು ನೀತಿ ಎಂಬುದಾಗಿ ಆ ನೋಟಿನಲ್ಲಿ ತಿಳಿಸಿದ್ದಾರೆ. ಈ ವಿಷಯವನ್ನು ಎಲ್ಲ ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದಕ್ಕಾಗಿ ಮಾನ್ಯ ಕಂದಾಯ ಮಂತ್ರಿಗಳಿಗೆ ನನ್ನ ಅಭಿನಂದನೆಯನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ. ಈಗ ರೂರಲ್ ಎಂಪ್ಲಾಯ್‌ಮೆಂಟ್ ಸ್ಕೀಮಿನಲ್ಲಿ,ಡಿ ಪಿಎ ಪಿ. ರೂರಲ್ ಡೆವಲಪ್‌ಮೆಂಟ್ ಸ್ಕೀಮು, ವರ್ಲ್ಡ್ ಫುಡ್ ಪ್ರೊಗ್ರಾಮು ಕಾರ್ಯಗತದಲ್ಲಿದ್ದರೂ ಸಹ ಕೆಲವಾರು ಜಿಲ್ಲೆಗಳಲ್ಲಿ ಮತ್ತು ಕೆಲವಾರು ತಾಲ್ಲೂಕ್‌ಗಳಲ್ಲಿ ಮಾತ್ರ ಇದರ ಒಂದು ಪ್ರಯೋಜನ ಜನರಿಗೆ ಸಿಗುತ್ತಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗದ ಸಮಸ್ಯೆ ಜಾಸ್ತಿ ಇದೆ. ಜೊತೆಗೆ ಅವಿದ್ಯಾವಂತ ನಿರುದ್ಯೋಗಿಗಳೇ ಜಾಸ್ತಿ ಇದ್ದಾರೆ. ಇವರು ಒಂದು ತಾಲ್ಲೂಕು ಇಲ್ಲವೇ ಒಂದು ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿಯೇ ಇವರ ಸಮಸ್ಯೆಯನ್ನು ನಾವು ನೋಡುತ್ತಿದ್ದೇವೆ. ಇವರಿಗೆ ಯಾವ ಆಸ್ತಿಯೂ ಇರುವುದಿಲ್ಲ. ನಾನು ಕೆಲವು ಸಲ ಹಳ್ಳಿಗಳಿಗೆ ಭೇಟಿ ಕೊಟ್ಟು ನೋಡಿದಾಗ, ಅಲ್ಲಿರತಕ್ಕಂಥ ಸೋಮಾರಿಕಟ್ಟೆಯ ಮೇಲೆ ೨೦ ರಿಂದ ೪೫ ವರ್ಷ ವಯಸ್ಸಾಗಿರುವಂತಹವರು ಅಂದರೆ ಗಟ್ಟಿ ಮುಟ್ಟಾದಂಥವರು ಮಧ್ಯಾಹ್ನ ೧೨ ಗಂಟೆಯವರೆಗೂ ಮಲಗಿಕೊಂಡು ನಿದ್ರೆ ಮಾಡುವುದನ್ನು ನೋಡಿ, ಅವರನ್ನು ಎಷ್ಟೋ ಸಲ ನಿಮಗೆ ಏನೂ ಕೆಲಸ ಇಲ್ಲವೇ ಎಂದು ಕೇಳಿದ್ದೇನೆ. ಆಗ ಅವರು ನಾವೇನೋ ಕೆಲಸ ಮಾಡುತ್ತೇವೆ, ಆದರೆ ಕೆಲಸ ಸಿಗುವುದಿಲ್ಲವೆಂದು ಅವರು ಹೇಳಿದರು. ಅಫ್ ಸೀಜನ್‌ನಲ್ಲಿ ಯಾರೂ ನಮ್ಮನ್ನು ಕೆಲಸಕ್ಕೆ ಕರೆಯುವುದಿಲ್ಲವೆಂದು ಅವರು ಹೇಳಿದರು. ಯಾವಾಗ ಇವರಿಗೆ ಹಳ್ಳಿಗಳಲ್ಲಿ ಕೆಲಸ ಸಿಗುವುದಿಲ್ಲವೋ, ಆಗ ಅವರು ಪಟ್ಟಣಗಳಿಗೆ ವಲಸೆ ಬಂದು ಸ್ಲಮ್‌ಗಳನ್ನು ಕ್ರಿಯೇಟ್ ಮಾಡುತ್ತಾರೆ. ಇವೊತ್ತು ನಾವು ಸ್ಲಮ್ ಕ್ಲಿಯರೆನ್ಸ್‌ಗಾಗಿ ಕೋಟ್ಯಾಂತರ ರೂಗಳನ್ನು ಖರ್ಚು ಮಾಡುತ್ತಿದ್ದೇವೆ. ಇದೇ ಹಣವನ್ನು ಹಳ್ಳಿಗಳಲ್ಲಿರತಕ್ಕಂಥ ನಿರುದ್ಯೋಗಿಗಳಿಗೆ ಕೆಲಸ ಒದಗಿಸಲು ಉಪಯೋಗಿಸಿದ್ದೇ ಆದರೆ ನಿಜವಾಗಿಯೂ ಈ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಬೇಕಾಗುವುದಿಲ್ಲ. ಮತ್ತು ಈ ಸ್ಲಮ್ ವಿಚಾರವನ್ನು ಸರ್ಕಾರ ಯೋಚನೆ ಮಾಡಬೇಕಾಗಿರುವುದಿಲ್ಲ. ಆದಕಾರಣ ಹಳ್ಳಿಗಳಲ್ಲಿರತಕ್ಕಂಥ ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸ ಒದಗಿಸುವುದಕ್ಕೆ ಸರ್ಕಾರ ಮೊದಲು ಆದ್ಯತೆ ಕೊಟ್ಟು, ಪ್ಲಾನ್ ಅಥವಾ ನಾನ್-ಪ್ಲಾನ್ ಸ್ಕೀಮಿನಲ್ಲಿ ಇವರುಗಳಿಗೆ ಅವರವರ ಸ್ಥಳಗಳಲ್ಲಿಯೇ ಏನೇನು ಕೆಲಸಗಳನ್ನು ಕೊಡುವುದಕ್ಕೆ ಸಾಧ್ಯವಿದೆ ಎಂಬುದನ್ನು ನೋಡಬೇಕು. ಮೀಡಿಯಮ್ ಅಂಡ್ ಮೈನರ್ ಇರಿಗೇಷನ್ ಸ್ಕೀಮಿನಲ್ಲಿ, ರೋಡ್ಸ್ ವರ್ಕ್ಸ್‌ನಲ್ಲಿ, ರೂರಲ್ ಇಂಡಸ್ಟ್ರಿಗಳಲ್ಲಿ ಮತ್ತು ಗಿಡಗಳನ್ನು ಬೆಳೆಸುವ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಂಡು ಇವರಿಗೆ ಕೆಲಸಕೊಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಮಹಾರಾಷ್ಟ್ರದಲ್ಲಿ ಒಂದು ಕಾನೂನು ಮಾಡಿದ್ದಾರೆಂದು ನಮ್ಮ ಸ್ನೇಹಿತರು ಸಹ ಹೇಳಿದ್ದಾರೆ. ಅದರಂತೆ ಇಲ್ಲಿಯೂ ಒಂದು ಕಾನೂನು ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ. ಮಧ್ಯಪ್ರದೇಶದಲ್ಲಿ ಇತ್ತೀಚೆಗೆ ಒಂದು ಆರ್ಡಿನೆನ್ಸ್ ಹೊರಡಿಸಿ ಹರಿಜನ ಮತ್ತು ಗಿರಿಜನರು ಹಾಗೂ ಹಿಂದುಳಿದ ವರ್ಗಗಳಿಗೆ ವಿಲೇಜ್ ಪಂಚಾಯತ್ ಸರ್‌ಪಂಚ್ ಹುದ್ದೆಗೆ ರಿಜರ್‌ವೇಷನ್ ಮಾಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಮಾಡಬೇಕೆಂದು ಹೇಳಿ 'ಇಷ್ಟು' ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್.ಡಿ. ಚೌಡಯ್ಯ (ಕೆರೆಗೋಡು).—ಮಾನ್ಯ ಅಧ್ಯಕ್ಷರೇ ಇಂದು ಸಮುದಾಯ, ಅಭಿವೃದ್ಧಿ ಯೋಜನೆ ಮತ್ತು ಪಂಚಾಯತಿರಾಜ್ ಬೇಡಿಕೆ ಏನು ಇದೆ ಅದನ್ನು ನಾನು ಬಹಳ ತೀವ್ರವಾಗಿ ವಿರೋಧಿಸುತ್ತೇನೆ. ಈ ಒಂದು ಬೇಡಿಕೆ ಪ್ರಗತಿದಾಯಕವಾಗಿಲ್ಲ. ಈ ದೇಶದಲ್ಲಿ ಪಂಚಾಯತಿರಾಜ್ಯ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಬದಲಾವಣೆ ಮಾಡಬೇಕು. ಹಳ್ಳಿಗಾಡಿನಲ್ಲಿ ಒಂದು ಹೊಸ ಹುರುಪನ್ನು ತುಂಬಬೇಕು. ಹಳ್ಳಿಗಳ ಸರ್ವಾಂಗೀಣ ಅಭಿವೃದ್ಧಿ ಆಗಬೇಕಾದರೆ ಒಂದು ಹೊಸ ಕಾಯಿದೆಯ ವ್ಯವಸ್ಥೆಯನ್ನು ತರಬೇಕೆಂದು ಹೇಳುತ್ತೇನೆ. ದಿವಂಗತ ಪಂಡಿತ್ ಜವಹಾರಲಾಲ್ ನೆಹರೂರವರು ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ೧೯೫೭-೫೮ರಲ್ಲಿ ಅಂದಿನ ಗುಜರಾತಿನ ಮುಖ್ಯ ಮಂತ್ರಿಗಳಾದ ಬಲವಂತರಾವ್ ಮೆಹತಾರವರ ಆಯೋಗವನ್ನು ನೇಮಕಮಾಡಿತ್ತು. ಇಡೀ ರಾಷ್ಟ್ರಾದ್ಯಂತ ಪ್ರವಾಸಮಾಡಿ ಬಹಳ ಕಷ್ಟಪಟ್ಟು, ಹೆಚ್ಚಿನ ಮುತುವರ್ಜಿ ವಹಿಸಿ ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟು ತನ್ನಮೂಲಕ ಆಯೋಗದ ಸಲಹೆಗಳನ್ನು ಅಳವಡಿಸಿಕೊಂಡು ೧೯೫೯ರಲ್ಲಿ ಕರ್ನಾಟಕದಲ್ಲಿ ಪಂಚಾಯತಿ

ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳ ಕಾಯಿದೆಯನ್ನು ತಿದ್ದುಪಡಿ ಮಾಡಿ ೧೯೬೦ರಲ್ಲಿ ಹೊಸದಾಗಿ ಪಂಚಾಯತಿರಾಜ್ಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಆಮೇಲೆ ತಾಲ್ಲೂಕು ಬೋರ್ಡ್ ಎಂದು ರಚನೆಯಾದವು. ಅನಂತರ ಪಂಚಾಯತಿ ಚೇರ್‌ಮನ್ ಹಾಗೂ ವೈಸ್ ಚೇರ್‌ಮನ್, ಕೆಲವು ಭಾಗಗಳಲ್ಲಿ ಪಂಚ್ ಹಾಗೂ ಸರ್‌ಪಂಚ್ ಎಂದು ಇರಬಹುದು. ಆದರೆ ಉದ್ದಿಶ್ಯ ಧ್ಯೇಯ ಎಲ್ಲವೂ ಒಂದೇ ಇಡೀ ದೇಶಾದ್ಯಂತ, ೧೯೬೦ ರಿಂದ ೧೯೬೮ರವರೆಗೂ ಪಂಚಾಯತ್ ರಾಜ್ಯ ಹಾಗೂ ತಾಲ್ಲೂಕು ಬೋರ್ಡ್ ಇದೆಲ್ಲವೂ ಹಳ್ಳಿಗಳ ಮಟ್ಟದಲ್ಲಿ ಕೆಲಸ ಮಾಡುತ್ತಿವೆ. ಅದರಲ್ಲೂ ಬಹಳ ಚೆನ್ನಾಗಿದೆ. ಆದರೆ ತಾಲ್ಲೂರು ಬೋರ್ಡುಗಳು ಜನ ಮೆಚ್ಚುವಂತಹ ರೀತಿಯಲ್ಲಿ ಕೆಲಸಮಾಡುತ್ತಾ ಇವೆ. ಆದರೆ ಪಂಚಾಯತಿಗಳಲ್ಲಿ ಕೆಲಸಮಾಡತಕ್ಕ ಕಾರ್ಯಕರ್ತರು ಸಾಕಷ್ಟು ಇಲ್ಲದೆ ಹೋದರೂ ತಕ್ಕಮಟ್ಟಿಗೆ ಇದ್ದಾರೆ. ಆದರೆ ಇದರಲ್ಲಿ ಬಹುಮುಖ್ಯವಾದ ಪಿಡುಗು ಹಾಗೂ ದೋಶವೆಂದರೆ ಪಂಚಾಯತಿಗಳಲ್ಲಿ ಕೆಲಸಮಾಡತಕ್ಕ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸಾಕಷ್ಟು ವಿದ್ಯಾವಂತರಾಗಿರುವುದಿಲ್ಲ ತನ್‌ಮೂಲಕವಾಗಿ ಅದಕ್ಕೆ ನಿಯಮಾವಳಿಗಳು ಇರುವುದಿಲ್ಲ ಅಲ್ಲಿ ಸ್ಥಳೀಯ ಜನರನ್ನು ಹೊಂದಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ಒಂದು ಕಾಯಿದೆ ಆವಶ್ಯಕ ಹಾಗೂ ಟ್ಯಾಕ್ಸ್ ಹಾಕಬೇಕಾದರೆ ಯಾವರೀತಿ, ಯಾವ ಆದಾಯದ ಮೇಲೆ ಹಾಕಬೇಕು ಎನ್ನುವುದಿಲ್ಲ. ಪಂಚಾಯತಿಗಳಲ್ಲಿ ಕಳೆದ ೮೦ ವರ್ಷಗಳಲ್ಲಿ ನಾವು ನೋಡಿದ್ದೇ ಆದರೆ ಜನತಾ ಪ್ರತಿನಿಧಿಗಳು ಮನಸ್ಸಿಗೆ ಒಪ್ಪುವಂತೆ ಮಾಡತಕ್ಕಂಥಾದ್ದಕ್ಕೆ ಆಗಲೀ ಬೇಕಾದರೆ ೨ ಮುಖ್ಯ ಕಾರ್ಯಗಳು ಆಗಬೇಕು. ಮೊದಲನೆಯದು ಪೂರ್ಣಕಾಲ ಕೆಲಸ ಮಾಡತಕ್ಕಂಥ ಕಾರ್ಯದರ್ಶಿಗಳು ಹಾಗೂ ಸರಿಯಾದ ಸಂಪನ್ಮೂಲಗಳು ಇರಬೇಕು. ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ಹೊರತು ಅಲ್ಲಿಯ ಅಭಿವೃದ್ಧಿ ಕಾರ್ಯಗಳು ಸುಗಮವಾಗುವುದಿಲ್ಲ. ತಾಲ್ಲೂಕು ಬೋರ್ಡ್ ಬಗ್ಗೆ ಹೇಳುವುದಾದರೆ ಅಲ್ಲಿ ಸಾಕಷ್ಟು ಸಿಬ್ಬಂಧಿ ಇದೆ. ಅದರಲ್ಲಿ ಬಹು ಮುಖ್ಯವಾಗಿ ಕೊರತೆಯೆಂದರೆ ಸಂಪನ್ಮೂಲ. ೧೯೬೩ ರಿಂದ ೬೮ರವರೆಗೆ ನಾನು ತಾಲ್ಲೋಕು ಬೋರ್ಡ್ ಅಧ್ಯಕ್ಷನಾಗಿದ್ದೆ. ಆ ಕಾಲದಲ್ಲಿ ಜನಗಳ ಅದೃಷ್ಟವೋ ಏನೋ ಸರ್ಕಾರದಿಂದ ೧೯೬೦-೬೧ರಲ್ಲಿ ಅತ್ಯುತ್ತಮ ಕೆಲಸ ಮಾಡಿದೆ ಎಂದು ನಮ್ಮ ಮಂಡ್ಯಾ ತಾಲ್ಲೋಕು ಅಭಿವೃದ್ಧಿ ಮಂಡಲಿಗೆ ಬಹುಮಾನವಾಗಿ ೧೦ ಸಾವಿರ ರೂಪಾಯಿ ಕ್ಯಾಷ್ ಅವಾರ್ಡ್ ಕೊಟ್ಟಿದ್ದಾರೆ. ಈ ವಿಷಯ ಏತಕ್ಕೆ ಹೇಳುತ್ತೇನೆಂದರೆ ನಮ್ಮ ರಾಜ್ಯದಲ್ಲಿ ೧೭೬ ತಾಲ್ಲೂಕುಬೋರ್ಡುಗಳಲ್ಲಿ ಬಹುತೇಕ ಕಾಂಗ್ರೆಸ್ (ಐ) ಪಕ್ಷದವರೇ ಬಂದಿದ್ದಾರೆ. ಆದ್ದರಿಂದ ಈಗ ಅದರ ಸರ್ವಾಂಗೀಣ ಅಭಿವೃದ್ಧೀ ಆಗಬೇಕು. ಜನತೆಯ ಪ್ರತಿನಿಧಿಗಳು ಕೆಲಸ ಮಾಡತಕ್ಕಂಥ ಒಳ್ಳೆಯ ವಿದ್ಯಾವಂತರು ಮುಂದೆ ಮುಂದೆ ಬರುತ್ತಾ ಇದ್ದಾರೆ. ನಾವು ಅನೇಖ ಸಮ್ಮೇಳನಗಳಲ್ಲಿ ಹೇಳಿಕೊಂಡು ಬರುತ್ತಾ ಇದ್ದೇವೆ. ೧೯೬೩-೬೪ರಲ್ಲಿ ಮಾನ್ಯ ಕೊಂಡಜ್ಜಿ ಬಸಪ್ಪನವರ ನೇತೃತ್ವದಲ್ಲ ಅಂದಿನ ಸರ್ಕಾರ ಒಂದು ನಿಯೋಗವನ್ನು ರಚನೆ ಮಾಡಿದ್ದರು. ಆ ನಿಯೋಗ ಅನೇಕ ಹಳ್ಳಿಗಳಲ್ಲಿ ಹೋಗಿ ಅಲ್ಲಿ ಖಾಸಗಿಯವರನ್ನು ಭೇಟಿ ಮಾಡಿ ವಿಷಯ ತಿಳಿದು ಒಂದು ವರಧಿಯನ್ನು ಕೂಡಾ ತಯಾರು ಮಾಡಿ ಕೊಟ್ಟರು. ಆದರೆ ಅದು ಇವತ್ತಿನದಿವಸ ಎಲ್ಲಿ ಇದೆಯೆಂದು ಯಾರಿಗೂ ಗೊತ್ತಿಲ್ಲ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಸಂಪನ್ಮೂಲಗಳು ಇಲ್ಲದ ಈ ಬಡ್ಜೆಟ್ ಬೇಡಿಕೆಯನ್ನು ನೋಡಿದ್ದೇವೆ ಆದರೆ ನಾನು ಮೂರುವರೆ ಕೋಟಿ ಜನತೆಯ ಪರವಾಗಿ ಹೇಳುವುದಾದರೆ ಸುಮಾರು ಶೇಕಡ ೭೫ರಿಂದ ೮೬ವರೆಗೆ ಹಳ್ಳಿಗಾಡಿನಲ್ಲಿ ಜನರು ವಾಸಿಸುತ್ತಿದ್ದಾರೆ. ಅದಕ್ಕೋಸ್ಕರವೇ ಈ ಬೇಡಿಕೆಯನ್ನು ಚರ್ಚೆ ಮಾಡುವುದಕ್ಕೆ ಮೊದಲೇ ನಾವು ಅವರ ಹಿತಾಸಕ್ತಿಯ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಅದಕ್ಕೆ ಸಂಪನ್ಮೂಲದ ಸಿಂಹಪಾಲು ಇದ್ದರೂ ಕೂಡ ಪಂಚಾಯತಿ ಹಾಗೂ ತಾಲ್ಲೋಕು ಬೋರ್ಡುಗಳ ಸರ್ವಾಂಗೀಣ ಅಭಿವೃದ್ಧಿಗೆ ಸಾಕಾಗುವುದಿಲ್ಲವೆಂದು ಜನತಾ ಪ್ರತಿನಿಧಿಗಳು ಪ್ರತಿಭಟಿಸಬೇಕಾಗುತ್ತದೆ. ನಾನು ಅದಕ್ಕೋಸ್ಕರವೇ ಖಂಡತುಂಡವಾಗಿ ಹೇಳಬೇಕಾಗಿದೆ.

ಇನ್ನು ಹಳ್ಳಿಗಳಲ್ಲಿ ಲ್ಯಾಂಡ್ ರೆವೆನ್ಯೂ ಬಾಬಿನಿಂದ ವಸೂಲು ಆಗುತ್ತಿರುವುದನ್ನೆಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಬೋರ್ಡ್‌ಗಳಿಗೆ ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ? ಆದರೆ ಆದರಲ್ಲಿ ವಾಟರ್ ಸಪ್ಲೈಸ್ ಕೊಡುತ್ತಿದ್ದಾರೆ. ಆದರೆ ಪಂಚಾಯತಿಗೆ ಒಂದು ಗೈಡ್‌ಲೈನ್ ಇಲ್ಲ. ೪-೫ ವರ್ಷಗಳಿಂದ ಲ್ಯಾಂಡ್ ರೆವೆನ್ಯೂ ಕಲೆಕ್ಷನ್ ಹಣವನ್ನು ಕೊಡುತ್ತಿದ್ದೀರಿ. ಆದರೆ ಕಳೆದ ೫-೬ ವರ್ಷಗಳ ಇತಿಹಾಸವನ್ನು ನೋಡಿದರೆ ಒಂದು ವರ್ಷ ಬರಗಾಲ ಬಂದಾಗ ಲ್ಯಾಂಡ್ ರೆವೆನ್ಯೂ ವಸೂಲು ಮಾಡುವುದನ್ನು ನಿಲ್ಲಿಸಿದ್ದೀರಿ ಅಷ್ಟೆ. ಕಂದಾಯ ರೆವಿಷನ್ ಮಾಡಿದ್ದೀರಿ? ಆದರೆ ತಾಲ್ಲೋಕು ಬೋರ್ಡುಗಳಿಗೆ ವಸೂಲಿ ದ ಸಿಂಹಪಾಲು ಪಂಚಾಯತಿಗಳಿಗೆ ಬರತಕ್ಕಂಥ ಸ್ವಲ್ಪಭಾಗ ಅವರಿಗೆ ಹೋಗುತ್ತಿದೆ. ಆದ್ದರಿಂದ ಇವತ್ತಿನದಿವಸ ಒಂದು ರೂಪಾಯಿ, ಎಂಟು ಆಣೆ ಹಾಗೂ ನಾಲ್ಕು ಆಣೆ ಬರುತ್ತಾ ಇದೆ. ಆದ್ದಂದ ನಾನು ಸರ್ಕಾರಕ್ಕೆ

ಹೇಳುತ್ತೇನೆ. ಪಂಚಾಯತಿಗಳಲ್ಲಿ ಒಂದು ಸಾವಿರ ಜನಸಂಖ್ಯೆ, ಅಥವಾ ಎರಡೂವರೆ ಸಾವಿರ ಜನಸಂಖ್ಯೆ ಇರುವ ಕಡೆ ಹೆಚ್ಚಿನ ಸಂಪನ್ಮೂಲಗಳು ಇಲ್ಲ. ಆದ್ದರಿಂದ ಇದರ ಬಗ್ಗೆ ವಿಷದವಾಗಿ ಹೇಳಬೇಕೆಂದಿದ್ದೇನೆ ಮಾನ್ಯ ಮಂತ್ರಿಗಳು ಅವರಿಗೆ ಇದರಲ್ಲಿ ಬಹಳ ಆಸ್ತೆ ಇದೆಯೆಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರ ನನಗೆ ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ತಮಗೆ ಆಸಕ್ತಿ ಇದ್ದ ಪಕ್ಷದಲ್ಲಿ, ತಮ್ಮಲ್ಲಿ ನಾನು ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ತಾವು ಒಂದು ಸಮಿತಿಯನ್ನು ರಚನೆ ಮಾಡಿ ಅದರ ಜೊತೆಗೆ ಈ ಸದನದಲ್ಲಿ ಕೆಲಸ ಮಾಡಿರತಕ್ಕ ಅನೇಕ ಜನ ಸದಸ್ಯರು ಯಾರು ತಾಲ್ಲೂಕು ಬೋರ್ಡ್ ಅಧ್ಯಕ್ಷರುಗಳಾಗಿ ಕೆಲಸ ಮಾಡಿರುತ್ತಾರೋ ಅವರನ್ನು ಸೇರಿಸಿಕೊಂಡು, ಅವರ ಸಲಹೆಗಳನ್ನು ತೆಗೆದುಕೊಂಡು ಈ ಸಮಸ್ಯೆಯನ್ನು ನಾವು ಪರಿಹರಿಸಬೇಕಾಗುತ್ತದೆ. ಬಹುಶಃ ಪಂಚಾಯತಿಗಳಿಗೆ ಬಹು ಮುಖ್ಯವಾಗಿರತಕ್ಕ ಸಮಸ್ಯೆ ಇದಕ್ಕೆ ಸಂಪನ್ಮೂಲಗಳನ್ನು ಒದಗಿಸತಕ್ಕದ್ದು. ಯಾವ ತಾಲ್ಲೂಕು ಬೋರ್ಡು ಆಗಲೀ, ಪಂಚಾಯಿತಿಯಾಗಲೀ, ಅಲ್ಲಿಯ ಪ್ರಜಾಸಂಖ್ಯೆಗೆ ಅನುಗುಣವಾಗಿ ತಲಾ ಹತ್ತು ರೂಪಾಯಿಗಳನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಕಷ್ಟವಾಗುತ್ತದೆಯೋ ಎನ್ನುವುದನ್ನು ನಾನು ಕೇಳಬೇಕಾಗುತ್ತದೆ. ಸುಮಾರು ಎರಡು ಸಾವಿರ ಜನಸಂಖ್ಯೆಯುಳ್ಳ ಪಂಚಾಯತಿಗೆ, ೨೦ ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಐದು ಸಾವಿರ ಜನಸಂಖ್ಯೆಯುಳ್ಳ ಪಂಚಾಯತಿಗಳಿಗೆ ೫೦ ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇಷ್ಟು ಹಣ ಕೊಟ್ಟರೆ ಅವರು ಏನಾದರೂ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಅವರು ಯಾವ ಅಭಿವೃದ್ಧಿಯ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೂ ಸಾಧ್ಯವಾಗುವುದಿಲ್ಲ ಎಂದು ನಾನು ಖಂಡತುಂಡವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರಾದ ರಾಮಕೃಷ್ಣ ಅವರು ಮಾತನಾಡುತ್ತಾ ಇದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಇವತ್ತಿನ ದಿವಸ ನಮ್ಮ ಹಳ್ಳಿಗಳ ಪರಿಸ್ಥಿತಿ ಹೇಗೆ ಇದೆಯೆಂದರೆ, ಯಾವ ಕಾಲದಲ್ಲಿ ರಸ್ತೆಗಳಿಗೆ ಜೆಲ್ಲಿಯನ್ನು ಹಾಕಿಸಿದ್ದರೋ ಅದು ಯಾರಿಗೂ ಗೊತ್ತಿಲ್ಲ. ನಮ್ಮ ಮಕ್ಕಳು ರೋಡುಗಳಲ್ಲಿರತಕ್ಕ ಗುಂಡಿಗಳಲ್ಲಿ ತಿರುಗಾಡಬೇಕಾಗಿದೆ, ನಾವು ಗುಂಡಿಗಳಲ್ಲಿ ತಿರುಗಾಡಬೇಕಾಗಿದೆ, ರಸ್ತೆಯಲ್ಲಿಯೇ ತಿಪ್ಪೆಗುಂಡಿಗಳನ್ನು ಹಾಕಿಕೊಂಡಿರುತ್ತಾರೆ, ಅಲ್ಲಿಯೂ ನಮ್ಮವರು ತಿರುಗಾಡಬೇಕಾಗುತ್ತದೆ. ಈ ಎಲ್ಲಾ ಕೊಚ್ಚೆಯನ್ನು ನಾವು ನಿರ್ಮೂಲನ ಮಾಡಬೇಕಾದರೆ, ನಮಗೆ ಸ್ವಲ್ಪ ಹಣ ಬೇಕಾಗುತ್ತದೆ, ಆದ್ದರಿಂದ ಸರ್ಕಾರದವರು ನಾನು ಮೇಲೆ ಹೇಳಿದಂತೆ ಗ್ರಾಮಪಂಚಾಯತಿಗಳಿಗೆ ಸಂಪನ್ಮೂಲಗಳನ್ನು ಹೆಚ್ಚಿಸಿಕೊಟ್ಟರೆ ಅವರು ಗ್ರಾಮವನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಕಾರ್ಯಕ್ರಮಗಳನ್ನು ನಾವು ಯಶಸ್ವಿಯಾಗಿ ತೆಗೆದುಕೊಂಡರೆ, ಹಳ್ಳಿಯ ಜನತೆಯ ಆರೋಗ್ಯವನ್ನು ನಾವು ಕಾಪಾಡುವುದಕ್ಕೆ ಅವಕಾಶವಾಗುತ್ತದೆ. ಗ್ರಾಮಪಂಚಾಯತಿಗಳಿಗೆ ಸರ್ಕಾರದವರು ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದೀರಿ. ಆದರೆ ಸಂಪನ್ಮೂಲಗಳನ್ನು ಕೊಡದೆ ಅವು ಯಾವರೀತಿಯಲ್ಲಿ ಕೆಲಸ ಮಾಡಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಒಂದು ತಾಲ್ಲೂಕಿನಲ್ಲಿ ೫೦–೬೦ ರಿಂದ ೮೦ ಪಂಚಾಯತಿಗಳು ಇರಬಹುದು. ಇವುಗಳಿಗೆ ರೆವಿನ್ಯೂ ಇಲಾಖೆಯೇ ತಂದೆ ತಾಯಿ ಇದ್ದ ಹಾಗೆ. ಈ ವಿಷಯವನ್ನು ಮಾನ್ಯ ರಾಮಕೃಷ್ಣ ಅವರು ಬಹಳ ಚೆನ್ನಾಗಿ ಹೇಳಿದರು. ಈಗ ನಮಗೆ ಸ್ವಾತಂತ್ರ್ಯ ಬಂದು ಮೂವತ್ತು ವರ್ಷಗಳಾದರೂ ಕೂಡ ರಾಜ್ಯದಲ್ಲಿ ಇನ್ನೂ ಬೇಕಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿದೆ ಎಂದು ನನಗನ್ನಿಸುತ್ತದೆ. ಎಲ್ಲಾ ಇಲಾಖೆಗಳಿಗಿಂತ ನಮ್ಮ ಅಭಿವೃದ್ಧಿ ಇಲಾಖೆ ಬಹಳ ಮುಂದೆ ಇರಬೇಕು. ಇಲ್ಲಿ ತಾವು ಪಂಚಾಯತಿಗಳನ್ನು ನೋಡಿಕೊಳ್ಳುವುದಕ್ಕೆ ವಿಲೇಜ್ ಅಕೌಂಟೆಂಟ್ ಕಂ ಸೆಕ್ರೆಟರಿ ಎಂದು ನೇಮಕ ಮಾಡಿದ್ದೀರಿ. ಇವರುಗಳು ಏನು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ನಮ್ಮ ಕ್ಷೇತ್ರದಲ್ಲಿ ನಾಲ್ಕಾರು ಪಂಚಾಯತಿಗಳನ್ನು ನಾನು ನೋಡಿದ್ದೇನೆ, ಇವರಿಗೆ ಒಬ್ಬೊಬ್ಬರಿಗೆ ನಾಲ್ಕಾರು ಪಂಚಾಯತಿಗಳನ್ನು ಕೊಟ್ಟಿರುತ್ತಾರೆ. ಇವರು ಏನು ಕೆಲಸ ಮಾಡುತ್ತಾರೆಂದರೆ, ಇವರ ತಹಸೀಲ್ದಾರರು ಏನು ಹೇಳುತ್ತಾರೋ ಅದನ್ನು ಮಾತ್ರ ಮಾಡಿಕೊಂಡಿರುತ್ತಾರೆ. ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ದರಖಾಸ್ತು, ಆರ್. ಆರ್. ರಿಕಾರ್ಡ್ಸ್, ಅದಲು ಬದಲು ಮಾಡುವುದು, ಅಲ್ಲದೆ ತಹಸೀಲ್ದಾರರು ಹೇಳಿದಂಥ ಕೆಲಸಗಳನ್ನು ಮಾಡಿಕೊಂಡಿರುತ್ತಾರೆ. ಇವರು ಪಂಚಾಯತಿಗಳ ಕೆಲಸವನ್ನು ಅಟೆಂಡ್ ಮಾಡುತ್ತಿಲ್ಲ ಎಂದು ನಾನು ಖಂಡತುಂಡವಾಗಿ ಹೇಳಬೇಕಾಗಿದೆ. ಇವರು ಯಾವ ಕೆಲಸವನ್ನು ಪಂಚಾಯತಿಗೆ ಸಂಬಂಧಪಟ್ಟಂತ ಮಾಡುತ್ತಿಲ್ಲ, ಇದು ನನ್ನ ವೈಯುಕ್ತಿಕ ಅನುಭವ. ಭಾಷಣಕ್ಕೋಸ್ಕರ ವಿರೋಧ ಪಕ್ಷದವರು ಏನೋ

ಹೇಳುತ್ತಾರೆಂದು ಸನ್ಮಾನ್ಯ ಮಂತ್ರಿಗಳು ತಿಳಿಯದೆ ಇವರನ್ನು ಬೈಫರ್ಕೆಟ್ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಒಂದು ತಾಲ್ಲೂಕಿನಲ್ಲಿ ೫೦ ಪಂಚಾಯತಿಗಳು ಇದ್ದರೆ, ಸುಮಾರು ೫೦ ಜನರು ಇವರು ಇದ್ದರೆ, ೨೫ ಜನರನ್ನು ಪಂಚಾಯತಿ ಕಾರ್ಯದರ್ಶಿಗಳೆಂತಲೂ, ಇನ್ನು ೨೫ ಜನರನ್ನು ವಿಲೇಜ್ ಅಕೌಂಟೆಂಟರೆಂತಲೂ ಕರೆಯಿರಿ ಇಲ್ಲದೇ ಹೋದರೆ ಇವರು ಪಂಚಾಯತಿಯ ಕೆಲಸವನ್ನು ಅಟೆಂಡ್ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಾತನ್ನು ನಾನು ಖಂಡತುಂಡವಾಗಿ ಹೇಳುತ್ತೇನೆ. ಈ ರೀತಿಯಾಗಿ ಬೈಫರ್ಕೇಟ್ ಮಾಡಿದರೆ, ಇವರುಗಳು ಎರಡು ಕಡೆಯಲ್ಲಿಯೂ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ತಮ್ಮ ಉತ್ತರದಲ್ಲಿ ನನಗೆ ಭರವಸೆಯನ್ನು ಕೊಡಬೇಕು ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

ಸರ್ಕಾರದವರು ಕೊಳವೆ ಬಾವಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ತೆಗೆದಿದ್ದೀರಿ. ಇನ್ನೂ ಇವುಗಳು ಆಗಬೇಕು ಎಂದು ನಾನು ಹೇಳುತ್ತಿದ್ದೇನೆ. ಆದರೆ ಇವುಗಳ ಮೇಂಟೆನೆನ್ಸ್ ನೋಡಿದರೆ ನಿಜವಾಗಿಯೂ ನಾವು ನಾಚಿಕೆಪಡಬೇಕಾಗುತ್ತದೆ. ಇದರ ಬಗ್ಗೆ ತಾವು ಏಪ್ರಿಲ್ ತಿಂಗಳಲ್ಲಿ ಒಂದು ಹುಕುಂನ್ನು ಹೊರಡಿಸಿದ್ದೀರಿ, ಆ ಹುಕುಂನ್ನು ಎಷ್ಟರಮಟ್ಟಿಗೆ ಕಾರ್ಯಗತ ಮಾಡಿದ್ದಾರೆ ಎಂದು ನಾನು ಕೇಳುತ್ತೇನೆ. ಏಕೆಂದರೆ, ಪ್ರತಿನಿತ್ಯ ನಾನು ಪಿಎಚ್‌ಇಯ ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯುಟೀವ್ ಇಂಜಿನಿಯರ್ ಮತ್ತು ಚಿಫ್ ಇಂಜಿನಿಯರ್‌ಗಳಿಗೂ ಫೋನ್ ಮಾಡಿ ವಿಷಯ ತಿಳಿದುಕೊಳ್ಳತಕ್ಕ ಅಭ್ಯಾಸವನ್ನು ಇಟ್ಟು ಕೊಂಡಿದ್ದೇನೆ. ನಮ್ಮ ಕ್ಷೇತ್ರದಲ್ಲಿ, ಮಂಡ್ಯ ತಾಲ್ಲೂಕಿನಲ್ಲಿ ನೂರಾರು ಕೊಳವೆ ಬಾವಿಗಳು ಇವತ್ತು ಕೆಟ್ಟು ನಿಂತಿವೆ. ಕಳೆದ ೨-೩ ತಿಂಗಳಿಂದ ಕೆಟ್ಟುಹೋಗಿವೆ. ಆದರೆ ಇವುಗಳನ್ನು ರಿಪೇರಿ ಮಾಡುವುದಕ್ಕೆ ಎಕ್ವಿಪ್‌ಮೆಂಟ್ಸ್ ನಮ್ಮ ಅಧಿಕಾರಿಗಳಲ್ಲಿ ಇಲ್ಲ. ಈ ಕೆಲಸಕ್ಕಾಗಿ ಜೂನಿಯರ್ ಇಂಜಿನಿಯರೊಬ್ಬರನ್ನು ನೇಮಕ ಮಾಡಿದ್ದೀರಿ, ಆದರೆ ಅವರು ಸಾಧನಗಳು ಇಲ್ಲದೆ ಏನು ಕೆಲಸ ಮಾಡಬೇಕು ? ಇದಕ್ಕೆ ಏರ್ ಕಂ ಪ್ರೆಷರರ್ ಬೇಕು. ಇದರ ಬಗ್ಗೆ ನಾನು ಚೀಫ್ ಇಂಜಿನಿಯರ್ ಅವರನ್ನು ಕೇಳಿದರೆ ಅವರು ಇದನ್ನು ಬೇರೆ ಇಲಾಖೆಯಿಂದ ತರಿಸಬೇಕು ಎಂದು ಹೇಳುತ್ತಾರೆ. ಈ ರೀತಿಯಾಗಿ ಬೇರೆ ಇಲಾಖೆಯಿಂದ ಈ ಸಾಧನಗಳನ್ನು ತರಿಸಿಕೊಂಡು, ಈ ಕೊಳವೇ ಭಾವಿಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಈ ಅಧಿಕಾರಿಗಳಿಗೆ ಸರ್ಕಾರದವರು ವೆಹಿಕಲ್ಸ್ ಕೂಡ ಕೊಟ್ಟಿಲ್ಲ. ಇದಕ್ಕಾಗಿ ಆರ್ಡರ್ಸ್ ಪ್ಲೇಸ್ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ, ಇವುಗಳನ್ನು ಜಾಗ್ರತೆಯಾಗಿ ಪ್ರಕ್ಯೂರ್ ಮಾಡುವುದಕ್ಕೆ ಅಷ್ಟೇನು ಕಷ್ಟವಿಲ್ಲ ಎಂದು ನನಗನ್ನಿಸುತ್ತದೆ. ಇವಕ್ಕೆ ಬಹುಶಃ ಹಣ ಇಲ್ಲ ಎಂದು ಕಾಣುತ್ತದೆ. ನಮ್ಮ ಸರ್ಕಾರದವರು ಯೋಜನೆಗಳನ್ನು ಬೇಕಾದಷ್ಟು ಹಾಕುತ್ತಾರೆ, ಆದರೆ ಯೋಜನೆಗಳನ್ನು ಹಾಕಿದಮೇಲೆ ಹಣ ಇಲ್ಲ ಎಂದು ಹೇಳುತ್ತಿರುತ್ತಾರೆ. ಯಾವ ಇಲಾಖೆಯನ್ನು ಕೇಳಿದರೂ ಹಣ ಇಲ್ಲ ಎಂದು ಹೇಳುತ್ತಿರುತ್ತಾರೆ. ಈ ರೀತಿಯಾಗಿ ಪ್ರತಿಯೊಬ್ಬರೂ ಹೇಳುವುದಾದರೆ ಯೋಜನೆಗಳನ್ನು ಏಕೆ ಹಾಕಬೇಕು ಎಂದು ಪ್ರಶ್ನೆ ಮಾಡಬೇಕಾಗುತ್ತದೆ.

ಇನ್ನು ನನಗೆ ಹೆಚ್ಚು ಮಾತನಾಡಲು ಅವಕಾಶ ಇಲ್ಲವಾದ್ದರಿಂದ, ಮಾನ್ಯ ಮಂತ್ರಿಗಳು ನಾನು ಹೇಳಿರುವ ಎರಡು ಮುಖ್ಯ ವಿಷಯಗಳ ಬಗ್ಗೆ ಒಂದು, ಪಂಚಾಯತಿಗಳಿಗೆ ಸಂಪನ್ಮೂಲಗಳನ್ನು ಒದಗಿಸುವ ಬಗ್ಗೆ, ಇನ್ನೊಂದು ವಿಲೇಜ್ ಅಕೌಂಟೆಂಟ್ಸನ್ನು ಬೈಫರ್ಕೇಟ್ ಮಾಡುವ ಬಗ್ಗೆ ತಮ್ಮ ಉತ್ತರದಲ್ಲಿ ನನಗೆ ಕೆಟಗಾರಿಕಲ್ ಆಗಿ ಹೇಳಬೇಕು ಎಂದು ಪ್ರಾರ್ಥಿಸಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋವಿಂದಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಈಗ ನಾನು ಕಮ್ಯುನಿಟ್ ಡೆವಲಪ್‌ಮೆಂಟ್ ಮಂತ್ರಿಗಳು ಸಭೆಯ ಮುಂದೆ ತಮ್ಮ ಡಿಮ್ಯಾಂಡು ಏನು ಇಟ್ಟಿದ್ದಾರೆ ಅದನ್ನು ಪೂರ್ಣವಾಗಿ ಸ್ವಾಗತಿಸಿ, ಕೆಲವು ಸಲಹೆಗಳನ್ನು ತಮ್ಮ ಮೂಲಕ ಕೊಡಲು ಇಷ್ಟಪಡುತ್ತೇನೆ. ಶನಿವಾರ ಮತ್ತು ಈ ದಿವಸ ಮಾನ್ಯ ಸದಸ್ಯರನೇಕರು ತಮ್ಮ ತಮ್ಮ ಅನುಭವಗಳನ್ನು ಇದರ ಬಗ್ಗೆ ಹೇಳಿದ್ದಾರೆ.

೩-೦೦ ಪಿ.ಎಂ.

ವೈ. ರಾಮಕೃಷ್ಣ ಮತ್ತು ಪಟೇಲರು ಬಹಳ ಕಳಕಳಿಯಿಂದ ತಮ್ಮ ಅಭಿಪ್ರಾಯಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಕೆಲವೊಂದು ವೈಯುಕ್ತಿಕವಾಗಿ ಹೇಳಿರಬಹುದು; ಇನ್ನೂ ಕೆಲವನ್ನು ಒಳ್ಳೆಯ ಭಾವನೆಯಿಂದ ಹೇಳಿರಬಹುದು; ಅವರು ಸೂಕ್ತ ಸಲಹೆಗಳನ್ನು ಕೊಟ್ಟಿರುವುದರಿಂದ ಅವು

ಗಳನ್ನು ಒಪ್ಪಲೇ ಬೇಕು. ಹೆಗರೆಯವರು ಕೂಡ ಒಳ್ಳೆಯ ಅಭಿಪ್ರಾಯಗಳನ್ನು ಹೇಳಿದ್ದಾರೆ; ಚೌಡಯ್ಯನವರು ತಮ್ಮ ಸ್ವಂತ ಅನುಭವದಿಂದ ಹೇಳಿದ್ದಾರೆ. ನಾನು ಮತ್ತು ಚೌಡಯ್ಯನವರು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದೆವು. ನಮ್ಮ ಅನುಭವದಲ್ಲಿ ಈಗ ಇರತಕ್ಕ ತಾಲ್ಲೂಕು ಬೋರ್ಡ್ಗ ಅಧಿಕಾರ ಮತ್ತು ಹಣಕಾಸಿನ ಪರಿಸ್ಥಿತಿಯನ್ನು ಮತ್ತು ೬೦–೬೮ರಲ್ಲಿ ಇದ್ದ ತಾಲ್ಲೂಕು ಬೋರ್ಡ್ಗ ಅಧಿಕಾರ ಮತ್ತು ಹಣಕಾಸಿನ ಪರಿಸ್ಥಿತಿಯನ್ನು ತಾಳೆ ನೋಡಿದಾಗ ಅದರ ಒಂದು ಪರಿಣಾಮ ಕಂಡುಬರುತ್ತದೆ. ೧೯೬೧ರಲ್ಲಿ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ ಆಗಲೀ, ಎಕ್ಸ್‌ಟೆನ್‌ಷನ್ ಆಫೀಸರ್ ಆಗಲೀ ರೈತನ ಒಂದು ಕಷ್ಟ ಸುಖದ ಬಗ್ಗೆ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನೇರವಾಗಿ ಕ್ರಮ ತೆಗೆದುಕೊಳ್ಳುವಂತ ಒಂದು ಅಧಿಕಾರ ಇತ್ತು, ಧೈರ್ಯ ಇತ್ತು ಮತ್ತು ನೈತಿಕ ಮಟ್ಟ ಇತ್ತು. ಇದು ೬೧ ರಿಂದ ೬೬ ರವರೆಗೆ ಸುಮಾರಾಗಿ ನಡೆದುಕೊಂಡು ಬಂತು. ಬಹುಶಃ ೬೬ ರಿಂದ ಈಚೆಗೆ ಬ್ಲಾಕ್ ಡೆವಲಪ್‌ಮೆಂಟ್ ಅಭಿವೃದ್ಧಿ ಕಾರ್ಯಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಇಲಾಖೆಗಳು, ಮಾನ್ಯ ಮಿತ್ರರೊಬ್ಬರು ಹೇಳಿದಂತೆ ೧೮ ಇಲಾಖೆಗಳು ಕಾರ್ಯಾರಂಭ ಮಾಡಿದವು. ತಾಲ್ಲೂಕು ಬೋರ್ಡ್ಗ ಕೂಡ ಒಂದು ಸಣ್ಣ ಸರ್ಕಾರ ಇದ್ದಹಾಗೆ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಬಗ್ಗೆ ತಾಲ್ಲೂಕು ಬೋರ್ಡ್ಗ ಅಧ್ಯಕ್ಷರೋ, ಸದಸ್ಯರುಗಳು ಪ್ರಯತ್ನ ಮಾಡಿದರು. ಬಹುಶಃ ಇದರಿಂದ ಕೆಲವು ಅಧಿಕಾರಿಗಳಿಗೆ ಹೊಟ್ಟೆಕಿಚ್ಚು ಆಗಿರಬೇಕು; ಆಗ ವಿಕೇಂದ್ರೀಕರಣವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ವಿಧಾನಸೌಧ ಪ್ರಯತ್ನ ಪಟ್ಟಿತ್ತು. ಗ್ರಾಜುಯಲಾಗಿ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಂಡಿತು. ಇವತ್ತು ಒಂದು ಸಣ್ಣ ರಿಪೇರಿ ವಿಚಾರದ ಬಗ್ಗೆ ಕೌಂಟರ್ ಸೈನ್ ಆಗಬೇಕಾದರೆ; ಬಿ.ಡಿ.ಓ. ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟ್, ಅಸಿಸ್ಟೆಂಟ್ ಕಮೀಷನರ್ ಹತ್ತಿರ ಹೋಗಬೇಕು. ಚುನಾಯಿತ ಸಂಸ್ಥೆಯ ಅಧಿಕಾರಗಳನ್ನು ಇವತ್ತು ರೆವಿನ್ಯೂ ಇಲಾಖೆಗೆ ಅಳವಡಿಸಿದ್ದಾರೆ. ಅದೇ ಬಿ.ಡಿ.ಓ. ಮಾಡತಕ್ಕ ಅಪ್ರೋಚ್ ಬೇರೆ; ತಹಶೀಲ್ದಾರ್ ಮಾಡತಕ್ಕ ಅಪ್ರೋಚ್ ಬೇರೆ. ಮಾನ್ಯ ಮಂತ್ರಿಗಳು ಹೇಳಿದರು ಬಹಳ ವಿಷಾದದಿಂದ ಹೇಳಬೇಕಾಗಿದೆ. ರೆವಿನ್ಯೂ ಅಧಿಕಾರಿಗಳಿಗೆ ಐ.ಎ.ಎಸ್. ಮತ್ತು ಕೆ.ಎ.ಎಸ್. ಇದ್ದರೆ ಎಲ್ಲಾದರಲ್ಲಿಯೂ ಟ್ರೈನಪ್ ಆಗಿರುತ್ತಾರೆಂದು; ಸಮುದಾಯ ಅಭಿವೃದ್ಧಿಗೆ ವಿನಯ ಹಾಗೂ ಸ್ಥಳೀಯ ಪರಿಸ್ಥಿತಿಗಳನ್ನು ತಿಳಿದುಕೊಳ್ಳತಕ್ಕ ತಾಳ್ಮೆ ಇವು ಬಹಳ ಮುಖ್ಯ. ರೆವಿನ್ಯೂ ಅಧಿಕಾರಿಗಳು ಇವುಗಳ ಬಗ್ಗೆ ಹೆಚ್ಚಿಗೆ ಟ್ರೈನಪ್ ಆಗಿರುವುದಿಲ್ಲ.

ಸ್ವಾಮಿ, ಬ್ಲಾಕ್ ಡೆವಲಪ್‌ಮೆಂಟ್ ಇಲಾಖೆಯಲ್ಲಿ ಗ್ರಾಮಸೇವಕರು; ೧೨–೧೩ ಜನ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಇನ್ನಿತರರಿಗೆ ಪ್ರೊಮೋಷನ್ ವ್ಯವಸ್ಥೆಯೇ ಇಲ್ಲ. ಇವರನ್ನು ರೆವಿನ್ಯೂ ಇಲಾಖೆಯ ಅಸಿಸ್ಟೆಂಟ್ ಕಮೀಷನರ್, ಡೆಪ್ಯೂಟಿ ಕಮೀಷನರ್, ಡಿವಿಜನಲ್ ಕಮೀಷನರ್; ಇನ್ನೂ ಎಷ್ಟೋ ಕಮೀಷನರ್‌ಗಳ ಕೆಳಗಡೆ ಇವರನ್ನು ಹಾಕಿರುವುದರಿಂದ ಇವತ್ತು ಈ ಒಂದು ಸಂಸ್ಥೆಯಲ್ಲಿ ಕೆಲಸಮಾಡತಕ್ಕ ಉತ್ಸಾಹ ಈ ಸಿಬ್ಬಂದಿಗೆ ಇಲ್ಲದಂತಾಗಿದೆ. ಸ್ವಾಮಿ, ಫಂಡ್ಸ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಪ್ರಾರಂಭದಲ್ಲಿ ಅನೇಕ ಸ್ಕೀಮುಗಳು ಇದ್ದವು. ಎನ್.ಇ.ಎಸ್. ಸ್ಕೀಮು ಎಂದು ಇತ್ತು; ವರ್ಷಕ್ಕೆ ೧೨–೧೩ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು; ಇದರಿಂದ ಸುತ್ತಮುತ್ತಲಿನ ಕೆಲಸಗಳನ್ನು ಮಾಡಿಸುವುದಕ್ಕೆ ಅನುಕೂಲವಾಗುತ್ತಿತ್ತು. ಇವತ್ತು ಒಂದು ಲಕ್ಷ ರೂಪಾಯಿಗಳನ್ನು ತಾಲ್ಲೂಕು ಬೋರ್ಡ್ಗಗಳಿಗೆ ಕೊಟ್ಟರೆ, ಯಾವರೀತಿ ನಡೆಸಬೇಕು ಎನ್ನುವುದನ್ನು ದೇವರೆ ನೋಡಬೇಕು. ಒಂದು ಜೀಪ್ ರಿಪೇರಿ ಮಾಡಿಸಬೇಕಾದರೂ ಅಸಿಸ್ಟೆಂಟ್ ಕಮೀಷನರ್ ಹಾಗೂ ತಹಸೀಲ್ದಾರ್‌ರವರ ಒಪ್ಪಿಗೆ ಬೇಕು. ನಮ್ಮ ಬ್ಲಾಕ್‌ನಲ್ಲಿ ಒಂದು ಜೀಪ್ ಮೂರು ವರ್ಷದಿಂದ ರಿಪೇರಿ ಆಗದೆ ಹಾಗೆ ಇದೆ. ತಹಶೀಲ್ದಾರ್‌ರವರ ಹತ್ತಿರ ಹೋಗಿ ಬಿ.ಡಿ.ಓ. ಕೂತುಕೊಳ್ಳಬೇಕು, ಅವರ ಮರ್ಜಿಯಲ್ಲಿ ಹಾಕಬೇಕು. ತಹಶೀಲ್ದಾರ್‌ರವರನ್ನು ನೋಡಿದರೆ ಜನ ಓಡಿಹೋಗುತ್ತಾರೆ. ಬಿ.ಡಿ.ಓ. ರೈತರ ಕಷ್ಟಸುಖಗಳನ್ನು ವಿಚಾರಿಸಬೇಕು, ಗ್ರಾಮ ಲೆಕ್ಕಾಧಿಕಾರಿಗಳು ಗ್ರಾಮಾಭಿವೃದ್ಧಿ ಕೆಲಸ ಮಾಡಬೇಕು. ಗ್ರಾಮ ಸೇವಕರುಗಳಿಗೆ ಇದ್ದ ಅಭಿವೃದ್ಧಿ ಕಾರ್ಯಗಳನ್ನು ಕಿತ್ತುಕೊಂಡರು. ಈ ರೂರಲ್ ಡೆವಲಪ್‌ಮೆಂಟ್ ಕೆಳಗೆ ಎಲ್ಲಾ ಇಲಾಖೆಗಳು ಬಂದಿರುವುದರಿಂದ ಪ್ರತಿಯೊಂದು ಇಲಾಖೆಯಿಂದಲೂ ಒಂದಿಷ್ಟು ಹಣವನ್ನು ಏತಕ್ಕೆ ಕಿತ್ತುಕೊಳ್ಳಬಾರದು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ತಾಲ್ಲೂಕು ಆಫೀಸಿನಲ್ಲಿ ಕೆಲಸಕ್ಕೆ ಬಾರದ ಗುಮಾಸ್ತ ಇದ್ದರೆ, ಅವನನ್ನು ತಾಲ್ಲೂಕು ಬೋರ್ಡಿಗೆ ಹಾಕುತ್ತಾರೆ. ದಕ್ಷರಾದ ಹಾಗೂ ನುರಿತ ಗುಮಾಸ್ತರು ತಾಲ್ಲೂಕು ಬೋರ್ಡಿನಲ್ಲಿ ಇದ್ದರೆ, ವಾಪಸ್ಸು ತೆಗೆದುಕೊಳ್ಳುತ್ತಾರೆ. ಇಷ್ಟು ದೊಡ್ಡ ಸಂಸ್ಥೆಗೆ ಒಬ್ಬ ನುರಿತ ಅಧಿಕಾರಿಗಳು ಬೇಡವೆ ಎಂದು ಹೇಳಿದರೆ, ಅಲ್ಲಿ ನಿಮಗೆ ಏನು

ಕೆಲಸ ಇದೆ, ಎಂದು ತಾತ್ಸಾರ ಮನೋಭಾವದಿಂದ ಉತ್ತರ ಕೊಡುತ್ತಾರೆ, ದಯವಿಟ್ಟು ಮಾನ್ಯ ಮಂತ್ರಿಗಳು ಈ ರೀತಿ ಇರತಕ್ಕ ವ್ಯವಸ್ಥೆಯನ್ನು ಹೋಗಲಾಡಿಸುವುದಕ್ಕೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಮಹತ್ತಾ ವರದಿಯಲ್ಲಿದ್ದಂತೆ ಮತ್ತು ಎಸ್.ಕೆ. ದೇವರ ಕಾಲದಲ್ಲಿ ಎಷ್ಟುಮಟ್ಟಿಗೆ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಕೊಟ್ಟಿದ್ದರೋ ಅದನ್ನು ಮತ್ತೆ ವಾಪಸ್ಸು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇವತ್ತು ಒಬ್ಬ ತಾಲ್ಲೂಕು ಮಂಡಳಿಯ ಅಧ್ಯಕ್ಷ ಒಂದು ಗ್ರಾಮಕ್ಕೆ ಕುಡಿಯುವ ನೀರಿನ ಬಾವಿ ಕೊಡುತ್ತೇನೆ ಎನ್ನುವ ಧೈರ್ಯ ಇಲ್ಲ. ರಸ್ತೆ ಕೊಡುತ್ತೇವೆ ಎನ್ನುವ ಧೈರ್ಯ ಇಲ್ಲ, ಅದಕ್ಕೋಸ್ಕರ ಈ ಇಲಾಖೆಯನ್ನೇ ಪ್ರತ್ಯೇಕ ಇಲಾಖೆಯನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ಈ ಇಲಾಖೆಗೆ ಸಮುದಾಯ ಅಭಿವೃದ್ಧಿ ಕೆಲಸಗಳಲ್ಲಿ ನುರಿತಿರತಕ್ಕವರನ್ನೇ ಕಮೀಷನರ್ ಆಗಿ ನೇಮಕ ಮಾಡಬೇಕು, ಈ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಪ್ರೊಮೋಷನ್ ಕೊಡುವ ವಿಚಾರವನ್ನು ಮಾನ್ಯ ಮಂತ್ರಿಗಳು ಮನಸ್ಸಿನಲ್ಲಿಟ್ಟುಕೊಂಡು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI G. B. SHANKAR RAO (Hirekerur).—Mr. Speaker, Sir, I am thankful to you for having given me an opportunity to express my views on Panchayat Raj institutions today. The concept of Community Development is being gradually forgotten now-a-days by the people who are in charge of the administration. As I understand, the Community development programmed was launched by great thinkers of this country, and the great leader Pandit Jawaharlal Nehru conceived it. It was a programme for the people and by the people. The Panchayat Raj institution should be completely in charge of the local administration as a Panchayat Unit where the people of the entire village should gather together, there should be a gramsabha and the people of th village should sit together and discuss matters in the presence of the Gramsevak to identify their felt needs. It was the idea of those leaders who launched this programme in those days that the Panchayati Raj institutions should be developed into an integrated whole. They should have a programme of their own, the felt-needs should be chalked out, the priority should be fixed and the implementation programme at the village level should be taken up by the people themselves and the outside agency that is the administrative agency at the village level and the taluk level should only assist the non-official body *i.e.*, the panchayat and the taluk boards by the necessary funds and inputs. That was the idea when it was mooted in those days. If I remember aright it was started in 2nd October 1952. During the foreign rule the villages were afraid of the bureaucratic administration. So they thought of removing the fear of villages from the bureaucrats or to gradually wean way the clutches of bureaucrats. So, with this end in view the people were brought together. The officicers work was to assist them not to guide them. With that object in view the people were trained like gramsevaks who were considered as multipurpose workers. The gramsevak was considered as the leader of the village or panchayat; he was a philosoper, guide and a friend. He was a person who can enthuse the people. He was the guide of the village in all matters.

That was the type of programme that was envisaged in those days. But it was gradually handed over to the Taluk Boards. The programme has been completely hampered according to me; the persons who know the needs of the village are not there· Such persons are no doubt there but the trouble is the panchayat and the taluk board have not properly harness the talents of the villagers. In those days the Panchayats institutions and taluk boards shonld be assisted with greater finance; and not only that, they should be given full financial powers so that they can take up the developmental work themselves.

Mr. Speaker Sir, when the five year plans were mooted in this country, the people at the helm of affairs thought that it should be a peoples programme. Now we feel that is not a peoples programme. The five year plan if it has to be a real peoples plan, it should take a decision from the CD programmes; more and more village folks should be involved not only in identifying the problems but also planning if that has to be a real peoples plan. For five year plans to be successful, the CD programme is the solution. If we do not strengthen this programme, our five year plans will be not for people but for those who are on the high pedestal or who have not seen the village or who have not tried to identify or learn the problems of villages. There is a demand by the entire house that the panchayati raj institutions should be strengthened financially and there should be an amendment to the Taluk Boards and Panchats Act. Why not the government think in those lines. After all they are there due to the blessings of the people. So long as they are in office should be sincere and fulfill the confidence the people have reposed in them. They should see that the villages are helped. We have to approach the people once in five years. We are not bureaucrats. If we do not respond to the peoples aspiration, any amount of our expression on the floor of this House will be a waste. Now we have to seriously consider taking up of amendments to the Taluk Boards Act.

Hon. members were telling that the BDOs can be replaced by the Tahsildars. We should know that from the beginning when the programme was launched this institution was kept separate because this institution is mainly intended for the development acvities whereas the Tahsildar is meant only to administer the Taluk; he is entrusted wito revenue administration. Panchayati institution is interested in the development of villages. The BDO and the Tahsildar cannot be equated. I really felt sorry when the Hon. Minister for Revenue said that a Tahsildar is supposed to know everything. I have come to know that the recruitment of BDOs has been completely stopped and they are to be filled up by Revenue Tahsildars,

SRI Y. RAMAKRISHNA.—I would like to know why planning and development should not have its own department. They can have trained personnel just like Revenue Department.

SRI G. B. SHANKAR RAO.—That is what I wanted to tell the House. The Tahsildar cannot be made use for these posts. They are trained in a particular way and the BDOs are trained in a particular way. Recently they have a training programme for training Tahsildars not on matter of CD programme but in revenue matters. The work of a BDO is different from the work of a Tahsildar. So, there cannot be interchange. That is what I want to impress upon this House.

Now, I come to borewell programme. This is a programme completely financed by the centre. I really fail to understand why our State has taken up this work on a large scale. I am told that they are short of fast moving rigs and they do not possess enough number of fast rigs and they want to indent on private agencies. If they have the real interest of the people at heart, they should provide this dire necessity of life *viz.*, the drinking water. They should put all their efforts to procure more number of rigs. I am sorry to say on this occasion that this programme is not completey neglected by the State Government. I know the Chief Engineer of North has successfully completed two districts in providing borewells in Dharwar and Karwar Districts, I want to pay my special compliments to him. The people who do better work should be complimented. I particularly feel that officers of that type if they only mind, they can take up this programme and complete it in a short time. I request the Hon. Minister to see that more number of rigs from the Rural Development Corporation is made available to provide the basic needs of the people in rural areas. Along with food, cloth and shelter, water is also one of the basic necessities of life. The Hon. Minister should see that this is taken up in a phased manner. Lastly, I thank the Chair and conclude my talk.

† ಶ್ರೀ ಬಿ.ವಿ. ಜನಾಲಿ: (ಗುಳೇದಗುಡ್ಡ).—ಮಾನ್ಯ ಸಭಾಪತಿಗಳಲ್ಲಿ ವಂದಿಸಿ, ಗ್ರಾಮಪಂಚಾಯಿತಿ ಮಂತ್ರಿಗಳು ಮಂಡಿಸಿದ ಬೇಡಿಕೆಯನ್ನು ನಾನು ಸ್ವಾಗತಿಸಿ ಗ್ರಾಮಪಂಚಾಯಿತಿಗಳ ಅಭಿವೃದ್ಧಿ ಯಾವ ರೀತಿ ಆಗುತ್ತಾ ಇದೆ ಎನ್ನುವುದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ: ಎಲ್ಲರೂ ವೇದಾಂತ ಹೇಳುವುದಷ್ಟೇ, ಮಾಡುತ್ತಾ ಇಲ್ಲ. ನಾವು ಗಾಂಧೀಜಿಯವರ ತತ್ವವನ್ನು ಹೇಳುತ್ತೇವೆ ಆದರೆ ಅದರಂತೆ ಮಾಡುತ್ತಾ ಇಲ್ಲ. ಮಹಾತ್ಮಾ ಗಾಂಧೀಜಿಯವರು ಹಳ್ಳಿಗಳ ಸಲುವಾಗಿ ಹೀಗೆ ಹೇಳಿದ್ದಾರೆ. (ಹಿಂದಿ)

ಗಾಂಧೀಜಿಯವರು ಹಳ್ಳಿಗಳ ಸಲುವಾಗಿ ಒಳ್ಳೆಯ ಮಾತನ್ನು ಹೇಳಿದ್ದಾರೆ. ಹಳ್ಳಿಗಳ ಅಭಿವೃದ್ಧಿಗೆ ಎಷ್ಟು ಹಣ ಸಿಕ್ಕಿದೆ ಎಂದು ನೋಡಿದರೆ ಬಹಳ ಅಸಂತೋಷವಾಗುತ್ತದೆ. ಹಳ್ಳಿ ಜನರ ಜೀವನ ಸುಧಾರಿಸಬೇಕಾದರೆ ಏನು ಅವಶ್ಯಕವಾಗಿ ಬೇಕೋ ಅದೇ ಇಲ್ಲ. ಪಂಡಿತ ಜವಹರಲಾಲ್ ನೆಹರೂರವರು ಹೇಳುತ್ತಾ ಇದ್ದರು. ಏನೆಂದರೆ, ಹಳ್ಳಿಗಳ ಉದ್ಧಾರ ಆಗಬೇಕಾದರೆ, ಹಳ್ಳಿಗಳು ಅಭಿವೃದ್ಧಿಯಾಗಬೇಕಾದರೆ

ಮುಖ್ಯವಾಗಿ ೩ ಅಂಶಗಳು ಸುಧಾರಿಸಬೇಕು ಎಂದು. ಒಂದನೆಯದು ಶಿಕ್ಷಣ, ಎರಡನೆಯದು ಕೈಗಾರಿಕೆ, ಮತ್ತು ಮೂರನೆಯದು ಒಕ್ಕಲುತನ. ಆದರೆ ಇವತ್ತು ಸರ್ಕಾರದವರು ಕೊಡುತ್ತಾ ಇರತಕ್ಕಂಥ ಶಿಕ್ಷಣ ಬೇಸ್‌ಲೆಸ್ ಆಗಿದೆ. ಶಿಕ್ಷಣ ಪಡೆದ ನಂತರ ಸ್ವಂತ ಕಾಲಮೇಲೆ ನಿಲ್ಲತಕ್ಕ, ಸ್ವಾವಲಂಬನೆ ಯಾಗತಕ್ಕ ಶಿಕ್ಷಣ ಹಳ್ಳಿಗಳಲ್ಲಿದೆಯೇ ಎಂದು ನಾವು ನೋಡಬೇಕಾಗಿದೆ. ದೊಡ್ಡ ಪಟ್ಟಣಗಳಲ್ಲಿ ಆರೋಗ್ಯ ಸಂಸ್ಥೆ ಗಳನ್ನು ಕೊಡುತ್ತಾ ಇದ್ದೀರಿ. ನಿಜವಾಗಿ ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯ ಸರಿಯಾಗಿ ದೊರೆಯುತ್ತಾ ಇಲ್ಲ, ಹಳ್ಳಿಗಳಲ್ಲಿ ದವಾಖಾನೆ ಇಲ್ಲ. ಒಂದು ಸಾವಿರ ಜನಸಂಖ್ಯೆ ಇರತಕ್ಕ ಕಡೆ ದೊಡ್ಡ ಆರೋಗ್ಯ ಕೇಂದ್ರ ಬೇಕಾಗಿಲ್ಲ, ಕನಿಷ್ಟ ಪಕ್ಷ ಒಂದು ಸಬ್ ಸೆಂಟರ್ ಆದರೂ ಕೂಡ ಬೇಕು. ಬಸವಣ್ಣನವರು

ಕಲ್ಲನಾಗರ ಕಂಡರೆ ಹಾಲನೆರೆಯೆಂಬರಯ್ಯ
ದಿಟ ನಾಗರ ಕಂಡರೆ ಕೊಲ್ಲೆಂಬರಯ್ಯ

ಎಂದು ಹೇಳಿದ್ದಾರೆ. ಹೀಗೆ ಎಲ್ಲಿ ನಮಗೆ ಅವಶ್ಯಕತೆ ಇದೆಯೋ, ಎಲ್ಲಿ ಬಡವರು ಇದ್ದಾರೋ ಅಲ್ಲಿ ಸೌಲಭ್ಯಗಳನ್ನು ಕೊಡಂತ್ತಾ ಇಲ್ಲ. ದೀಪ ಇಲ್ಲ ಎನ್ನುವ ಕಡೆ ದೀಪ ಕದೆ ಕದೆ ಸಾವಿರಾರು ದೀಪಗಳು ಉರಿಯುವ ಕಡೆ ದುಡ್ಡು ಖರ್ಚುಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಿಜವಾಗಿಯೂ ಮೂಲ ಯಾವುದು ಎಂದರೆ ಒಕ್ಕಲುತನ. ಇವತ್ತು ಹಿಂದೂಸ್ತಾನದಲ್ಲಿ ಹಳ್ಳಿಗಳು ಉದ್ಧಾರವಾಗಬೇಕಾದರೆ, ಬಾಪೂಜಿಯವರ ಮಾತನ್ನು ಎತ್ತಿ ಹಿಡಿಯಬೇಕಾದರೆ ಹೆಚ್ಚು ಹಣವನ್ನು ಹಳ್ಳಿಗಳಲ್ಲಿ ಖರ್ಚುಮಾಡಬೇಕು. ಇವತ್ತು ನಮ್ಮ ದೇಶಕ್ಕೆ ಅನ್ನ ನೀಡತಕ್ಕ ರೈತ ಎಷ್ಟೊಂದು ಕಷ್ಟ ಪರಿಸ್ಥಿತಿಯಲ್ಲಿದ್ದಾನೆ ಎಂದು ವಿಚಾರಿಸಿ ಕೊಳ್ಳಬೇಕು. ಇವತ್ತು ರೈತನ ಮೇಲೆ ಅನೇಕ ತರಹ ಟ್ಯಾಕ್ಸ್ ಬರುತ್ತಾ ಇದೆ. ಆದರೆ ಸಿಗತಕ್ಕ ಸೌಲಭ್ಯಗಳು ಸಿಗುತ್ತಾ ಇಲ್ಲ. ಇವತ್ತು ಮಾನ್ಯ ಬಂಧುಗಳು ವಿದ್ಯಾ ಸಂಸ್ಥೆಗಳನ್ನು ಕಟ್ಟಿಸಬೇಕಾದರೆ, ವಿಶ್ವವಿದ್ಯಾನಿಲಯಗಳನ್ನು ಕಟ್ಟಿಸಬೇಕಾದರೆ ಹಳ್ಳಿಗಳಲ್ಲಿ ಕಟ್ಟಿಸಿರಿ ಎಂದು ಹೇಳಿದರು. ಇವತ್ತು ರೆಸಿಡೆನ್ಷಿಯಲ್ ಸ್ಕೂಲುಗಳಿಗೆ ಮಿನಿಷ್ಟರು, ಎಂ.ಎಲ್.ಎ. ಮಕ್ಕಳನ್ನು ಕಳಿಸುತ್ತಾರೆ. ಹಳ್ಳಿಗಳಲ್ಲಿ ವಿಶ್ವ ವಿದ್ಯಾನಿಲಯಗಳನ್ನು ಕಟ್ಟಿಸುವುದರಿಂದ ಮಕ್ಕಳ ನೈತಿಕಮಟ್ಟ ಸುಧಾರಿಸುತ್ತದೆ. ನಮ್ಮ ಸರ್ಕಾರ ನೀರಾವರಿ ಯೋಜನೆಗಳ ಬಗ್ಗೆ, ಒಕ್ಕಲುತನದ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆದರೂ ಕೂಡ ಇದು ಕಡಿಮೆ ಪ್ರಮಾಣದಲ್ಲಿದೆ. ನಮ್ಮ ಸರ್ಕಾರದವರು ಬಡವರಿಗೆ ಮನೆ ಕಟ್ಟಲಿಕ್ಕೋಸ್ಕರ ೧೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಇದು ತುಂಬಾ ಸಂತೋಷದ ಸಂಗತಿ. ಮಾನ್ಯ ಸದಸ್ಯ ರೊಬ್ಬರು ಮಾತನಾಡುತ್ತಾ, ಇದು ಅಂತ್ಯೋದಯ, ಉದಯವಾಗುವುದಿಲ್ಲ, ಅಂತ್ಯ ಆದಾಗ ಉದಯ ವಾಗುತ್ತದೆ ಎಂದು ಹೇಳಿದರು. ಹಂತಹಂತವಾಗಿ ಮಾನವನ ಸುಧಾರಣೆಯಾಗಲೇ ಬೇಕು. ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ರೈತನಿಗೆ ಬಂಡಿ, ಎತ್ತು, ಹೊಲ ಎಲ್ಲಾ ಒಮ್ಮೆಲೇ ಕೊಡಬೇಕು ಎಂದರೆ ಕೊಡಲಿಕ್ಕಾಗುವುದಿಲ್ಲ. ಒಬ್ಬ ಬಡವನನ್ನು ಒಮ್ಮೆಲೆ ಶ್ರೀಮಂತನನ್ನಾಗಿ ಮಾಡಲಿಕ್ಕೆ ಶಕ್ಯವಿಲ್ಲ. ಬಡತನ ಶಕ್ಯವಾದ ಮಟ್ಟಿಗೆ ಕಡಿಮೆಮಾಡಬೇಕು. ನಿಜವಾಗಿ ಮನುಷ್ಯ ಜೀವಿಸಬೇಕಾದರೆ ಅವನಿಗೆ ಮನೆ ಬೇಕು, ವ್ಯವಸಾಯ ಮಾಡಬೇಕಾದರೆ ಹೊಲ ಬೇಕು. ಇವುಗಳನ್ನು ನಮ್ಮ ಸರ್ಕಾರ ಹಂತಹಂತ ವಾಗಿ ಈಡೇರಿಸುತ್ತಾ ಹೋಗುತ್ತಿದೆ. ಅಂತ್ಯೋದಯ ಮಾತನ್ನು ಒಪ್ಪುವುದಕ್ಕೆ ಶಕ್ಯವಿಲ್ಲ ಎಂದು ನಾನು ವಾದಿಸುತ್ತಾ ಇದ್ದೇನೆ. ಹಳ್ಳಿಗಳಲ್ಲಿ ಮೂಲತಃ ಶಿಕ್ಷಣ ಕೊಡಬೇಕಾದರೆ ಬಾಲವಾಡಿಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕು. ಮಹಿಳಾ ಮಂಡಲಿಗಳಲ್ಲಿ ಮಹಿಳೆಯರಿಗೆ ಗೃಹಕೈಗಾರಿಕೆಗಳನ್ನು, ಕುಶಲ ಕೈಗಾರಿಕೆಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿನ ಬಗ್ಗೆ ಈಗಾಗಲೇ ಅನೇಕ ಜನ ಬಂಧುಗಳು ಹೇಳಿದ್ದಾರೆ. ಇದರ ಬಗ್ಗೆ ಹೇಳವುದೇನೆಂದರೆ, ಮುಖ್ಯವಾಗಿ ಮನುಷ್ಯನ ಆರೋಗ್ಯ ಬಹಳ ಮಹತ್ವದ್ದು. ಮನುಷ್ಯನಿಗೆ ನೀರು, ಹವೆ ಬಹಳ ಅವಶ್ಯಕವಾದುವುಗಳು. ನಮ್ಮ ಸರ್ಕಾರ ಸ್ವಚ್ಛತೆಯ ಕಡೆ ಹೆಚ್ಚು ಗಮನಕೊಡಬೇಕು.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ಮಾತನಾಡುವಾಗ ಅಂತ್ಯೋದಯ ಸ್ಕೀಂ ಏನಿದೆ ಇದನ್ನು ಜಾರಿಗೆ ತರುವುದಕ್ಕೆ ಆಗುವುದಿಲ್ಲ ಎನ್ನುವ ಅರ್ಥದಲ್ಲಿ ಹೇಳುತ್ತಿದ್ದಾರೆ. ಇದನ್ನು ಜಾರಿಗೆ ತರಲಿಕ್ಕೆ ಸಾಧ್ಯವೇ, ಇದರ ಬಗ್ಗೆ ಸರ್ಕಾರದ ಧೋರಣೆ ಏನು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ. ಅವರು ಈಗ ಹೇಳಲಿಕ್ಕೆ ಆಗದೇ ಹೋದರೆ ಉತ್ತರ ಕೊಡುವಾಗ ಹೇಳಲಿ.

ಶ್ರೀ ಬಿ.ವಿ. ಜಸಾಲಿ.—ಕೇವಲ ಬಾವಿಗಳನ್ನು ತೆಗೆಸಿದರೆ ಆಗಲಿಲ್ಲ, ಬೋರ್‌ವೆಲ್ ಹಾಕಿಸಿದರೆ ಆಗ ಲಿಲ್ಲ. ಇವು ಯಾವತ್ತೂ ಸ್ವಚ್ಛವಾಗಿರಬೇಕು. ಸಾಂಕ್ರಾಮಿಕ ರೋಗಗಳು ಉಂಟಾಗಬೇಕಾದರೆ ಮೂಲಕಾರಣ ಏನು ಎನ್ನುವುದನ್ನು ಕಂಡುಕೊಳ್ಳಬೇಕು. ಬಾವಿಗಳನ್ನು ತೆಗೆಸಿದ್ದೀರಿ, ಆದರೆ ಸ್ವಚ್ಛ

ಮಾಡಿಸುವುದಿಲ್ಲ. ಯಾವತ್ತೋ ಬ್ಲೀಚಿಂಗ್ ಹಾಕಿಸಿದರೆ ಏನಾಯಿತು. ಬಾವಿಯೊಳಗೆ ಹೊಲಸು ಇಟ್ಟುಕೊಂಡು ಬ್ಲೀಚಿಂಗ್ ಪೌಡರ್ ಹಾಕಿಸಿದರೆ ನೀರು ಶುದ್ಧವಾಗುತ್ತದೆಯೇ? ಪ್ರತಿ ವರ್ಷ ಬಾವಿಗಳನ್ನು ಸ್ವಚ್ಛಮಾಡಬೇಕು. ಗ್ರಾಮ ಆರೋಗ್ಯವನ್ನು ಕಳೆದುಕೊಳ್ಳದ ಹಾಗೆ ಹೆಚ್ಚು ಗಮನಕೊಡಬೇಕು. ನಮ್ಮ ಸರ್ಕಾರದ ವತಿಯಿಂದ ಸುಧಾರಿತ ಬೀಜಗಳನ್ನು, ತಳಿಗಳನ್ನು ಮುಂತಾದುವನ್ನು ಕೊಡುತ್ತಾ ಇದ್ದರು. ಇವತ್ತು ತಳಿಗಳನ್ನು ಕೊಟ್ಟು ಅವುಗಳ ಅಭಿವೃದ್ಧಿಗೆ ದವಾಖಾನೆಯನ್ನು ಸ್ಥಾಪನೆ ಮಾಡಬೇಕು. ಗ್ರಾಮಾಭಿವೃದ್ಧಿಯನ್ನು ಸರ್ವತೋಮುಖವಾಗಿ ಮಾಡಬೇಕು ಎಂದು ಸಲಹೆ ಕೊಟ್ಟು, ಅಧ್ಯಕ್ಷರು ನಾಲ್ಕು ಮಾತುಗಳನ್ನಾಡಲು ಅಪ್ಪಣೆ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

೩–೩೦ ಪಿ.ಎಂ.

ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರ ತಾಲ್ಲೋಕ್ ಬೋರ್ಡ್ ಮತ್ತು ಪಂಚಾಯಿತಿ ರಾಜ್ಯಗಳ ಬಗ್ಗೆ ಅನೇಕ ಮಿತ್ರರು ಮಾತನಾಡಿದ್ದಾರೆ. ನಾನು ಇದರ ಬಗ್ಗೆ ಎರಡು ಮಾತುಗಳನ್ನು ಪ್ರಸ್ತಾಪ ಮಾಡಲು ಇಚ್ಛಿಪಡುತ್ತೇನೆ. ವಿಶೇಷವಾಗಿ ಪಂಚಾಯಿತಿ ರಾಜ್ಯಗಳ ಬಗ್ಗೆ ಹೇಳುವುದಾದರೆ ಸಮಾಜವಾದ ಪ್ರಜಾಪ್ರಭುತ್ವದ ತಳಹದಿ ಎಂದರೆ ಪಂಚಾಯಿತಿ ರಾಜ್ಯ. ಅದು ಯಶಸ್ವಿಯಾಗಿ ನಡೆದರೆ ಮಾತ್ರ ಪ್ರಜಾಪ್ರಭುತ್ವ ಸುಗಮವುವಾಗಿ ನಡೆದುಕೊಂಡು ಹೋಗಲು ಸಾದ್ಯವಾಗುತ್ತದೆ. ಪಂಚಾಯಿತಿ ರಾಜ್ಯಗಳು ಯಶಸ್ವಿಯಾಗಿ ನಡೆಯಲು ಅವರಿಗೆ ಹೆಚ್ಚಿನ ಅಧಿಕಾರ ಕೊಟ್ಟಿಲ್ಲ ಯೋಜನೆಗಳನ್ನು ಮಾಡಿ ಹಣ ಹೆಚ್ಚಿಗೆ ಕೊಡಬೇಕು. ೫ ವರ್ಷದ ಪಂಚವಾರ್ಷಿಕ ಯೋಜನೆಗಳಲ್ಲಿ ಇಷ್ಟೆಲ್ಲ ಸೌಲಭ್ಯಗಳನ್ನು ಕೊಟ್ಟು ಪಂಚಾಯತಿಗಳು ಹಿಂದುಳಿಯುವುದಕ್ಕೆ ಒಂದು ದಿಟ್ಟವಾದ ಯೋಜನೆ ಇಲ್ಲದಿರುವುದೇ ಕಾರಣವಾಗಿರುತ್ತದೆ. ಇದಕ್ಕಾಗಿ ಮಾಡಿದಂಥ ಸ್ಕೀಮ್‌ಗಳು ವಾಸ್ತವವಾಗಿ ಇಂಪ್ಲಿಮೆಂಟ್ ಆಗಿಲ್ಲ. ಆದ್ದರಿಂದಲೇ ಇದು ವಿಫಲವಾಗುವುದಕ್ಕೆ ಕಾರಣವಾಗಿರುತ್ತದೆ. ಈ ದೇಶದ ೭೮ ಪರ್ಸೆಂಟ್ ಜನ ಹಳ್ಳಿಗಾಡಿನಲ್ಲಿರುವಂಥ ಜನರಾಗಿರುತ್ತಾರೆ. ಅವರ ಖರ್ಚುಗಳನ್ನು ನೋಡಿಕೊಂಡು ಅವರ ಅವಶ್ಯಕತೆಗಳನ್ನು ನೋಡಿಕೊಂಡು ಪ್ರಗತಿಮಾಡಿದರೆ ಮಾತ್ರ ಪಂಚಾಯುತಿ ರಾಜ್ಯ ಯಶಸ್ವಿಯಾಗುತ್ತದೆ ಎಂದು ಈವತ್ತು ನಾನು ಹೇಳುತ್ತಿದ್ದೇನೆ. ವಿಚಾರಮಾಡಿ ನೋಡಿದಾಗ ಎರಡು ಕಾರಣಗಳು ಇಲ್ಲಿ ಕಂಡುಬರುತ್ತವೆ. ಟಿ.ಡಿ.ಬಿ. ಮೀಟಿಂಗ್‌ನಲ್ಲಿ ಮುಖ್ಯವಾಗಿ ಪ್ಲಾನ್‌ಗಳು ತಯಾರಾಗಿ ಸಿಗ್‌ನೇಚರ್‌ಗೆ ಮಾತ್ರ ಬರುತ್ತದೆ. ಪ್ಲಾನ್ ಎಷ್ಟು ಲಕ್ಷ ಅಪ್ರೂವ್ ಮಾಡಿದ್ದಾರೆ ಎನ್ನುವುದು ತಿಳಿಯುವುದಿಲ್ಲ. ಪ್ಲಾನ್ ಅಪ್ರೂವ್‌ಮಾಡಿದಾಕ್ಷಣ, ಸಿಗ್‌ನೇಚರ್ ಮಾಡಿದಾಕ್ಷಣ ಪಂಚಾಯುತಿರಾಜ್ಯ ಮುಂದೆ ಬರುವುದಿಲ್ಲ. ಎಲ್ಲ ಜನರು ಮುಂದೆ ಬರುವುದಕ್ಕೆ, ಎಷ್ಟು ಖರ್ಚುಮಾಡಬೇಕು ಎನ್ನುವುದನ್ನು ತಿಳಿದುಕೊಂಡರೆ ಮಾತ್ರ ಪ್ರಜಾಪ್ರಭುತ್ವದಲ್ಲಿ ಸಮಾಜವಾದವನ್ನು ಜಾರಿಗೆತರಲಿಕ್ಕೆ ಸಾಧ್ಯವಾಗುತ್ತದೆ. ಈವತ್ತು ಇಂಡಿಯಾ ಸರ್ಕಾರದವರನ್ನು ಎಲ್ಲ ಅಧಿಕಾರವನ್ನು ಕೇಂದ್ರೀಕೃತ ಮಾಡಿಕೊಳ್ಳುತ್ತಿದ್ದೀರಿ. ಹೆಚ್ಚು ಹಣ ಮತ್ತು ಹೆಚ್ಚಿನ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಕೊಡಬೇಕೆಂದು ಕೇಳುತ್ತಿದ್ದೀರಿ. ಯಾವ ಮನುಷ್ಯನೇ ಆಗಲಿ ಏನನ್ನು ಕೇಳಬೇಕಾದರೂ ಮನಸ್ಸು ಸ್ವಚ್ಛತೆ ಇಟ್ಟುಕೊಂಡು ಕೇಳಬೇಕು. ಇಲ್ಲಿ ಅಧಿಕಾರವನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ದುರುಪಯೋಗ ಮಾಡುವಂಥ ಚಟದಿಂದ ಮಾತ್ರ ರಾಜ್ಯಸರ್ಕಾರಗಳಿಗೆ ಹೆಚ್ಚಿನ ಅಧಿಕಾರಬೇಕೆಂದು ಕೇಳುತ್ತಿದ್ದೀರಿ. ಆದರೆ ನೀವು ಮಾತ್ರ ಏನು ಮಾಡುತ್ತಿದ್ದೀರಿ ಎಂದು ಕೇಳಬೇಕಾಗಿದೆ. ತಾಲ್ಲೂಕ್ಕು ಬೋರ್ಡ್‌ಗಳಿಗೆ, ಡಿ.ಡಿ.ಸಿ. ಗಳಿಗೆ, ಪಂಚಾಯುತಿಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂದು ಕೇಳಬೇಕಾಗಿದೆ. ವಿಕೇಂದ್ರೀಕರಣವಾಗಬೇಕು. ನೈತಿಕ ಹಕ್ಕುಬೇಕೆಂದು ಭಾರತಸರ್ಕಾರವನ್ನು ಕೇಳುತ್ತೀರುವ ನೀವು ಮೊದಲು ವಿಕೇಂದ್ರೀಕರಣಮಾಡಿ ಪಂಚಾಯುತಿಗಳಿಗೆ ವಯಬಲ್ ಇನ್ಸಿಟ್ಯೂಷನ್‌ಗಳೆಂದು ಮಾಡಿ ಅವನ್ನು ಮುಂದೆ ತರಲಿಕ್ಕೆ ಪ್ರಯತ್ನ ಮಾಡಿದರೆ ನೀವು ಶಕ್ತಿಯನ್ನು ಗಳಿಸುವುದಕ್ಕೆ ಸಾಧ್ಯವಾಗುತ್ತದೆ, ಆ ರೀತಿ ಮಾಡದೆ ಕೇಂದ್ರ ಸರ್ಕಾರವನ್ನು ತಾವು ಕೇಳುವುದು ತಪ್ಪು ಎಂದು ಹೇಳುತ್ತೇನೆ. ಹತ್ತು ವರ್ಷಗಳಾದರೂ ಎಲೆಕ್ಷನ್ ಮಾಡದಿರುವುದು ನ್ಯಾಯವೇ? ಮಹಾರಾಷ್ಟ್ರದಲ್ಲಿ ವಾಟರ್ ರೇಟನ್ನು ಜಾಸ್ತಿ ಮಾಡಿರುತ್ತಾರೆ ಆದ್ದರಿಂದ ನಾವು ಕೂಡ ವಾಟರ್ ರೇಟನ್ನು ಜಾಸ್ತಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಮಹಾರಾಷ್ಟ್ರದವರು ಮಾಡಿರುವುದರಿಂದ ನಾವೂ ವಾಟರ್ ರೇಟನ್ನು ಜಾಸ್ತಿ ಮಾಡುತ್ತೇವೆಂದು ಹೇಳುವುದಕ್ಕೆ ನಾಚಿಕೆಯಾದರೂ ಬೇಡವೇ? ನಿಮಗೆ ಅನುಕೂಲವಾಗಿದ್ದರೆ ಇತರ ರಾಜ್ಯಗಳನ್ನು ಉದಾಹರಣೆಗೆ ತೆಗೆದುಕೊಳ್ಳುವುದು ಒಂದು ಪರಿಪಾಠವಾಗಿರುತ್ತದೆ. ಮಹಾರಾಷ್ಟ್ರದವರು ಪಂಚಾಯುತಿ ರಾಜ್ಯವನ್ನು ಎಷ್ಟರಮಟ್ಟಿಗೆ ಯಶಸ್ವಿಯಾಗಿ ಮಾಡಿದ್ದಾರೆಂಬುದು ತಾವು ತಿಳಿದುಕೊಂಡಿರುತ್ತೀರಾ ಎಂದು ಕೇಳ

ಬೇಕಾಗಿದೆ. ೧೦–೨೦ ಕೋಟಿ ರೂಪಾಯಿಗಳನ್ನು ಜಿಲ್ಲಾ ಪರಿಷತ್ ಅಧ್ಯಕ್ಷರು ಖರ್ಚುಮಾಡುವಷ್ಟು ಅಧಿಕಾರವನ್ನು ಅವರಿಗೆ ಕೊಟ್ಟಿರುತ್ತಾರೆ. ಆದ್ದರಿಂದ ಇಲ್ಲಿಯೂ ಕೂಡ ಅದೇ ರೀತಿಯಾದ ಅಧಿಕಾರವನ್ನು ತಾಲ್ಲೂಕ್ ಬೋರ್ಡ್, ಮತ್ತು ಜಿಲ್ಲಾ ಪರಿಷತ್ತಿಗೆ ಕೊಟ್ಟು ರಾಜ್ಯಾದ್ಯಂತ ಜನತಾ ರಾಜ್ಯವನ್ನು ಮಾಡಬೇಕೆಂದು ಹೇಳುತ್ತೇನೆ.

ಸ್ವಾತಂತ್ರ್ಯ ಬಂದು ೩೦ ವರ್ಷಗಳಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾಕಾಲೇಜುಗಳ ಸೌಲಭ್ಯ ಸಾಕಷ್ಟು ಇನ್ನೂ ಒದಗಿಸಿಲ್ಲ. ಮಂತ್ರಿಗಳಾಗಿ ವಿಧಾನಸೌಧದಲ್ಲಿ ಕುಳಿತು ಮಾಡತಕ್ಕಂಥ ಕೆಲಸವನ್ನು ಸೆಕ್ರೆಟರಿಯವರೊಬ್ಬರಿಗೆ ಅಧಿಕಾರವನ್ನು ಕೊಟ್ಟಿದ್ದರೆ ಇದಕ್ಕಿಂತ ಮೂರುಪಟ್ಟು ಜಾಸ್ತಿ ಕೆಲಸ ಮಾಡುತ್ತಿದ್ದರು ಎಂದು ಹೇಳುತ್ತೇನೆ. ಪ್ರತಿಯೊಂದು ಸಮಿತಿಯಲ್ಲೂ ರಾಜಕೀಯ, ತಾಲ್ಲೂಕ್ ಬೋರ್ಡ್, ಪಂಚಾಯತಿ ರಾಜ್ಯ, ಸಹಕಾರಿಕ್ಷೇತ್ರ ಎಲ್ಲಾ ಕ್ಷೇತ್ರಗಳಲ್ಲಿಯೂ ರಾಜಕೀಯ ನಡೆಯುತ್ತಿದೆ. ಮಾನ್ಯ ಶ್ರೀ ಕೆ. ಎಚ್. ಪಾಟೀಲರ ಊರು ಉಲಕೋಟೆ ಯಲ್ಲಿ ಗ್ರಾಮಪಂಚಾಯತಿ ಎಲೆಕ್ಷನ್ ನಡೆಯಬೇಕಾಗಿದ್ದು ಅದನ್ನು ೨ ವರ್ಷ ಮುಂದೆ ಹಾಕಿದಿರಿ. ಇದಕ್ಕೆ ಕಾರಣವಾದರೂ ಏನು ಎಂದು ಕೇಳುತ್ತೇನೆ. ನಿಮಗೆ ಎಲ್ಲಿ ಅನುಕೂಲವಾಗಿ ಕಂಡುಬರುತ್ತದೋ ಅಂಥ ಕಡೆ ಪಂಚಾಯತಿಗಳ ಎಲೆಕ್ಷನ್ ಮಾಡಿಕೊಂಡು ಬಂದಿರುತ್ತೀರಿ, ಎಲ್ಲಿ ನಿಮಗೆ ಸಪೋರ್ಟ್ ಇಲ್ಲವೆಂದು ಕಂಡುಬಂದಿರುತ್ತದೋ ಅಂಥ ಕಡೆ ಚುನಾವಣೆಯನ್ನು ಮುಂದೂಡಿಕೊಂಡು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರೆಂದು ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಆರುವರ್ಷಗಳ ಹಿಂದೆ ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿ ಕಾಲಿಂಗ್ ಅಟೆಕ್ಷನ್ ನೋಟೀಸ್ ಕೂಡ ಕಳುಹಿಸಿಕೊಟ್ಟಿದ್ದೆ. ಅದಕ್ಕೆ ಆಶ್ವಾಸನೆಯನ್ನೂ ಕೂಡ ಕೊಟ್ಟಿದ್ದರು, ಬೀದರ್ ಜಿಲ್ಲೆಗೆ ಎಷ್ಟು ಖರ್ಚಾದರೂ ಸರಿ ಒಂದು ಪರ್ಮನೆಂಟ್ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದರು. ಮೂವತ್ತು ವರ್ಷಗಳಿಂದ ಮಾಡಲಾಗದ ಕೆಲಸವನ್ನು ಒಂದು ತಿಂಗಳಲ್ಲಿಯೇ ಮಾಡುತ್ತೇವೆಂದು ಹೇಳಿದರೆ ಇದು ಸಾಧ್ಯವೇ ಎಂದು ಕೇಳುತ್ತೇನೆ. ನಮ್ಮ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ೯೫ ವಿಲೇಜ್‌ಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಮಾನ್ಯ ಮಂತ್ರಿಯವರು ೨ ತಿಂಗಳ ಹಿಂದೆ ಅಲ್ಲಿ ನೀರು ಒದಗಿಸಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದರೂ ಸಹ ನೀರಿನ ವ್ಯವಸ್ಥೆಯನ್ನು ಮಾಡಿಲ್ಲ. ಜನರು ನೀರಿಗಾಗಿ ಪರದಾಡುತ್ತಿದ್ದಾರೆ. ಅಲ್ಲಿ ಟೆಂಪರರಿ ಯಾಗಿ ಕೂಡ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಅವಕಾಶ ಮಾಡಿಲ್ಲ. ಅಲ್ಲಿ ೧೯೭೨–೭೩ ರಲ್ಲಿ ಅನ್‌ಪ್ರಿಸಿಡೆಂಟ್ ಫ್ಯಾಮೈನ್ ಇತ್ತು. ಆಗ ಒಂದೆರಡು ವರ್ಷ ಸರ್ಕಾರದವರು ನೀರು ಒದಗಿಸುವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರು. ಆಮೇಲೆ ೪–೫ ವರ್ಷಗಳಿಂದ ಅಲ್ಲಿ ಏನೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಇನ್ನು ೩೦ ವರ್ಷಗಳಾದರೂ ಸರ್ಕಾರಕ್ಕೆ ನೀರನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಕಾಣುತ್ತದೆ. ಅವರಿಗೆ ಜನರು ಅಲ್ಲಿ ಸತ್ತರೂ ಚಿಂತೆಯಿಲ್ಲ ಎಂದು ಕಾಣುತ್ತದೆ. ಹೀಗಾದರೆ ನೀರು ಒದಗಿಸಿ ಕೊಡುವ ಸ್ಕೀಮ್ ಏತಕ್ಕೆ ಇದೆಯೆಂದು ಕೇಳುತ್ತೇನೆ. ಇದೇ ಸದನದಲ್ಲಿ ಮಾನ್ಯ ಮಂತ್ರಿಯವರು, ಯಾವ ಹಳ್ಳಿಗಳಲ್ಲಿ ನೀರಿನ ವ್ಯವಸ್ಥೆ ಇಲ್ಲ ಅಲ್ಲಿ ನೀರು ಒದಗಿಸಿಕೊಡುತ್ತೇವೆ. ಎಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದನ್ನು ಪೂರ್ತಿ ಮಾಡುವುದಕ್ಕಾಗಿ ಬೀದರ್ ಜಿಲ್ಲೆಯಲ್ಲಿ ಎನ್. ಆರ್. ಡಬ್ಲ್ಯು. ಎಸ್ ಸ್ಕೀಮನ್ನು ತೆಗೆದುಕೊಂಡಿದ್ದರು. ಆದರೆ ಅಲ್ಲಿ ಯಾವುದನ್ನೂ ಕಂಪ್ಲೀಟ್ ಮಾಡಿಲ್ಲ. ಅಲಿ ಏನು ಮಾಡಿದ್ದಾರೆ ಎಂಬ ಬಗ್ಗೆ ಎನ ಕ್ವೈರಿ ಮಾಡುವುದಕ್ಕೂ ಸರ್ಕಾರ ತಯಾರು ಇಲ್ಲ. ಗುಲ್ಬರ್ಗ ದಲ್ಲಿ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಪ್ರೋಗ್ರಾಮನ್ನು ಹಾಕಿದ್ದರು. ಯಾವ ಪ್ರಕಾರ ಅವರು ಚಾಲೂ ಮಾಡಿದ್ದರೋ ಅದೇ ಪ್ರಕಾರ ಇದೆ. ಪ್ರೋಗ್ರಾಂ ಯಶಸ್ವಿಯಾಗಿಲ್ಲ. ಅಲ್ಲಿ ಜನರು ಕುಡಿಯುವುದಕ್ಕೆ ನೀರು ಇಲ್ಲದೆ ಸತ್ತರೆ ಸಾಯಲಿ, ನಮ್ಮದು ಕುರ್ಚಿ ಭದ್ರವಾಗಿ ಇದ್ದರೆ ಸಾಕು ಎಂದು ಹೇಳುವ ರೀತಿಯಲ್ಲಿ ಕೆಲಸ ನಡೆಯುತ್ತಾ ಇದೆ. ಈ ರೀತಿ ಮಾಡಿದರೆ ದೇಶದ ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಿದ್ದೇನೆ.

ಇನ್ನು ನಾನು ಹರಿಜನರ ಮನೆಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರತಿಯೊಂದು ಊರಿನಲ್ಲಿಯೂ ಹರಿಜನರಿಗೆ ಇರಲಿಕ್ಕೆ ಮನೆ ಇಲ್ಲ. ನಮ್ಮಲ್ಲಿ ೨೦೦ ರೂಪಾಯಿಗಳನ್ನು ಕೊಟ್ಟು, ಜೋಪಡಿಯನ್ನು ಕಟ್ಟಿಸುತ್ತಿದ್ದಾರೆ. ಅದು ಗಾಳಿಗೆ ಹಾರಿಹೋಗುತ್ತಿದೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಈ ತರಹ ೨೦೦ ಜೋಪಡಿಗಳು ಬಿದ್ದು ಹೋಗಿವೆ. ಕಟ್ಟಿದ ೩ ತಿಂಗಳಿಗೇ ಅವು ಬಿದ್ದು ಹೋಗುತ್ತವೆ. ಆದರೆ ಸರ್ಕಾರದವರು ದೊಡ್ಡ ಸಂಖ್ಯೆಯಲ್ಲಿ ಅವರಿಗೆ ಲಕ್ಷಾಂತರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ. ಇನ್ನು ಕಮ್ಯುನಿಟಿ ಹಾಲ್ ಬಗ್ಗೆ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು

ಇಟ್ಟಿದ್ದಾರೆ. ಆದರೆ ಕೆಲಸ ಆಗುತ್ತಾ ಇಲ್ಲ. ಈ ಜನರ ಸೇವೆ ಮಾಡುತ್ತೇವೆಂದು ಹೇಳಿಕೊಂಡು ಆ ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಆ ಜನರನ್ನು ಕೆಳಕ್ಕೆ ತುಳಿಯುತ್ತಿದ್ದಾರೆ. ಪ್ರಜಾಪ್ರಭುತ್ವ ರಾಜ್ಯದಲ್ಲಿ ಅವರನ್ನು ಅನುಕೂಲವಾಗಿ ಇರಗೊಡುತ್ತಾ ಇಲ್ಲ. ಇದು ಒಂದು ವಿಧವಾದ ಮರ್ಡರ್ ಎಂದು ಹೇಳಿದರೂ ತಪ್ಪಾಗುವುದಿಲ್ಲ. ನಾನು ಖಂಡಿತವಾಗಿಯೂ ಹೇಳುತ್ತಿದ್ದೇನೆ. ತಾವು ಈ ದಿಶೆಯಲ್ಲಿ ಜಾಗ್ರತರಾಗಬೇಕು. ತಾವು ಜಾಗ್ರತರಾಗದಿದ್ದರೆ ತೊಂದರೆ ಇದೆ. ಯಾವ ಜನರಿಗೆ ತಾವು ಅನ್ಯಾಯ ಮಾಡುತ್ತಿದ್ದೀರಿ, ಯಾವ ಜನರನ್ನು ತುಳಿಯುತ್ತಿದ್ದೀರಿ ಅವರು ಇನ್ನು ಮುಂದೆ ಸುಮ್ಮನೆ ಕೂಡುವುದಕ್ಕೆ ಸಾಧ್ಯವಿಲ್ಲ. ತಾವು ಇನ್ನು ಆರು ತಿಂಗಳೊಳಗೆ ಕೋಆಪರೇಟಿವ್ ಆಕ್ಟ್ ಆಗಲೀ, ತಾಲ್ಲೂಕ್ ಬೋರ್ಡ್ ಆಕ್ಟ್ ಆಗಲೀ ಸರಿಯಾಗಿ ಮಾಡದಿದ್ದರೆ ಹಿಂದುಳಿದ ಜನರಿಗೆ ಏನು ಹಕ್ಕು ಇದೆ ಆ ಹಕ್ಕನ್ನು ಅವರಿಗೆ ಕೊಡದಿದ್ದರೆ, ಹಳ್ಳಿ ಜನರ ಅಭಿವೃದ್ಧಿಗೆ ಒಳ್ಳೆಯ ಸ್ಕೀಮ್‌ಗಳನ್ನು ಮಾಡದಿದ್ದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಕಿಸಾನರು, ಕೋಆಪರೇಟಿವ್ ಸೊಸೈಟಿಯ ಮೆಂಬರುಗಳು, ತಾಲ್ಲೂಕು ಬೋರ್ಡ್ ಮೆಂಬರುಗಳು ತಮ್ಮ ವಿರುದ್ಧ ಹೋರಾಟ ಮಾಡುತ್ತಾರೆ. ಇನ್ನು ಮುಂದೆ ಚುನಾವಣೆಯಲ್ಲಿ ತಮಗೆ ೯೯ ಪರ್ಸೆಂಟ್ ದಾಖಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ಜನಗಳನ್ನು ಡಿಸ್ಸೀವ್ ಮಾಡಿ ಓಟು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).—ಮಾನ್ಯ ಅಧ್ಯರೇ, ಈಗಾಗಲೇ ನಮ್ಮ ಮಿತ್ರರು ಮತ್ತು ನಮ್ಮ ಮಾನ್ಯ ಸದಸ್ಯರುಗಳು ಈ ಪಂಚಾಯತ್‌ರಾಜ್ ಮತ್ತು ರೂರಲ್ ಡೆವಲಪ್‌ಮೆಂಟ್ ಬೇಡಿಕೆಗಳ ಬಗ್ಗೆ ವಿಷದವಾಗಿ ಮಾತನಾಡಿದ್ದಾರೆ. ಮಾನ್ಯ ಮಂತ್ರಿಯವರು ಸಭೆಯ ಮುಂದೆ ಇಟ್ಟಿರತಕ್ಕಂಥ ತಮ್ಮ ಇಲಾಖೆಯ ಬೇಡಿಗಗಳನ್ನು ನಾನು ವಿರೋಧಿಸುತ್ತಾ ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈಗಾಗಲೇ ತಮಗೆ ಗೊತ್ತಿರುವ ಹಾಗೆ ಮತ್ತು ಈ ದೇಶಕ್ಕೆ ಗೊತ್ತಿರುವ ಹಾಗೆ ನಮ್ಮ ಭಾರತ ದೇಶ ಹಳ್ಳಿಗಳಿಂದ ತುಂಬಿದೆ. ಈ ಹಳ್ಳಿಗಳ ಉದ್ಧಾರವಾಗಬೇಕು, ಹಳ್ಳಿಯ ಜನರು ಸರ್ವತೋಮುಖವಾಗಿ ಮುಂದುವರಿದರೆ ನಮ್ಮ ದೇಶ ಮುಂದುವರಿದಹಾಗೆ ಆಗುತ್ತವೆ ಎಂದು ನಮ ಹಿರಿಯರು . ನಮಗೆ ಸ್ವಾತಂತ್ರವನ್ನು ತಂದುಕೊಟ್ಟಂಥ ಮಹಾತ್ಮಗಾಂಧಿ ಮತ್ತು ಪಂಡಿತ್ ಜವಹರಲಾಲ್ ನೆಹರೂರವರು ಬಹಳ ಕಳಕಳಿಯಿಂದ ಹೇಳಿದ್ದಾರೆ. ಈ ವಿಚಾರ ತಮಗೂ ಗೊತ್ತಿದೆ. ಸ್ವಾಮಿ, ಇವತ್ತಿನ ದಿವಸ ನಮ್ಮ ಮಾನ್ಯ ಮಂತ್ರಿಯವರು ನಮ್ಮ ಹಳ್ಳಿಗಳನ್ನು ಎಷ್ಟು ನಿರ್ಲಕ್ಷವಾಗಿ ಕಂಡಿದ್ದಾರೆ ಎಂದರೆ ಅವರ ಬಜೆಟನು ನೋಡಿದರೆ ಅದು ನಮಗೆ ಗೊತ್ತಾಗುತ್ತದೆ. ಸರ್ಕಾರದವರು ದೊಡ್ಡ ದೊಡ್ಡ ಪಟ್ಟಣಗಳಿಗೆ ಯಾವ ರೀತಿಯ ಮಹತ್ವವನ್ನು ಕೊಡುತ್ತಿದ್ದಾರೆ, ಯಾವ ರೀತಿಯ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ, ಅದೇ ರೀತಿಯಲ್ಲಿ ಹಳ್ಳಿಗಳಿಗೂ ಪ್ರಾಮುಖ್ಯತೆಯನ್ನು ಕೊಡುತ್ತಾ ಇಲ್ಲ ಎನ್ನತಕ್ಕಂಥ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಳ್ಳಿಯಲ್ಲಿ ಇರತಕ್ಕಂಥ ವ್ಯವಸಾಯಗಾರರ ಬಗ್ಗೆ. ಹಳ್ಳಿಯಲ್ಲಿರತಕ್ಕಂಥ ರೈತರ ಬಗ್ಗೆ ನಮಗೆ ಕಳಕಳಿ ಇದೆ. ಆದರಂತೆ ಅವರ ಅಭಿವೃದ್ಧಿಗಾಗಿ ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಆ ಯೋಜನೆಗಳನ್ನು ಸರ್ಕಾರದವರು ಕಾರ್ಯರೂಪಕ್ಕೆ ತರುತ್ತಿದ್ದಾರೆಯೇ ಎಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ. ಕೇವಲ ಕಮ್ಯುನಿಟಿ ಡೆವಲಪ್‌ಮೆಂಟ್ ಹೆಸರಿನಲ್ಲಿ, ಅಲ್ಲಿ, ಇಲ್ಲಿ ಸ್ವಲ್ಪ ದುಡ್ಡನ್ನು ಕೊಟ್ಟು, ಸ್ಕೂಲ್ ಬಿಲ್ಡಿಂಗ್‌ಗೆ ೧ ಲಕ್ಷ, ಅಗ್ರಿಕಲ್ಚರ್‌ಗೆ ೧ ಲಕ್ಷ, ರೋಡ್‌ಗಳಿಗೆ ೧೦ ಸಾವಿರ ಈ ರೀತಿ ಅಲ್ಪಸ್ವಲ್ಪ ದುಡ್ಡನ್ನು ಕೊಟ್ಟಿದ್ದಾರೆ. ಹಳ್ಳಿಯ ಜನಕ್ಕೆ 'ನಿಮ್ಮನ್ನು ನಾವು ಉದ್ಧಾರ ಮಾಡುತ್ತೇವೆ, ನಿಮ್ಮ ಸೇವೆಗಾಗಿ ಬಿ. ಡಿ. ಓ ಆಫೀಸರ್ಸ್, ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ಸ್, ಪಂಚಾಯತ್ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಇಟ್ಟಿದ್ದೇವೆ ; ಗ್ರಾಮಸುಧಾರಕರು ಇದ್ದಾರೆ ; ನಿಮ್ಮ ಮಕ್ಕಳ ವಿದ್ಯಾಭ್ಯಾಸ, ಕುಡಿಯುವ ನೀರಿನ ವ್ಯವಸ್ಥೆ, ರಸ್ತೆಗಳು, ಸ್ಕೂಲ್ ಬಿಲ್ಡಿಂಗ್‌ಗಳು ಇದನ್ನೆಲ್ಲಾ ನಾವು ಮಾಡಿಕೊಡುತ್ತೇವೆ, ನೀವೇನೂ ಹೊರಬೇಕಾಗಿಲ್ಲ'' ಎಂದು ಹೇಳಿ ಅವರಿಗೆ ಸುಳ್ಳು ಆಶ್ವಾಸನೆಗಳನ್ನು ಕೊಟ್ಟು ಅವರಿಗೆ ಮೋಸ ಮಾಡುತ್ತಿದ್ದಾರೆ. ಇದಕ್ಕೆ ಈ ಬಜೆಟ್ ಸಾಕ್ಷಿಯಾಗಿದೆ. ಸರ್ಕಾರದವರು ಹಳ್ಳಿಯ ಉದ್ಧಾರ ಮಾಡುವುದಕ್ಕೋಸ್ಕರ, ರೂರಲ್ ಡೆವಲಪ್‌ಮೆಂಟ್‌ಕೋಸ್ಕರ ಸುಮಾರು ೧೬ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿರತಕ್ಕಂಥಾದು ಹೇಯವಾದುದ್ದು ; ಅದನ್ನು ಹೇಳುವುದಕ್ಕೂ ಕೂಡ ನಾಚಿಕೆಯಾಗುತ್ತದೆ. ೬೭೦ ಕೋಟಿ ರೂಪಾಯಿಗಳಷ್ಟು ಬಂಡವಾಳ ಇದ್ದರೂ ಕೂಡ ಕೇವಲ ೧೬ ಕೋಟಿ ರೂಪಾಯಿಗಳನ್ನು ಈ ಹಳ್ಳಿಗಾಡಿನ ಉದ್ಧಾರಕ್ಕಾಗಿ ಇಟ್ಟಕೊಂಡಿದ್ದಾರೆ ಎಂದರೆ ಇದು ಬಹಳ ನಾಚಿಕೆಗೇಡು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೂ ಅಲ್ಲದೇ ಸರ್ಕಾರದವರು

ಬಿ. ಡಿ. ಒ. ಮತ್ತು ವಿಸ್ತರಣಾಧಿಕಾರಿಗಳ ಕೈಗೆ ನಾನಾ ಸ್ಕೀಮುಗಳನ್ನು ಕೊಟ್ಟಿದ್ದಾರೆ. ಅದು ಯಾವು ವೆಂದರೆ ನ್ಯೂಟ್ರಿಷನ್ ಪ್ರೋಗ್ರಾಂ, ವುಮೆನ್ ವೆಲ್‌ಫೇರ್ ಪ್ರೋಗ್ರಾಂ, ಚಿಲ್ಡ್ರನ್ಸ್ ವೆಲ್‌ಫೇರ್ ಪ್ರೋಗ್ರಾಂ ಇಂತಹ ನಾನಾ ಸ್ಕೀಂಗಳನ್ನು ಅವರ ಕೈಗೆ ಕೊಟ್ಟು ಮಾಡಿಸುತ್ತಿದ್ದಾರೆ. ಅವರು ಇದರಲ್ಲಿ ಎಷ್ಟರಮಟ್ಟಿಗೆ ಈ ಕಾರ್ಯವನ್ನು ಸಾಧಿಸಿದ್ದಾರೆ ಎಂಬುದನ್ನು ನೋಡಬೇಕಾದರೆ ನಾವು ಈ ಬಜೆಟನ್ನು ಕೂಲಂಕುಶವಾಗಿ ಓದಿ ಅರ್ಥ ಮಾಡಿಕೊಂಡರೆ ಇದು ಗೊತ್ತಾಗುತ್ತದೆ. ಈ ನ್ಯೂಟ್ರಿಷನ್ ಪ್ರೋಗ್ರಾಂ ನಲ್ಲಿ ನಮ್ಮ ಅರಕಲಗೂಡು ತಾಲ್ಲೂಕು ಸೇರಿದೆ. ಇದಕ್ಕೆ ಸೆಂಟ್ರಲ್ ಸ್ಕೀಂನಿಂದ ೧೦ ೮೦,೦೦೦ ರೂಪಾಯಿ ಗಳು ಬಂದಿದೆ. ಇದರಲ್ಲಿ ೧,೮೧,೦೫೦ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ನ್ಯೂಟ್ರಿಷನ್ ಪ್ರೋಗ್ರಾಂ ಬಗ್ಗೆ ನಮಗೆ ಇಷ್ಟೊಂದು ಕಳಕಳಿ ಇರುವಾಗ ಸರ್ಕಾರದವರು ಅವರ ಅಧಿಕಾರಿಗಳ ಮುಖಾಂತರ ಈ ಒಂದು ಕಾರ್ಯವನ್ನು ಮಾಡಿ ಸುಮಾರು ೯ಲಕ್ಷ ರೂಪಾಯಿಗಳನ್ನು ಖರ್ಚು ಮಾಡದೇ ಹಾಗೆಯೇ ಉಳಿಸಿರತಕ್ಕಂಥ ಸಂದರ್ಭ ಇದೆ. ಇದೇ ರೀತಿ ಎಲ್ಲಾ ಸ್ಕೀಂಗಳ ವಿಚಾರದಲ್ಲಿ ಕೂಡ ಅವರಿಗೆ ಸರಿಯಾದ ಮಾಹಿತಿಯಿಲ್ಲದೇ, ಅಲ್ಲಿ ನುರಿತ ಅಧಿಕಾರಿಗಳನ್ನು ಹಾಕದೇ ಇರುವುದರಿಂದ, ಒಳ್ಳೆಯ ಟ್ರೈನಿಂಗ್ ಪಡೆದಂಥ ಅಧಿಕಾರಿಗಳನ್ನು ಹಾಕದೇ ಇರುವುದರಿಂದ ಸರ್ಕಾರದವರು ಈ ಸ್ಕೀಂಗಳನ್ನು ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗಿಲ್ಲ, ಇದರಿಂದ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಂ ಏನಾಗಿದೆ ಎಂದರೆ ಅದು ಕಾಗದದ ಮೇಲೆ ಇದೆಯೇ ಹೊರತು ಇವತ್ತಿನವರೆಗೂ ಅದು ಕಾರ್ಯಗತವಾಗಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಈ ಹೌಸಿಂಗ್ ಸ್ಕೀಂ ಎಂದು ಮಾಡಿದ್ದಾರೆ. ಈ ಹೌಸಿಂಗ್ ಸ್ಕೀಂನ್ನು ಮಾಡಿದಂಥ ಸಂದರ್ಭದಲ್ಲಿ ಆಯಾ ತಾಲ್ಲೂಕಿನಲ್ಲಿ ಕಟ್ಟಿರತಕ್ಕಂಥ ಹೌಸಿಂಗ್ ಸ್ಕೀಂನ ಮನೆಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ನನ್ನ ತಾಲ್ಲೂಕಿನಲ್ಲಿ ೧೫೦ ಅಥವಾ ೨೦೦ ಮನೆಗಳನ್ನು ಕಟ್ಟಿದ್ದಾರೆ. ಇದರಲ್ಲಿ ೧೫–೨೦ ಮನೆಗಳ ಗೋಡೆಗಳು ಬಿದ್ದುಹೋಗಿವೆ, ಹೆಂಚು ಬಿದ್ದುಹೋಗಿವೆ, ಮರ ಎಲ್ಲಾ ನೇತಾಡು ತ್ತಿದೆ. ಈ ಬಗ್ಗೆ ನಾನು ಕಾಲಿಂಗ್ ಅಟೆಂಷನ್ ನೋಟೀಸ್ ಸಹ ಕೊಟ್ಟಿದ್ದೇನೆ. ಆದ್ದರಿಂದ ಹೌಸಿಂಗ್ ಸ್ಕೀಂನಲ್ಲಿ ಕಟ್ಟಿರತಕ್ಕಂಥ ಮನೆಗಳು ಈ ಪರಿಸ್ಥಿತಿಯಲ್ಲಿವೆ. ಇನ್ನು ಸ್ಕೂಲ್ ಬಿಲ್ಡಿಂಗ್‌ಗಳೂ ಸಹ ಅದೇ ಪರಿಸ್ಥಿತಿಯಲ್ಲಿವೆ ಈಗ ೪೫೦೦ ಸ್ಕೂಲ್ ಬಿಲ್ಡಿಂಗ್ ಕಟ್ಟಿಸುವುದಕ್ಕೆ ಏರ್ಪಾಡುಮಾಡುತ್ತೇವೆ ಎಂದು ಹೇಳಿರುವುದನ್ನು ನಾನು ಬಜೆಟ್‌ನಲ್ಲಿ ನೋಡಿದ್ದೇನೆ.

ಇವತ್ತು ೪,೫೦೦ ರೂಪಾಯಿಗಳಲ್ಲಿ ಒಂದು ಶಾಲಾ ಕಟ್ಟಡವನ್ನು ಕಟ್ಟಿ ಮುಗಿಸುವುದಕ್ಕಾಗು ವುದಿಲ್ಲ. ಸುಮಾರು ೯ ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ. ೧೫–೧೬ ಅಡಿ ಆಯ ಇರ ತಕ್ಕಂಥ ಒಂದು ಶಾಲಾ ಕಟ್ಟಡವನ್ನು ಕಟ್ಟಬೇಕಾದರೆ ಕೊನೆಯ ಪಕ್ಷ ೭–೮ ಸಾವಿರ ರೂಪಾಯಿಗಳಾಗು ತ್ತದೆ. ಸರ್ಕಾರದಿಂದ ಕೊಡುವುದು ೪,೫೦೦ ರೂಪಾಯಿಗಳು. ಇನ್ನುಳಿದ ೪,೦೦೦ ಅಥವಾ ೪'೫೦೦ ರೂಪಾಯಿಗಳನ್ನು ಪಂಚಾಯಿತಿ ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ. ಆದರೆ ಅವರಿಗೆ ತಿನ್ನುವುದಕ್ಕೆ ಅನ್ನ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಇರುವಾಗ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ಪಟ್ಟಣದಲ್ಲಿ ಯಾವುದಾದರೂ ಒಂದು ಪ್ರೈಮರಿ ಸ್ಕೂಲನ್ನು ಕಟ್ಟಬೇಕಾ ದರೆ ಅದನ್ನು ಬಡ್ಜೆಟಿನಲ್ಲೇ ಅಳವಡಿಸಿಕೊಂಡು ಪೂರ್ತಿ ಹಣವನ್ನು ಸರ್ಕಾರದವರೇ ಕೊಟ್ಟು ಶಾಲಾ ಕಟ್ಟಡವನ್ನು ಕಟ್ಟಿಸುತ್ತಾರೆ. ಆದರೆ ಹಳ್ಳಿಗಾಡಿನಲ್ಲೂ ಕೂಡ ಬಿಲ್ಡಿಂಗ್‌ಗೆ ಖರ್ಚಾಗುವ ಪೂರ್ತಿ ಹಣವನ್ನು ಸರ್ಕಾರದವರು ಏಕೆ ಕೊಡಬಾರದು ? ಏಕೆ ಯೋಜನೆ ಹಾಕಬಾರದು ? ಹಳ್ಳಿಗಾಡಿನಲ್ಲಿ ರುವವರು ಕಾಂಟ್ರಿಬ್ಯೂಷನ್ ಕೊಡಬೇಕು. ಪಟ್ಟಣದಲ್ಲಿರುವವರು ಕಾಂಟ್ರಿಬ್ಯೂಷನ್ ಕೊಡಬೇಕಾ ಗಿಲ್ಲ. ಇದಕ್ಕೆ ಕಾರಣ ಏನು ಎನ್ನತಕ್ಕಂಥಾದ್ದನ್ನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ಸಾಮಾನ್ಯವಾಗಿ ನೀವು ಬಡ್ಜೆಟ್ ತಯಾರು ಮಾಡಬೇಕಾದರೆ ಹಳ್ಳಿಗಾಡಿನಲ್ಲಿರುವ ರೈತನು ಟ್ಯಾಕ್ಸ್ ರೂಪದಲ್ಲಿ, ಕಂದಾಯವನ್ನು ಕೊಡುತ್ತಾನೆ, ವಾಟರ್ ರೇಟ್ ಕೊಡುತ್ತಾನೆ. ವಿದ್ಯುಚ್ಛಕ್ತಿ ಕಂದಾಯ ಕೊಡುತ್ತಾನೆ. ಮತ್ತು ಇನ್ನೂ ಇತರೇ ಯಾವ ಯಾವುದೋ ರೀತಿಯಲ್ಲಿ ಟ್ಯಾಕ್ಸ್ ರೂಪದಲ್ಲಿ ಕೊಡು ತ್ತಾನೆ. ಗಾಳಿ ಒಂದನ್ನು ಬಿಟ್ಟು ಬಿಟ್ಟರೆ ಬಾಕಿ ಎಲ್ಲದ್ದಕ್ಕೂ ರೈತನ್ನು ಕಂದಾಯ ರೂಪದಲ್ಲಿ ಕೊಡು ತ್ತಾನೆ. ಈ ದೇಶದಲ್ಲಿ ೭೦–೭೦–೮೦ ಜನ ಪ್ರಜಾ ಸಂಖ್ಯೆಯಲ್ಲಿ ಹೆಚ್ಚಿಗೆ ಟ್ಯಾಕ್ಸ್ ಕೊಡತಕ್ಕಂಥ ಆ ಜನ ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಸಂದರ್ಭದಲ್ಲಿ ಇರುವಾಗ, ಅವರಿಂದ ಕಾಂಟ್ರಿಬ್ಯೂಷನ್ ತೆಗೆದು ಕೊಳ್ಳುವುದೇನಿದೆ ? ಇದನ್ನು ಸರ್ಕಾರದವರು ಯೋಚನೆ ಮಾಡಿ ಆ ಕಾಂಟ್ರಿಬ್ಯೂಷನ್ ತಪ್ಪಿಸಿ ಪೂರ್ತಾ ದುಡ್ಡನ್ನು ಸರ್ಕಾರದವರೇ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಳ್ಳಿಗಾಡಿನ

ರಸ್ತೆಗಳ ಬಗ್ಗೆ ಹೇಳುವುದಾದರೆ, ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಕತ್ತಲೆ ಸಮಯದಲ್ಲಿ ಹೋಗಬೇಕಾದರೆ ಬಹಳ ಕಷ್ಟ. ಆತನು ಪುನಃ ಕಾಲು ಮುರಿದುಕೊಂಡು ವಾಪಸ್ಸು ಬರತಕ್ಕಂಥ ಸಂದರ್ಭ ಉಂಟು. ಕಳೆದ ವಿಧಾನ ಸಭೆ ಚುನಾವಣೆಯಲ್ಲಿ, ಚುನಾವಣಾ ಪ್ರಚಾರಕ್ಕಾಗಿ ಹಳ್ಳಿಹಳ್ಳಿಗೂ ಹೋಗಿ ನೋಡಿದ್ದೇವೆ ನಾವು ಚುನಾವಣಾ ಪ್ರಚಾರಕ್ಕಾಗಿ ಜೀಪು–ಕಾರುಗಳನ್ನು ಮಾಡಿದ್ದೆವು ಅವುಗಳನ್ನು ಕೆಡವಿಕೊಂಡು ಎಷ್ಟೋ ದಿವಸ ಬಿದ್ದಿದ್ದೇವೆ. ಪ್ರತಿ ತಾಲ್ಲೂಕು ಬೋರ್ಡಿಗೆ ೧೦ ಸಾವಿರ ರೂಪಾಯಿಗಳನ್ನು ರಸ್ತೆಗಳಿಗಾಗಿ ಕೊಟ್ಟಿದ್ದೀರಿ, ಇದು ನಿಜಕ್ಕೂ ನಾಚಿಕೆಗೇಡಿನ ಪ್ರಸಂಗ ಎಂಬುದಾಗಿ ಹೇಳಬೇಕಾಗಿದೆ. ಈ ದೇಶವನ್ನು ಉದ್ಧಾರ ಮಾಡತಕ್ಕಂಥ ಉದ್ದೇಶವನ್ನು ಇಟ್ಟುಕೊಂಡು ಮಾಡಿರತಕ್ಕಂಥ ಬಡ್ಜೆಟ್ ಅಲ್ಲ ಎಂಬುದಾಗಿ ಹೇಳಬೇಕಾಗಿದೆ. ಆದ್ದರಿಂದ ಇದಕ್ಕೆ ಕೊಟ್ಟಿರುವ ಹಣ ಏನೇನೂ ಸಾಲದು. ಕೆರೆಯ ಬಗ್ಗೆ ಹೇಳುವುದಾದರೆ ೩—೩½ ಸಾವಿರ ರೂಪಾಯಿಗಳ ವರೆಗೆ ತಾಲ್ಲೂಕು ಬೋರ್ಡಿನವರು ಕರೆ ಕೆಲಸಕ್ಕಾಗಿ ಖರ್ಚು ಮಾಡಬಹುದು. ಮೂರು—ಮೂರುವರೆ ಸಾವಿರದಿಂದ ಏನೇನು ಸಾಲದು. ಇದರಿಂದ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಎರಡು ಮೂರು ಗುಂಡಿಗಳನ್ನು ಮುಚ್ಚುವುದಕ್ಕೆ ಮಾತ್ರ ಸಾಧ್ಯವಾಗುತ್ತದೆ. ಆದ್ದರಿಂದ ಇದಕ್ಕೆ ಇಟ್ಟಿರುವ ಹಣವನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಮತ್ತು ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿ ಇರುತ್ತಾರೆ. ಅವರು ಯಾವ ಪಕ್ಷದವರೇ ಆಗಿರಲಿ, ಅವರು ಬಿ. ಡಿ. ಒ. ರವರು ಹೇಳಿದಂತೆ ನಡೆದುಕೊಳ್ಳಬೇಕು. ಬಿ. ಡಿ. ಒ. ರವರು ಮರೆತು ಕೂತರೆ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಅಧ್ಯಕ್ಷರಾದವರು ಬಿ. ಡಿ. ಒ. ಹತ್ತಿರ ಹೋಗಿ ಮನವಿ ಮಾಡಿಕೊಳ್ಳಬೇಕಾದ ಪ್ರಸಂಗ ಇದೆ. ಆದ್ದರಿಂದ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್, ಹಾಗೂ ಜಿಲ್ಲಾ ಕೌನ್ಸಿಲ್‌ಗಳೆಂದು ಏನು ಮಾಡಿದ್ದೀರಿ ಅವರಿಗೆ ಅಧಿಕಾರವನ್ನು ಕೊಡದೇ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಸೊಸೈಟಿ ಅಧ್ಯಕ್ಷರನ್ನಾಗಿ ಮಾಡಿ ಕೂಡಿಸಿದ್ದೀರಿ. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ಅವರಿಗೆ ಮಂತ್ರಿಯಾದವರಿಗೆ, ಯಾವ ಅಧಿಕಾರ ಇದೆಯೋ ಅವರಿಗೂ ಅದೇ ರೀತಿಯ ಅಧಿಕಾರವನ್ನು ಕೊಡಿ. ಅವರೂ ಕೂಡ ಚುನಾವಣೆಯಲ್ಲಿ ಗೆದ್ದಿರತಕ್ಕಂಥ ಜನ. ಅವರ ಮೇಲೆ ನಂಬಿಕೆ ಇಟ್ಟು ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ರಾಜಗೋಪಾಲ್ (ಪಾಂಡವಪುರ)—ಸನ್ಮಾನ್ಯ ಅಧ್ಯಕ್ಷರೇ. ನಾನು ಹೆಚ್ಚಿಗೆ ಏನನ್ನೂ ಹೇಳುವುದಕ್ಕೆ ಹೋಗದೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಮಂತ್ರಿಗಳು ಈ ಸದನದಲ್ಲಿ ಏನೊಂದು ಬೇಡಿಕೆಯನ್ನು ಇಟ್ಟಿದ್ದಾರೊ, ಅದನ್ನು ತೀವ್ರವಾಗಿ ವಿರೋಧಿಸುತ್ತೇನೆ. ಕಳೆದ ೬ ವರ್ಷಗಳಲ್ಲಿ ಈ ಸರ್ಕಾರದವರು ತಾಲ್ಲೂಕು ಬೋರ್ಡ್‌ಗಳಿಗೆ ಯಾವ ರೀತಿಯ ಸಹಾಯ ಮಾಡಿದ್ದಾರೆಂಬುದರ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಆಸ್ಪತ್ರೆಗಳನ್ನು ನಡೆಸುತ್ತಿದ್ದರು. ಅದರ ೫೦ ಭಾಗ ಹಣ ಸರ್ಕಾರದಿಂದ ೧೯೬೮–೬೯ರಿಂದ ಬರಬೇಕಾಗಿದೆ. ಅದನ್ನು ಆಡಿಟ್ ಮಾಡಿ ಆರೋಗ್ಯ ಅಧಿಕಾರಿಗಳಿಗೆ ತಲುಪಿದ ಕೂಡಲೇ ಆದನ್ನು ಕೊಡಬೇಕಾಗಿತ್ತು. ಆ ರೀತಿ ಮಾಡದಿದ್ದರಿಂದ ಇವತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಸುಮಾರು ೨ ಲಕ್ಷ ೫೦ ಸಾವಿರ ರೂಪಾಯಿಗಳು ಸರ್ಕಾರದಿಂದ ಬರಬೇಕಾಗಿದೆ. ಅದು ಇವತ್ತಿನವರೆಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಬಂದಿದೆ. ಈ ರೀತಿ ಸರ್ಕಾರ ಕಳೆದ ೬–೭ ವರ್ಷಗಳಿಂದ ಏನು ಗ್ರಾಂಟನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಕೊಡಬೇಕಾಗಿತ್ತೋ, ಅದನ್ನು ಅಭಿವೃದ್ಧಿ ಸಂಸ್ಥೆಗಳಿಗೆ ಕೊಡದೆ ಹೋದನಗ ಸಮಿತಿಯ ಅಧ್ಯಕ್ಷರುಗಳಾಗಲೀ, ಅಥವಾ ಅಧಿಕಾರಿಗಳಾಗಲೀ ಯಾವ ರೀತಿ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಾರೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಇದರಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ನಡೆಸುತ್ತಿರುವ ಆಸ್ಪತ್ರೆಗಳಿಗೆ ಅನ್ಯಾಯ ಮಾಡಿದಂತಾಗಿದೆ. ತಾಲ್ಲೂಕು ಬೋರ್ಡ್ ನಡೆಸುತ್ತಿರುವ ಆಸ್ಪತ್ರೆಗಳಿಗೆ ಬಹಳ ತೊಂದರೆಯಾಗಿದೆ. ಹಿಂದೆ ಆ ಹಣವನ್ನು ಕೊಡುತ್ತೇವೆಂದು ಆಶ್ವಾಸನೆ ನೀಡಿದ್ದರು. ಅದರಂತೆ ಬಹುಶಃ ಈ ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೋ ಸೇರಿಸಿಲ್ಲವೋ ನನಗೆ ಗೊತ್ತಿಲ್ಲ.

ಇನ್ನು ವಿದ್ಯಾಭ್ಯಾಸದ ವಿಚಾರವಾಗಿ ಹೇಳುವುದಾದರೆ, ಒಂದೊಂದು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧೀನದಲ್ಲಿ ಕೊನೆಯ ಪಕ್ಷ ೧೬೦ರಿಂದ ೧೮೦ ಸಣ್ಣ ಸಣ್ಣ ಶಾಲೆಗಳು ಬರುತ್ತದೆ. ಅವುಗಳನ್ನು ರಿಪೇರಿ ಮಾಡಿಸಬೇಕಾದರೆ ಬರೀ ೮–೧೦ ಸಾವಿರ ರೂಪಾಯಿಗಳನ್ನು ಸರ್ಕಾರದವರು ತಾಲ್ಲೂಕು

ಅಭಿವೃದ್ಧಿ ಮಂಡಲಿಗೆ ಕೊಟ್ಟಿದ್ದಾರೆಂದು ಹೇಳಿದರೆ ನಿಜಕ್ಕೂ ನಾಚಿಕೆಗೇಡು. ಮಂತ್ರಿಗಳಾಗಿ, ರೈತರ ಮಕ್ಕಳಾಗಿ, ಮತ್ತೆ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿ ಹಲವಾರು ವರ್ಷ ಸೇವೆ ಮಾಡಿರ ತಕ್ಕಂಥಾವರು ಇವುಗಳ ರಿಪೇರಿಗಾಗಿ ಕೇವಲ ೮ ಸಾವಿರ ರೂಪಾಯಿಗಳನ್ನು ಕೊಟ್ಟಿರುವುದು ಏನೇನು ಸಾಲದು. ಇದನ್ನು ಹೆಚ್ಚಿಸಬೇಕೆಂದು ಹೇಳುತ್ತೇನೆ. ಯಾರಾದರೂ ದೊಡ್ಡ ದೊಡ್ಡ ಅಧಿಕಾರಿಗಳು ಬಂದರೆ, ಅಥವಾ ಯಾರಾದರೂ ಮಂತ್ರಿಗಳು ಬಂದರೆ ಆ ಬಿಲ್ಡಿಂಗ್‌ಗೆ ಸುಣ್ಣ ಬಣ್ಣ ಬಳಿಯುವುದಕ್ಕೆ ಮಾತ್ರ ಇದು ಸಾಕಾಗುತ್ತದೆ. ಕಟ್ಟಡಗಳನ್ನು ರಿಪೇರಿ ಮಾಡುವುದಕ್ಕೆ ಸಾಕಾಗುವುದಿಲ್ಲ. ಆದ್ದರಿಂದ ಇದಕ್ಕಾಗಿ ಇಟ್ಟಿರುವ ಹಣದ ಮೊತ್ತವನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ.

ಮತ್ತೆ ಬೋರ್‌ವೆಲ್ಸ್‌ನ ವಿಚಾರವಾಗಿ ಹೇಳುವುದಾದರೆ, ಕುಡಿಯುವ ನೀರಿನ ಈ ಒಂದು ದೊಡ್ಡ ಸಮಸ್ಯೆಯನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ವಹಿಸಿ ಎಷ್ಟೋ ಪೇಚಿಗೆ ಈಡುಮಾಡಿದ್ದೀರಿ; ಎಂಬುದಾಗಿ ಹೇಳಿದರೆ ತಪ್ಪಾಗಲಾರದು. ೪-೫ ಕಂಪನಿಯವರು ಒಂದೇ ತಾಲ್ಲೂಕಿನಲ್ಲಿ ಬೋರ್‌ವೆಲ್‌ಗಳನ್ನು ತೆಗೆದಿರುತ್ತಾರೆ. ಆದರೆ ಅವುಗಳ ಕೆಟ್ಟು ಹೋದಾಗ ಒಂದು ಕಂಪನಿಯವರು ಇದು ನಾವು ಮಾಡಿದ್ದಲ್ಲ ಇನ್ನೊಂದು ಕಂಪನಿಯವರು ಮಾಡಿದ್ದು. ಮತ್ತೊಬ್ಬರು ನಾವು ಮಾಡಿದ್ದಲ್ಲ. ಇನ್ನೊಬ್ಬರು ಮಾಡಿದ್ದು, ಎಂಬುದಾಗಿ ಹೇಳುತ್ತಾರೆ. ಯಾರೂ ತಕ್ಷಣ ಒಂದು ರಿಪೇರಿ ಮಾಡುವುದಿಲ್ಲ. ಈ ಪರಿಸ್ಥಿತಿ ಇರುವುದರಿಂದ, ಬೋರ್‌ವೆಲ್ಸ್‌ಗಳು ರಿಪೇರಿ ಮಾಡುವುದಕ್ಕೆ ವ್ಯವಸ್ಥಿತವಾದ ರೀತಿಯಲ್ಲಿ ಅನುಕೂಲಗಳನ್ನು ಸರ್ಕಾರದವರು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ನ್ಯೂಟ್ರಿಷಿಯನ್ ಫುಡ್ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದವರು ೧೦ ಲಕ್ಷ ರೂಪಾಯಿಗಳ ಗ್ರಾಂಟ್ ಕೊಟ್ಟರೆ ಒಂದೇ ಲಕ್ಷವನ್ನು ಮಾತ್ರ ಖರ್ಚು ಮಾಡಿದ್ದಾರೆ. ಇನ್ನು ಉಳಿಕೆ ೯ ಲಕ್ಷ ರೂಪಾಯಿ ಹಣವನ್ನು ಹಾಗೆ ಇಟ್ಟಿದ್ದಾರೆ. ಆದ್ದರಿಂದ ಅನುಕೂಲವಾಗುವಂತಹ ರೀತಿಯಲ್ಲಿ ಹಣವನ್ನು ಖರ್ಚು ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಮನೆಗಳ ವಿಚಾರವಾಗಿ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಸುಮಾರು ೪೦೦-೫೦೦ ಮನೆಗಳನ್ನು ಕಟ್ಟಿಸಿದ್ದಾರೆ. ನಿಜವಾಗಿಯೂ ಹಾಗೂ ಸತ್ಯವಾಗಿಯೂ ಹೇಳುವುದಾದರೆ ೧೦೦ ಮನೆಗಳನ್ನು ಬಿಟ್ಟರೆ, ಉಳಿದ ಮನೆಗಳ ಗೋಡೆಗಳು ಬಿದ್ದು ಹೋಗಿವೆ. ಅವರುಗಳು ನೆರಿಕೆ ಕಟ್ಟಿಸಿಕೊಂಡಿದ್ದಾರೆ. ಹರಿಜನರು—ಗಿರಿಜನರು, ಹಾಗೂ ಹಿಂದುಳಿದವರ್ಗದವರು ಮೊದಲು ಗುಡಿಸಲುಗಳನ್ನು ಹಾಕಿಕೊಂಡು ಹೇಗೋ ಅವರ ಜೀವನವನ್ನು ಮಾಡುತ್ತಿದ್ದರು. ಆದರೆ ಅವರ ಹೆಸರುಗಳನ್ನು ಉಪಯೋಗಿಸಿಕೊಂಡು ಈ ರೀತಿ ಮಾಡುವುದು ನ್ಯಾಯವಲ್ಲ. ಆದ್ದರಿಂದ ಅವರಿಗೆ ೪ ಸಾವಿರ ಅಥವಾ ೫ ಸಾವಿರ ರೂಪಾಯಿಗಳನ್ನು ಕೊಟ್ಟು ವ್ಯವಸ್ಥಿತವಾದ ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ಹಾಲಿ ಕಟ್ಟಿರತಕ್ಕಂಥ ಮನೆಗಳ ರೀತಿ ಇನ್ನು ಮುಂದೆ ಕಟ್ಟಿಸುವುದು ಬೇಡ. ಎಂಬುದಾಗಿ ಹೇಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

೪-೦೦ ಪಿ. ಎಂ.

† ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ವೇಸಾಧಾರಣವಾಗಿ ಈ ಗ್ರಾಮಾಭಿವೃದ್ಧಿಗೆ ಕೊಟ್ಟಂತಹ ಹಣ ಸಾಲದೆಂದು ಹಿರಿಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಗ್ರಾಮಾಭಿವೃದ್ಧಿಗೆ ನಮ್ಮ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂಬುದನ್ನು ನಾವು ಮೊದಲು ನೋಡಬೇಕಾಗುತ್ತದೆ. ಶೇಕಡಾ ೪೦ರಷ್ಟು ಹಣವನ್ನು ನಮ್ಮ ಸರ್ಕಾರ ತನ್ನ ಬೊಕ್ಕಸದಿಂದ ಈ ಗ್ರಾಮಗಳ ಅಭಿವೃದ್ಧಿಗಾಗಿ ಖರ್ಚು ಮಾಡಲು ಮೀಸಲಿಟ್ಟಿದೆ. ಇದು ನಿಜಕ್ಕೂ ಹೆಮ್ಮೆ ಪಡಬೇಕಾದ ಸಂಗತಿ. ಈ ಹಳ್ಳಿಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಾವು ಕೂಲಂಕಷವಾಗಿ ವಿಚಾರಿಸಿ ನೋಡಿದಾಗ, ಸರ್ವೇಸಾಧಾರಣವಾಗಿ ಹಳ್ಳಿಗಳ ರಸ್ತೆ ನಿರ್ಮಾಣಕ್ಕಾಗಿ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿರುವುದು ಹಳ್ಳಿಗಳ ಅಭಿವೃದ್ಧಿಯಲ್ಲವೇ ? ನೀರಾವರಿಗಾಗಿ ನಮ್ಮ ಸರ್ಕಾರ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದೆ. ಇದನ್ನು ಸಹ ನಾವು ಹಳ್ಳಿಗಳ ಅಭಿವೃದ್ಧಿ ಎಂದು ಪರಿಗಣಿಸಬೇಕಾಗಿದೆ ವಿಶೇಷವಾಗಿ ಅರಣ್ಯವನ್ನು ಬೆಳೆಸಲು, ಮೀನುಗಾರಿಕೆ ಬಗ್ಗೆ, ಹೈನುಗಾರಿಕೆಯ ಬಗ್ಗೆ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಎಲ್ಲ ಕಾರ್ಯಕ್ರಮ

ಗಳು ಹಳ್ಳಿಗರ ಅಭಿವೃದ್ಧಿಗಾಗಿ ಎಂದು ಧಾರಾಳವಾಗಿ ಒಪ್ಪಿಕೊಳ್ಳಬಹುದು. ಈ ಎಲ್ಲ ಕಾರ್ಯಕ್ರಮ ಗಳನ್ನು ನೋಡಿದಾಗ, ೧೯೭೧ರಿಂದ ೧೯೭೭ರ ವರೆಗೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ಆಗಿವೆ ಎಂಬುದನ್ನು ಒಪ್ಪಿಕೊಳ್ಳತಕ್ಕಂಥ ಮಾತಾಗಿದೆ. ಜೊತೆಗೆ ಈ ಬೇಡಿಕೆಗಳಲ್ಲಿ ಮುಖ್ಯವಾಗಿರತಕ್ಕಂಥ ವಿಷಯ ವೆಂದರೆ, ನ್ಯೂಟ್ರಿಷನ್ ಪ್ರೊಗ್ರಾಮು. ಹೆಣ್ಣುಮಕ್ಕಳ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಕೈಕೊಂಡಿರ ತಕ್ಕಂಥ ಈ ಯೋಜನೆಯ ಬಗ್ಗೆ ನಾವು ಹೆಮ್ಮೆ ಪಡಬೇಕಾಗಿದೆ, ಹಳ್ಳಿಗಳಲ್ಲಿ ಕುಡಿಯುವ ನೀರನ್ನು ಒದಗಿಸಲು ನಾನಾ ರೀತಿಯ ಬಾವಿಗಳನ್ನು ತೆಗೆಸಲಾಗುತ್ತಿದೆ. ಒಟ್ಟಿನಲ್ಲಿ ೧೯೭೧ರಿಂದ ೧೯೭೭ರ ವರೆಗೆ ಹಳ್ಳಿಗಳ ಅಭಿವೃದ್ಧಿ ಸಾಕಷ್ಟು ಆಗಿದೆ ಮತ್ತು ಇದಕ್ಕಾಗಿ ಸರ್ಕಾರ ಸಾಕಷ್ಟು ಹಣವನ್ನು ಒದಗಿಸುತ್ತಿದೆ ಎಂಬುದು ಒಪ್ಪತಕ್ಕಂಥ ಮಾತಾಗಿದೆ. ಡಿ.ಪಿ.ಎ.ಪಿ. ಯೋಜನೆಯ ಕೆಳಗೆ ನಮ್ಮ ಬಿಜಾಪುರ ಜಿಲ್ಲೆ ಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿವೆ. ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳು ಆಗುತ್ತಿವೆ. ಎಂದು ಹೇಳುತ್ತಿದ್ದೇನೆ. ವಿಶೇಷವೊಂದು ಹೆಮ್ಮೆಯ ಸಂಗತಿ ಎಂದರೆ, ನಮ್ಮ ಕರ್ನಾಟಕ ಸರ್ಕಾರ ಲ್ಯಾಂಡ್-ಆರ್ಮಿ

Chairman (SRI GOVIND P. VADEYARAJ) in the Chair

ಯನ್ನು ಪ್ರಾರಂಭ ಮಾಡಿ ಅದರ ಮುಖಾಂತರ ಹಳ್ಳಿಗಳಲ್ಲಿರತಕ್ಕಂಥ ನಿರುದ್ಯೋಗದ ಸಮಸ್ಯೆಯನ್ನು ಹೋಗಲಾಡಿಸಿದೆ ಎಂದು ಹೇಳಬಹುದು. ಇಡೀ ಭಾರತದಲ್ಲಿಯೋ ಮೊಟ್ಟಮೊದಲನೆಯದಾಗಿ ನಮ್ಮ ಕರ್ನಾಟಕಸರ್ಕಾರ ಈ ಒಂದು ಕಲಸವಮಾಡಿದೆ ಎಂದು ಸ್ಪಷ್ಟವಾಗಿಹೇಳಬಹುದು. ಈಒಂದು ಯೋಜನೆಯ ಮುಖಾಂತರ ನಮ್ಮ ಹಳ್ಳಿಗಳಲ್ಲಿರತಕ್ಕಂಥ ಅಭ್ಯರ್ಥಿಗಳು ಅನೇಕ ಉದ್ಯೋಗಗಳನು ಕಲಿತುಕೊಳ್ಳಲು ಅವಕಾಶ ಸಿಕ್ಕಿದೆ. ಉದಾಹರಣೆಗೆ ಹೇಳಬೇಕೆಂದರೆ, ಬ್ಲಾಕ್-ಸ್ಮಿತ್, ಆರ್ಟಿಜಾನ್ಸ್, ವೈರ್-ಮನ್ ಟ್ರೈನಿಂಗ್ ; ಇಂತಹ ಕೆಲಸಗಳನ್ನು ಕಲಿತು ಇಂದು ಅವರ ಕಾಲ ಮೇಲೆ ಅವರೇ ನಿಂತುಕೊಂಡು ಸ್ವಂತ ಉದ್ಯೋಗ ಮಾಡುವಂತಹ ಸಾಮರ್ಥ್ಯವನ್ನು ಪಡೆದಿದ್ದಾರೆ: ಇದು ಹೆಮ್ಮೆ ಪಡುವಂತಹ ಸಂಗತಿ.

ಇನ್ನು ಕೊನೆಯದಾಗಿ ಸಕಾರದವರು ಹಳ್ಳಿಗಳ ಅಭಿವೃದ್ಧಿಗೆ ಎಷ್ಟು ಕೋಟಿ ರೂ. ಗಳನ್ನು ಕೊಟ್ಟರೂ ಸಾಲದು, ಒಂದೇ ಮಾತಿನಲ್ಲಿ ಹೇಳುತ್ತೇನೆ, ಸರ್ಕಾರದವರು ಕೊಟ್ಟ ಹಣ ಸದುಪಯೋಗ ವಾಗಬೇಕು, ಅದು ಸರಿಯಾಗಿ ಹಳ್ಳಿಗರ ಒಂದು ಜಗತ್ತಿಗೆ ಹೋಗಿ ಮುಟ್ಟಬೇಕಂದು ಒತ್ತಿ ಒತ್ತಿ ಹೇಳುತ್ತಿದ್ದೇನೆ.

ಇನ್ನು ಹಳ್ಳಿಗಳಲ್ಲಿರತಕ್ಕಂಥ ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಉದಾಹರಣೆಗೆ ಹೇಬೇಕಂದರೆ, ಗ್ರಾಮಸೇವಕರು. ಇವರುಗಳು......

ಚೇರ್‌ಮನ್‌ರವರು.—ಸಮಯವಿಲ್ಲ, ತಾವು ಮುಗಿಸಿಬಿಡಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ಬೇಡಿಕಗಳನ್ನು ಬೆಂಬಲಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ಗ್ರಾಮಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಶಾಖೆಗಳ ಮಂತ್ರಿಗಳು)

ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಮೇಲಿನ ಚರ್ಚೆ ಶನಿವಾರ ಪ್ರಾರಂಭವಾಗಿ ಇಲ್ಲಿಯವರೆಗೆ ೧೨ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದರಿಂದ ಮಾನ್ಯ ಸದಸ್ಯರಿಗೆ ಈ ಖಾತೆಯ ಮೇಲಿರತಕ್ಕಂಥಶ್ರದ್ಧೆ ಮತ್ತು ಗ್ರಾಮೀಣ ಜನರ ಮೇಲಿರತಕ್ಕಂಥ ವಿಶ್ವಾಸ ಎಷ್ಟು ಎಂಬುದು ತಿಳಿಯುತ್ತದೆ. ಈ ಬೇಡಿಕೆಗಳ ಮೇಲೆ ನಾನು ಉತ್ತರ ಕೊಡುವ ಸಂದರ್ಭದಲ್ಲಿ ನನ್ನ ಮಾತುಗಳನ್ನು ೩ ಭಾಗಗಳಾಗಿ ವಿಂಗಡಿಸಿಕೊಳ್ಳುತ್ತಿದ್ದೇನೆ. ಮೊದಲನೆಯದಾಗಿ, ಮಾನ್ಯ ಸದಸ್ಯರು ಏನೇನು ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ, ಅವುಗಳಿಗೆ ಉತ್ತರ ಕೊಡುವುದು. ಎರಡನೆಯದಾಗಿ, ಇಲಾಖಾವಾರು ಕೆಲಸ ಮಾಡುವ ಕ್ರಮದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಲಾಗಿದೆ ಎಂಬುದು : ಮೂರನೆಯದಾಗಿ, ಈ ಇಲಾಖೆಯ ಮುಂದಿನ ಕಾರ್ಯಕ್ರಮಗಳನ್ನು ಕೈಕೊಳ್ಳುವಾಗ, ಆ ಕಾರ್ಯಕ್ರಮಗಳು ಚೆನ್ನಾಗಿ ಹೆಚ್ಚು ಫಲಧಾಯಕವಾಗುವುದಕ್ಕೆ ಯಾವ ರೀತಿ ನಾವು ಸಹಕರಿಸಿ ಕೆಲಸ ಮಾಡಬೇಕು ಎಂಬುದು: ಮೊದಲನೆಯದಾಗಿ ಈ ಒಂದು ಖಾತೆಯ ಮೇಲೆ ತಮ್ಮ ಮಾತನು ಪ್ರಾರಂಭಿಸಿದಂಥ ಮಾನ್ಯ ಪಟೇಲ್ ಅವರು ಈ ಬಾಬಿಗೆ ಇಟ್ಟಿರತಕ್ಕಂಥ ಹಣ ಏನೇನೂ ಸಾಲದು ಎಂದು ಹೇಳಿದರು. ಇದೇ ವಿಚಾರವನ್ನು ಪುಷ್ಟೀಕರಿಸುತ್ತಾ ಅನೇಕ ಮಾನ್ಯ ಸದಸ್ಯರು

ಅವರವರಿಗೆ ತಿಳಿದಂತೆ ಹೇಳಿದರು. ಇದಕ್ಕೆ ಉತ್ತರ ಕೊಡಲು ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ೧೯೭೮-೭೯ಕ್ಕೆ ಬಜೆಟ್‌ನಲ್ಲಿ ಪ್ಲಾನ್ ಅಲೋಕೇಷನ್ ೩೫೭.೭೬ ಕೋಟಿ ರೂಪಾಯಿಗಳಾದರೆ, ನಾನ್-ಪ್ಲಾನ್ ಅಲೋಕೇಷನ್ ೪೫೪.೪೩ ಕೋಟಿ ರೂಪಾಯಿಗಳು. ಒಟ್ಟು ೮೧೨.೧೯ ಕೋಟಿ ರೂಪಾಯಿಗಳು, ಇದರಲ್ಲಿ ನಮ್ಮ ಖಾತೆಗೆ ಒದಗಿಸಿರುವ ಹಣ ಏನಿದೆ, ಅದು ನಮ್ಮ ಕಾರ್ಯಕ್ರಮಕ್ಕೆ ಸಾಕಾಗುವುದಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಮತ್ತು ಬಿ.ಡಿ.ಒ. ಮಟ್ಟದಲ್ಲಿ ಖರ್ಚಾಗುವ ಹಣ ಏನಿದೆ, ಅದು ಬಿ.ಡಿ.ಒ. ಗಳಿಗೆ ನೇರವಾಗಿ ಒದಗುವುದಿಲ್ಲ ಎಂದು ಕಲವರು ಹೇಳಿದರು. ಈ ಇಲಾಖೆ ಕೆಲಸ ಮಾಡತಕ್ಕಂಥ ವಿಧಾನ ಮಾನ್ಯ ಸದಸ್ಯರಿಗೆ ಗೊತ್ತಿದೆ. ಅಂದರೆ ಈ ಇಲಾಖೆಗೆ ಒದಗಿಸಿರುವ ಹಣದಲ್ಲಿ ನೌಕರರಿಗೆ ಸಂಬಳ ಕೊಟ್ಟು ಉಳಿದಿರುವ ಹಣ ಕೆಲಸಕ್ಕೆ ಖರ್ಚಾಗುತ್ತದೆ, ಇದು ಏನೇನು ಸಾಲದು, ಕೆಲವು ಸಲ ಜೀಪ್‌ಗಳಿಗೆ ಪೆಟ್ರೋಲ್ ಕೊಳ್ಳಲು ಸಹ ಹಣ ಇರುವುದಿಲ್ಲವೆಂದು ಸಹ ಹೇಳಿದರು.

ಶ್ರೀ ಜೆ. ಎಚ್. ಪಟೇಲ್.—೮೦೦ ಚಿಲ್ಲರೆ ಕೋಟಿ ರೂಪಾಯಿಗಳು ಎಂದು ತಾವು ಹೇಳಿದಿರಿ. ಅದು ಯಾವುದು ಎಂದು ಹೇಳುತ್ತೀರಾ ?

ಚೇರ್‌ಮನ್‌ರವರು.—ತಾವು ಕೊನೆಯಲ್ಲಿ ವಿವರಣೆ ಕೇಳಿ.

ಶ್ರೀ ಕೆ. ಪ್ರಭಾಕರ್.—ಅದು ಎಷ್ಟು ದುಡ್ಡನ್ನು ನಾವು ಬಿ.ಡಿ.ಓ. ಗಳ ಅಡ್ಮಿನಿಸ್ಟ್ರೇಷನ್‌ಗೆ ಕೊಟ್ಟು ಅವರ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುತ್ತೇವೆ. ಎಂದು ಹೇಳಿರುವುದು. ಅದರಲ್ಲಿ ಸಿಬ್ಬಂದಿಗೆ ಕೊಡುವ ಸಂಬಳವೂ ಸೇರಿದೆ.

ಚೇರ್‌ಮನ್.—ಮಾನ್ಯ ಸದಸ್ಯರಿಗೆ ತಿಳಿಯುವ ಹಾಗೆ ಲಕ್ಷ ಅಥವಾ ಕೋಟಿ ಎನ್ನುವುದರ ಬಗ್ಗೆ ಸ್ವಲ್ಪ ತಿಳಿಯುವ ಹಾಗೆ ಅಂಕಿ ಅಂಶಗಳನ್ನು ಕೊಡಿ.

ಶ್ರೀ ಕೆ. ಪ್ರಭಾಕರ್.—ಅದೇ ನಾನು ಹೇಳುತ್ತಾ ಇರುವುದು, ಅದು ಸಿ. ಡಿ. ಡೆವಲಪ್‌ಮೆಂಟ್ ಖಾತೆಗೆ ಸಂಬಂಧಪಟ್ಟಂತೆ.........

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ಹೇಳುತ್ತಾ ಇರುವುದಕ್ಕೂ ಬಜೆಟ್‌ನಲ್ಲಿ ಹೇಳಿರುವುದಕ್ಕೂ ತದ್ವಿರುದ್ಧವಾಗಿ ಹೇಳುತ್ತಿದ್ದಾರೆ. ಇಡೀ ಈ ಮನೆ ಈ ಒಂದು ಇಲಾಖೆಗೆ ಸಂಬಂಧಪಟ್ಟಂತಹ ವಿಷಯಗಳನ್ನು ಕೇಳುವುದಕ್ಕೆ ಕಾತುರವಾಗಿದೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೆ. ಅವರು ಹೇಳುವುದು ನಾನ್ ಪ್ಲಾನ್ ಅಥವಾ ಪ್ಲಾನಿನಲ್ಲಿ ೮ ನೂರು ಕೋಟಿ ರೂಪಾಯಿ ಏನು ಇದೆ. ಅದು ಎಲ್ಲಿಂದ ಬಂತು, ಯಾವಾಗ ಬಂದಿದೆ ಎಂಬುದನ್ನು ದಯಮಾಡಿ ಸ್ವಲ್ಪ ವಿಷದೀಕರಿಸಬೇಕೆಂದು ಕೇಳುತ್ತೇನೆ.

(ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಶ್ರೀ ಕೆ. ಪ್ರಭಾಕರ್.—ಒಟ್ಟು ಇಷ್ಟಾಗಿದೆ. ಇರತಕ್ಕ ಹಣವನ್ನು ನಮ್ಮ ಡೆವಲಪ್‌ಮೆಂಟ್ ಇಲಾಖೆಯಲ್ಲಿ ಬಿ.ಡಿ.ಓ ಮುಖಾಂತರ ಹಳ್ಳಿಗಳಿಗೆ ಸಂಬಂಧಪಟ್ಟಂತೆ ತಾಲ್ಲೂಕು ಮಟ್ಟಗಳಲ್ಲಿ ಹಾಗೂ ಬ್ಲಾಕ್ ಮಟ್ಟಗಳಲ್ಲಿ ನಡೆಯತಕ್ಕಂಥ ಕೆಲಸಗಳಿಗೆ ಆ ದುಡ್ಡನ್ನು ನೇರವಾಗಿ ಒದಗಿಸುವುದಿಲ್ಲವೆಂದು ಹೇಳಿದೆ.

ಇನ್ನು ಕಮ್ಯೂನಿಟಿ ಡೆವಲಪ್‌ಮೆಂಟ್ ಸಮಗ್ರವಾದ ಒಂದು ರೂಪದಲ್ಲಿ ಜನತೆಯ ಕೋರಿಕೆಯನ್ನು ತಮ್ಮ ಒಂದು ಸಹಕಾರದಿಂದ ಪರಿಪೂರ್ಣವಾಗಿ ಮಾಡಬೇಕೆನ್ನುವ ಒಂದು ಒಳ್ಳೆಯ ಉದ್ದಿಶ್ಯದಿಂದ ಅದಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ಸರ್ಕಾರ ಯೋಜನಾ ರೂಪದಲ್ಲಿ ಹಂತಹಂತವಾಗಿ ಮಾಡಿಕೊಂಡು ಹೋಗಬೇಕೆಂದು ನಮ್ಮ ಎಸ್.ಕೆ. ಡೇ ಅವರು ಅಭಿಪ್ರಾಯ ಪಟ್ಟರು. ಈ ರಂಗದಲ್ಲಿ ಹೆಚ್ಚಿನ ಪರಿಶ್ರಮ ಹೊಂದಿದ್ದ ಅವರ ಇಚ್ಛೆ ಪ್ರಕಾರ ವಾಲೆಂಟರಿಯಾಗಿ ಜನರು ತಮ್ಮ ಶಕ್ತಿಗಳನ್ನು ಉಪಯೋಗಿಸಿಕೊಂಡು ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕೈಕೊಂಡು ನೆರವೇರಿಸುವಂತಹ ದಿಸಯಲ್ಲಿ ನಿಗಾ ಕೊಡಬೇಕಾಗಿದೆ. ನಾವು ನಮ್ಮ ಅಭಿಪ್ರಾಯಗಳನ್ನು ಜನತೆಯ ಮೇಲೆ ಹೇರುವುದು ಇದರ ಮೂಲಭೂತ ಉದ್ದೇಶವಲ್ಲ, ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಯೋಜನಾ ರೂಪದಲ್ಲಿ ಜನರು ಸಹಕರಿಸಿ ಯೋಜನೆಯನ್ನು ರೂಪಿಸಿಕೊಂಡು ಕೆಲಸ ಮಾಡಿಕೊಂಡು ಬರುವುದರಿಂದ ಗ್ರಾಮಗಳ ಸರ್ವತೋಮುಖವಾದ ಅಭಿವೃದ್ಧಿ

ಯಾಗುತ್ತದೆ, ಆದ್ದರಿಂದ ಇದಕ್ಕೆ ಒಂದು ರೂಪುರೇಷೆಯನ್ನು ಇಟ್ಟುಕೊಳ್ಳಬೇಕು. ಈ ಒಂದು ಅರ್ಥದಲ್ಲಿ ಪೀಪಲ್ಸ್ ಪ್ಲಾನ್ ಎಂದು ಮಾಡಿದರು. ಯಾರೋ ಜನಗಳ ಪರವಾಗಿ, ನೀವು ಸಹಕರಿಸಿ ಎಂದು ಹೇಳಿ ಜನಗಳ ಮೇಲೆ ಪೀಪಲ್ಸ್ ಪ್ಲಾನ್ ಎಂದು ಹೇರುವುದಕ್ಕಿಂತ ಜನಗಳಿಗೆ ಸಹಾಯವಾಗುವ ರೀತಿಯಲ್ಲಿ ಪ್ಲಾನ್ ಮಾಡಿ ಅವರಿಗೆ ಅವರಿಂದ ಸಹಾಯವಾದಾಗ ಅದು ಪೀಪಲ್ಸ್ ಪ್ಲಾನ್ ಆಗುತ್ತದೆ. ಇದನ್ನು ಸಾರಿ ಸಾರಿ ಶ್ರೀಮಾನ್ ಎಸ್.ಕೆ. ಡೇ ಅವರು ಹೇಳಿದ್ದಾರೆ. ಆದ್ದರಿಂದ ಇದನ್ನು ಹಂತ ಹಂತವಾಗಿ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಬೇಕೆಂದು ಇಟ್ಟುಕೊಂಡು ಈ ಕೆಲಸ ನಡೆಯುತ್ತಿದೆ. ಪ್ರತಿಯೊಂದು ಯೋಜನೆಯಲ್ಲಿಯೂ ಕೂಡ ಅದರ ಆಬ್ಜಕ್ಟೀವ್ಸ್ ಏನೆಂದರೆ ಯಾವ ಯಾವ ಕಾರ್ಯ ಕಾರ್ಯಕ್ರಮಗಳನ್ನು ನಾವು ಇಟ್ಟು ಕೊಂಡಿದ್ದೇವೆ ಅದರ ಪ್ರಕಾರ ಕೆಲಸಗಳನ್ನು ಮಾಡುವುದರಿಂದ ನಮ್ಮ ರೈತರ ಏಳಿಗೆಯಾಗುತ್ತದೆ ಎಂಬ ಭಾವನೆಯಿಂದ ಅದನ್ನು ನಾವು ಮಾಡುತ್ತಿದ್ದೇವೆ. ಈ ಹಿಂದು ಮುಖ್ಯ ಗುರಿಯನ್ನು ನೋಡಿದರೆ ನಮ್ಮ ದೇಶ ಹಳ್ಳಿಗಳ ನಾಡು ಎಂಬುದನ್ನು ನಾವೆಲ್ಲರೂ ಮನಗಂಡಿದ್ದೇವೆ. ಹಳ್ಳಿಗಳ ಜನತೆ ನಮಗೆ ಸ್ವಾರಾಜ್ಯ ಬಂದಮೇಲೆ ಈ ಯೋಜನೆಗಳನ್ನು ರೂಪಿಸಿದ್ದು ಎಂದು ನಾವು ಮರೆಯಬಾರದು. ಈ ಯೋಜನೆಗಳನ್ನು ಹಂತಹಂತವಾಗಿ ಪಾಲಿಸಿಕೊಂಡು ಬರುವಂತಾದ್ದು. ಈ ಕೆಲಸಗಳನ್ನು ನಾವು ಏನು ನಡೆಸಿಕೊಂಡು ಹೋಗುತ್ತಿದ್ದೇವೆ ಅದಕ್ಕೆ ಹಣ ಎಷ್ಟಿದೆ ಎಂಬುದನ್ನು ನೋಡಿದರೆ ಸಮುದ್ರಕ್ಕೆ ಒಂದು ಹಿಡಿ ಸಕ್ಕರೆ ಹಾಕಿದಂತೆ ಆಗುತ್ತದೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಹಣವನ್ನು ನಾವು ಹಂತಹಂತವಾಗಿ ಖರ್ಚುಮಾಡುವ ರೂಪದಲ್ಲಿ ನಮ್ಮ ಯೋಜನೆಯನ್ನು ರೂಪಿಸಿದ್ದೇವೆ. ಆದರೆ ಅವರು ಹೇಳುವುದು ಕೆಲಸ ಕಾರ್ಯಗಳು ಜಾಸ್ತಿ ಇದೆ, ಹಣ ಕಡಿಮೆ ಇದೆ ಎಂದು ಏನು ಹೇಳುತ್ತಾರೆ ಅದು ಒಂದು ರೀತಿಯಲ್ಲಿ ಒಪ್ಪಿಕೊಳ್ಳುವ ವಿಚಾರ. ಆದರೆ ಈ ಯೋಜನೆಯಲ್ಲಿ ಎಷ್ಟು ಇಲಾಖೆಯವರು ಇದ್ದಾರೆ ಅವರು ಇರುವಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇನ್ನು ಕಾಸ್ಟ್ ಆಫ್ ಅಡ್ಮಿನಿಸ್ಟ್ರೇಷನ್‌ಗೆ ಆಗುವ ಖರ್ಚನ್ನು ತೆಗೆದು ನೋಡಿದರೆ ಒಂದು ರೀತಿಯಲ್ಲಿ ಅದು ಕಡಿಮೆಯಾಗುತ್ತದೆ. ಉಳಿದುದ್ದು ಇರತಕ್ಕಂಥ ಪ್ರಾಜೆಕ್ಟ್ ಅಂದರೆ, ರಸ್ತೆಗಳು, ಶಾಲಾಕಟ್ಟಡಗಳು ಮತ್ತು ಭೂಮಿಯು ಹದಮಾಡತಕ್ಕಂಥ ಕೆಲಸಗಳು ಹಾಗೂ ಕೈಗಾರಿಕೆಗಳನ್ನು ಹಳ್ಳಿಗಳಲ್ಲಿ ಪ್ರಾರಂಭಿಸುವ ಎಷ್ಟೋ ಯೋಜನೆಗಳನ್ನು ನಡೆಸುತ್ತಿದ್ದೇವೆ. ಅದನ್ನು ತಾವು ಒಪ್ಪುತ್ತೀರೆಂದು ನಂಬಿದ್ದೇನೆ. ಅದರ ಫಲ ಅನೇಕ ಗ್ರಾಮಗಳಿಗೆ ದೊರೆಯುತ್ತಿದೆ. ಇದರಿಂದ ದೇಶ ಎಷ್ಟು ಮುಂದುವರಿಯುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ನೋಡಬೇಕು. ಇನ್ನು ಮಾನ್ಯ ಸದಸ್ಯರಾದ ಪಟೇಲ್‌ರವರು ಮಾತನಾಡುವಾಗ ಹಣ ಏನೇನು ಸಾಲದು ಹಾಗೂ ಮತ್ತೆ ಟೆಕ್‌ನಿಕ್ ಬದಲಾಯಿಸಬೇಕು ಎಂದು ಹೇಳಿದರು. ಅದರೆ ಅದು ಮೂಲಭೂತವಾದ ಭಿನ್ನಾಭಿಪ್ರಾಯ ಹಾಗೂ ಅಭಿಪ್ರಾಯವೂ ಆಗಬಹುದು. ಎಷ್ಟೋ ಪ್ರಾಜೆಕ್ಟ್‌ಗಳನ್ನು ಹೇಗೆ ಮಾಡಿದೆವೊ ಹೀಗೆ ಮಾಡಿದವೊ ಎನ್ನುವುದು ಮುಖ್ಯವಲ್ಲ. ಐಟ್ಟಿನಲ್ಲಿ ಪ್ರಗತಿಯನ್ನು ನೋಡಬೇಕೆನ್ನುವ ಆಸೆ ಅಷ್ಟೆ. ಪ್ಲಾನ್ ಮಾಡುವವರು ಹಾಗೆ ಮಾಡುತ್ತಾರೆ ಹೀಗೆ ಮಾಡುತ್ತಾರೆ ಎನ್ನುವುದು ಮುಖ್ಯವಲ್ಲ. ರಾಜ್ಯವನ್ನು ಪ್ರಗತಿಪಥದಲ್ಲಿ ನಡೆಸಬೇಕೆಂದು ಯಾವುದೇ ಮಾಡಿದರೂ ಅದು ಹಳ್ಳಿಗಳಿಂದ, ತಾಲ್ಲೂಕುಗಳಿಂದ, ಜಿಲ್ಲೆಗಳಿಂದ ಪಟ್ಟಣಗಳಿಗೆ ಹೋಗಬೇಕೇ ಹೊರತು ಅದು ನಗರದಿಂದ ಹಳ್ಳಿಗಳಿಗೆ ಬರಬಾರದು. ಇದನ್ನು ನಾವು ಬೇಸಿಕ್ ಪ್ಲಾನ್ ಎಂದು ಕರೆಯಬಹುದು! ಈ ರೀತಿ ಪ್ರಯತ್ನ ಮಾಡಿದರೆ ಒಳ್ಳೆಯದು ಮೂಲತಃ ಹೇಳುವುದಾದರೆ ಇದು ಇಷ್ಟೇ ಆಗುತ್ತದೆಂದು ಹೇಳುವುದು ಕಷ್ಟ. ಹಾಗೆ ಮಾಡಿದರೆ ಸರಿ ಎಂದು ಹೇಳುವುದು ಉಂಟು "Every form of administration is at best a form of experimentation" ಎಂದು ಹೇಳುತ್ತಾರೆ.

ಯಾವುದೇ ಒಂದು ಪ್ರಾಯೋಗಿಕ ಕ್ರಮವನ್ನು ಮಾಡಿದರೂ ಕೂಡ ಪ್ರಾರಂಭದಲ್ಲಿ ಅದು ಪ್ರಯೋಗ ರೂಪದಲ್ಲಿರುತ್ತದೆ. ಮಹಾತ್ಮ ಗಾಂಧೀಜಿಯವರು ನೂಲು ತೆಗೆಯಿತಿ ಎಂದು ಹೇಳಿದರು, ಇದು ಯಾವ ನೀತಿಯಲ್ಲಿ ಪ್ರಾರಂಭವಾಯಿತು ಎಲ್ಲಿ ಪ್ರಾರಂಭವಾಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದು ಮೊದಲು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭವಾಯಿತು ಎನ್ನುವುದನ್ನು ಯಾರೂ ಮರೆತಿಲ್ಲ. ಇವುಗಳನ್ನು ಕಾರ್ಯರೂಪಕ್ಕೆ ತರುವಾಗ, ಇದು ಬೆಂಗಳೂರಿನಲ್ಲಾಗಲೀ, ಕರ್ನಾಟಕದಲ್ಲಿ ಎಲ್ಲಿಯೇ ಅಗಲೀ ಎಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡುವುದು ಒಂದು ದೃಷ್ಟಿಮತ್ತೊಂದು ಕಡೆ, ಯಾವ ಯಾವ ದೇಶಗಳಲ್ಲಿ ಇದು ಪ್ರಾರಂಭದಲ್ಲಿದೆ, ಅವುಗಳ ದೃಷ್ಟಿ ಏನು ಇದೆ, ಅವುಗಳನ್ನು ನಾವು ಎಷ್ಟರ ಮಟ್ಟಿಗೆ ಅಳವಡಿಸಿಕೊಳ್ಳಬಹುದು ಎನ್ನುವುದು ಇದು ಕೊಲ್ಯಾಬರೇಷನ್ ಎಂದು ನಾವು ಏನು ಕರೆಯುತ್ತೇವೆ, ಅದನ್ನು ಉಪಯೋಗಿಸಿಕೊಂಡು ಕೆಲಸಗಳನ್ನು ಪ್ರಾರಂಭ ಮಾಡುತ್ತಾರೆ. ಇದನ್ನು

ಮಾಡುವಾಗ ಸಮಗ್ರವಾದ ಯೋಜನೆ ಏನು ಮಾಡುತ್ತೇವೆ ಅದನ್ನು ವ್ಯೆಯುಕ್ತಿಕವಾಗಿ ಯೋಜನೆ ಮಾಡುವುದಾದರೆ, ಆದರಲ್ಲಿ ನಮಗೆ ಸಹಾಯ ಏನೂ ಬರಲಿಲ್ಲ ಎನ್ನುವ ಭಾವನೆ ಬರುತ್ತದೆ. ಕಳೆದ ಮೂವತ್ತು ವರ್ಷಗಳಲ್ಲಿ ನಮ್ಮ ದೇಶದ ಗತಿ ಏನಾಗಿದೆ ಎಂದು ನಾವು ನೆನೆಸಿಕೊಂಡಾಗ, ನಮ್ಮ ಹಳ್ಳಿಗಳು ಇದ್ದ ಹಾಗೆ ಇವೆ, ಬೀದಿಗಳು ಸರಿಯಾಗಿಲ್ಲ ದೀಪ ಇಲ್ಲ ಕುಡಿಯುವ ನೀರು ಇಲ್ಲ, ಇಂಥ ಸಮಸ್ಯೆಗಳು ಇರುವಾಗ ಈಗ ಆಗಿರುವ ಕೆಲಸಗಳು ಬಹಳ ಕಡಿಮೆ ಎನ್ನತಕ್ಕ ಭಾವನೆ ಬರುತ್ತದೆ. ಈ ಭಾವನೆ ಬಂದಾಗ ಆಗಿರುವುದನ್ನು ಬಿಟ್ಟು, ಆಗಬೇಕಾದ್ದನ್ನು ಮಾಡಿ ಮುಗಿಸಬೇಕು ಎನ್ನುವುದಕ್ಕೆ ಮಾರ್ಗ ಏನು ಎಂದು ಹೇಳುತ್ತೇವೆ. ಅದಕ್ಕೆ ಯೋಜನೆ, ಯೋಜನೆ ಎಂದು ಕರೆಯುತ್ತೇವೆ. ಇದನ್ನು ನಾವು ನೋಡಿದಾಗ, ಏಕದ ಗ್ರಾಮಗಳು ಚೆನ್ನಾಗಿ ಆಗಬೇಕು ಎಂದು ಕೆಲವು ಐಡಿಯಲ್ ವಿಲೇಜಸ್ ನಮ್ಮ ಮನಸ್ಸಿಗೆ ಬರುತ್ತವೆ. ಯಾವ ಗ್ರಾಮಗಳು ಗಂಗರಸರ ಕಾಲದಲ್ಲಿದ್ದವೋ, ಹರಿಶ್ಚಂದ್ರರ ಕಾಲದಲ್ಲಿ ಯಾವ ರೀತಿಯಿದ್ದವೋ ಅಂಥ ಒಂದು ಆಧಾರದ ಮೇಲೆ, ಮಾದರಿಯ ಮೇಲೆ ಗ್ರಾಮಗಳು ಚೆನ್ನಾಗಿರಬೇಕು, ಜನರು ಧರ್ಮಯುತವಾಗಿ ನೆಮ್ಮದಿಯಿಂದ, ಸಂಸ್ಕಾರದಿಂದ ಜನತೆ ನಡೆಯಬೇಕು ಎಂದು ಹೇಳುವಾಗ ನಮ್ಮ ಹಳ್ಳಿಗಳು ಚೆನ್ನಾಗಿಲ್ಲ, ಎಂದು ಮನಸ್ಸಿಗೆ ಕೋಪ ಬರುವುದು ಸ್ವಾಭಾವಿಕ. ಕಳೆದ ಮೂವತ್ತು ವರ್ಷಗಳಲ್ಲಿ ಆಗಿರುವ ಕೆಲಸ ಕಡಿಮೆ. ಇನ್ನೂ ಚೆನ್ನಾಗಿ ಗ್ರಾಮಗಳ ಅಭಿವೃದ್ಧಿಯಾಗಬೇಕು, ಇದನ್ನು ನಾವು ವ್ಯೆಯುಕ್ತಿಕವಾಗಿ ಕೋಪಿಸಿಕೊಂಡರೆ, ನಮಗೆ ತಿಳುವಳಿಕೆ ಕಡಿಮೆ ಇದೆಯೆಂದು ಜನ ತೀರ್ಮಾನ ಮಾಡುತ್ತಾರೆ.

ಶ್ರೀ ಜೆ.ಎಚ್. ಪಾಟೀಲ್.—ಇದಕ್ಕೆ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ.

ಶ್ರೀ ಕೆ. ಪ್ರಭಾಕರ್.—ನಾನು ಹೇಳಿದ್ದರೆ ಅರ್ಥ ಏನು ಎಂದು ತಾವೇ ತಿಳಿದುಕೊಳ್ಳಬೇಕು. ಸಭೆಯಲ್ಲಿ ಯಾವ ಸದಸ್ಯರೇ ಮಾತನಾಡಿರಿ, ಅವರ ಉದ್ದೇಶವಾದರೂ ಇಷ್ಟೆ, ಗ್ರಾಮಗಳು ಚೆನ್ನಾಗಿ ಆಗಬೇಕು, ಚೆನ್ನಾಗಿ ಆಗುವುದರಲ್ಲಿ ಅದರಲ್ಲಿಯೂ ಚೆನ್ನಾಗಿ ಗಆಬೇಕು, ರಾಷ್ಟ್ರ ಚೆನ್ನಾಗಿ ಆಗಬೇಕು ಎನ್ನುವ ಆಸೆಗೆ, ನಾವು ಏನೂ ಅಡ್ಡಿ ಮಾಡುವಂತಿಲ್ಲ.

ಶ್ರೀ ಜೆ.ಎಚ್. ಪಟೇಲ್.—ಒಮ್ಮೆ ಕುಶ್ಚೋವ್ ಮತ್ತು ಪಂಡಿತ್ ನೆಹರೂ ಅವರು ಬೆಂಗಳೂರಿಗೆ ಬಂದರು. ಇಲ್ಲಿ ಅವರು ಎಲ್ಲಾ ಉಕ್ಕಿನ ಕಾರ್ಖಾನೆಗಳನ್ನು ನೋಡಿಕೊಂಡು ತುಂಬಾ ತೃಪ್ತಿಕರವಾಗಿ ಬಂದರು. ಕೃಶ್ಚೋವ್ ಅವರು ಮೈಸೂರಿಗೆ ಕಾರಿನಲ್ಲಿ ಹೋಗೋಣ ಎಂದು ಸೂಚನೆ ಮಾಡಿದ್ದಕ್ಕೆ ನೆಹರೂ ಅವರು ಒಪ್ಪಿದರು. ಇಬ್ಬರೂ ಕಾರಿನಲ್ಲಿ, ಆರು ಗಂಟೆಗೆ ಬೆಂಗಳೂರನ್ನು ಬಿಡುತ್ತಾರೆ. ಆಗ ಕೃಶ್ಚೋವ್ ಅವರು ಏನು ಮಾಡಿದರು ಎಂದರೆ ಬೈನಾಕ್ಯುಲರ್‌ನ್ನು ಕೈಯಲ್ಲಿಟ್ಟುಕೊಂಡು ಸುತ್ತ ನೋಡುವುದಕ್ಕೆ ಪ್ರಾರಂಭ ಮಾಡಿದರು. ಸ್ವಲ್ಪ ದೂರ ಹೋದಾಗ ಹಳ್ಳಿಯ ಜನರು ಹಾಗೆಯೇ ಕೂತಿರುವುದು ಅವರ ಕಣ್ಣಿಗೆ ಬೀಳುತ್ತದೆ. ಅದನ್ನು ನೋಡಿ ಅವರು, ನನಗೆ ಇವರನ್ನು ನೋಡಿ ತುಂಬಾ ನಾಚಿಕೆಯಾಗುತ್ತದೆ, ನಿಮ್ಮ ದೇಶದಲ್ಲಿರುವ ಉಕ್ಕಿನ ಕಾರ್ಖಾನೆಗಳನ್ನು ನೋಡಿ ಸ ತೋಷ ಪಟ್ಟೆ, ಆದರೆ ಜನರನ್ನು ನೋಡಿದಾಗ ನಾಚಿಕೆಯಾಗುತ್ತದೆ, ಮೊದಲು ಅವರಿಗೆ ತೀರಾ ಅತ್ಯಾವಶ್ಯಕವಾದ ಅನುಕೂಲತೆಗಳನ್ನು ಒದಗಿಸಿಕೊಡಿ ಎಂದು ಸೂಚನೆ ಮಾಡಿದರು. ಅದರಲ್ಲಿಯೂ ಹೆಣ್ಣು ಮಕ್ಕಳು ಎಷ್ಟು ಕಷ್ಟಪಡಬೇಕು, ಎಂದು ಹೇಳುತ್ತಾ, ಅವರು ಮೊದಲು ಕಮ್ಯೂನಿಟಿ ಡೆವಲಪ್‌ಮೆಂಟ್ ಕೆಲಸ ಆಗಬೇಕು ಎಂದು ಹೇಳಿದರು. ಸ್ವಲ್ಪ ದಿವಸವಾದ ನಂತರ ನೆಹರೂ ಅವರು ರಷ್ಯಾಕ್ಕೆ ಹೋದರು ತಾಷ್ಕೆಂಟಿನಲ್ಲಿ, ಕೃಶ್ಚೋವ್ ಅವರು ನಮ್ಮ ದೇಶದಲ್ಲಿ ಹೀಗೆ ಹೇಳಿದರು, ಇವರ ದೇಶದಲ್ಲಿ ಹೇಗಿದೆ ನೋಡೋಣ ಎಂದು, ಅದೇ ಬೈನಾಕ್ಯುಲರ್‌ನ್ನು ಹಿಡಿದುಕೊಂಡು ಇವರೂ ಹೊಟರು. ಅಲ್ಲಿಯೂ ಜನರು ಕೆಲಸವಿಲ್ಲದೆ ಕುಳಿತುಕೊಂಡಿರುವುದನ್ನು ನೋಡಿ, ತಕ್ಷಣ ಕೃಶ್ಚೋವ್ ಅವರ ಕಡೆ ಹೇಳುತ್ತಾ, ನೋಡಿ ನಿಮ್ಮ ದೇಶದಲ್ಲಿಯೂ ಜನರು ನಮ್ಮಲ್ಲಿದ್ದ ಹಾಗೆಯೇ ಇದ್ದಾರೆ, ತಾವು ಈ ರೀತಿ ಇದ್ದರೆ ಗುಂಡು ಹಾಕಿಸಿ ಕೊಲ್ಲಿಸುತ್ತಿದ್ದೆ ಎಂದು ಹೇಳಿದ್ದಿರಿ ಎಂದು ಹೇಳಿದರು. ಅದಕ್ಕೆ ಕುಶ್ಚೋವ್‌ಅವರು ತಕ್ಷಣ, ಕಾರ್ ನಿಲ್ಲಿಸಿ ಹೋಗಿ ಅವರಿಗೆ ಗುಂಡುಹಾಕಿ ಬನ್ನಿ ಎಂದು ಹೇಳಿದರು. ಆದರೆ ಗುಂಡು ಹಾಕಲಿಕ್ಕೆ ಹೋದವರು ವಾಪಸ್ ಬಂದರು, ಏಕೆಂದಕ್ಕೆ, ಅಲ್ಲಿ ಕುಳಿತಿದ್ದವರೆಲ್ಲರೂ ಭಾರತೀಯರಾಗಿದ್ದರು. ಆದ್ದರಿಂದ ಇದು ಅಭ್ಯಾಸ ಬಲ ಇದನ್ನು ಮಂತ್ರಿಗಳು ಬಿಟ್ಟುಬಿಡಬೇಕು.

ಶ್ರೀ ಕೆ, ಪ್ರಭಾಕರ್.—ಅಭ್ಯಾಸ ಬಲ ಎನ್ನತಕ್ಕದ್ದು ಎಲ್ಲರಲ್ಲಿಯೂ ಒಂದು ರೀತಿಯಲ್ಲಿ ರೂಢಿಯಲ್ಲಿರತಕ್ಕದ್ದು. ಇರಲಿ, ನಮ್ಮ ಖಾತೆಗೆ ಸಂಬಂಧಪಟ್ಟ ಹಾಗೆ ಕೆಲವು ಸದಸ್ಯರುಗಳು ಸೆಂಟ್ರಲ್ ಗವರ್ನಮೆಂಟ್ ಪ್ಲಾನ್ಸ್ ಬಗ್ಗೆ ಹೇಳಿದರು, ಕೇಂದ್ರ ಸರ್ಕಾರದವರು ನೇರವಾಗಿ ದುಡ್ಡು ಕೊಟ್ಟು,

ಇಂಥ ಕೆಲಸಗಳನ್ನು ಮಾಡಿರಿ ಎಂದು ಹೇಳುತ್ತಾರೆ. ಇವುಗಳಲ್ಲಿ ನಮ್ಮ ಯೋಜನೆಗಳು ಸೇರಿಕೊಂಡಿರುತ್ತವೆ. ಈ ಯೋಜನೆಗಳಲ್ಲಿ, ಮಹಿಳೆಯರಿಗೆ ತರಬೇತಿಯನ್ನು ಕೊಟ್ಟು ಅವರು ಹಂತಹಂತವಾಗಿ ಇದರಲ್ಲಿ ಸಫಲರಾಗಿದ್ದಾರೆ ಎನ್ನುವುದನ್ನು ನಾನು ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಈ ಯೋಜನೆಗಳಿಗೆ ಸಂಬಂಧಪಟ್ಟಂತೆ, ಕುಟುಂಬ ಯೋಜನೆ, ಆಹಾರದ ವಿಷಯದ ಬಗ್ಗೆ, ಶಿಶು ಪೋಷಣೆಗೆ ಸಂಬಂಧಪಟ್ಟಂತೆ ಇಂಥ ವಿಚಾರಗಳಲ್ಲಿ ಸಹಕರಿಸುವುದಕ್ಕಾಗಿ ಮಹಿಳಾ ಮಂಡಳಿಗಳನ್ನು ರಚಿಸಿ, ಕಾರ್ಯಗಳನ್ನು ಕೈಗೊಳ್ಳುತ್ತಿದ್ದೇವೆ. ಸಂಸ್ಥಾನ ಮಟ್ಟದಲ್ಲಿ ಒಂದು ಎರಡು ಮೂರು ಎಂದು ಮಹಿಳಾ ಮಂಡಳಿಗಳನು ವಿಂಗಡಿಸಿ, ಅವರಿಗೆ ನಾಲ್ಕೂನೂರು ರೂಪಾಯಿಗಳ ಹಣವನ್ನು ಕೊಟ್ಟು, ಅವರು ತಕ್ಕ ಪರಿಶ್ರಮವನ್ನು ಪಡೆದಮೇಲೆ ಅವರು ರಾಷ್ಟ್ರ ಮಟ್ಟದಲ್ಲಿ ಪೈಪೋಟಿಯನ್ನು ಮಾಡಿ ಬಹುಮಾನವನ್ನು ಪಡೆದುಕೊಂಡಂಥ ಪಂಚಾಯತಿಗಳು ಇವೆ. ಇಂಥ ಕೆಲಸಗಳನ್ನು ಮಾಡುವುದಕ್ಕೋಸ್ಕರ ಸರ್ಕಾರದವರು ಸ್ವಲ್ಪ ಹಣವನ್ನು ಇಟ್ಟಿರುತ್ತಾರೆ. ಇದಕ್ಕೋಸ್ಕರ ಕಳೆದ ವರ್ಷ ೪೮ ಸಾವಿರ ರೂಪಾಯಿಗಳನ್ನು ಇಟ್ಟಿದ್ದು ಈ ವರ್ಷ ೫೪ ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ.

೪-೩೦ ಪಿ. ಎಂ.

ಹಂತಹಂತವಾಗಿ ಇವರುಗಳಿಗೆ ತರಬೇತಿ ಕೊಡುವ ವ್ಯವಸ್ಥೆ ಮಾಡಲಾಗಿದೆ. ಇನ್ನೂ ಹೆಚ್ಚಿನ ಸದಸ್ಯರಿಗೆ ತರಬೇತಿ ಕೊಟ್ಟು ಈ ಮಹಿಳಾ ಮಂಡಲಿಗಳಲ್ಲಿ ಉಪಯುಕ್ತ ರೀತಿಯಲ್ಲಿ ನಮ್ಮ ಯೋಜನೆಗಳನ್ನು ಜಾರಿಗೆ ತರುವ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಅವರು ಓದುತ್ತಿದ್ದಾರೋ ಉತ್ತರ ಕೊಡುತ್ತಿದ್ದಾರೊ ಗೊತ್ತಾಗುತ್ತಿಲ್ಲ.

ಶ್ರೀ ಕೆ. ಪ್ರಭಾಕರ್.—ಓದುತ್ತಿಲ್ಲ ಈ ಒಂದು ಬಾಬಿಗೆ ಇಟ್ಟಿದ್ದಂತಹ ಹಣ ಹೋದ ಸಲ ಖರ್ಚಾಗಿದೆ. ೧೯೭೮—೭೯ನೇ ಸಾಲಿಗೆ ಈ ಬಾಬಿಗೆ ೮೦,೦೦೦ ರೂಪಾಯಿಗಳನ್ನು ಇಟ್ಟು ವ್ಯವಸ್ಥಿತರೀತಿಯಲ್ಲಿ ಒಂದು ತರಭೇತಿಯನ್ನು ಕೊಡತಕ್ಕ ವ್ಯವಸ್ಥೆಯನ್ನುಮಾಡಲಾಗುವುದು ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನೂ ಪಂಚಾಯಿತಿ ರಾಜ್ಯ ಸಂಸ್ಥೆಗಳು ತಮಗೆ ತಿಳಿದ ವಿಚಾರವೇ ಆಗಿದೆ. ನಮ್ಮ ರಾಜ್ಯದಲ್ಲಿ ೮,೪೧೧ ಪಂಚಾಯ್ತಿಗಳು ಇವೆ, ಅವುಗಳಲ್ಲಿ ೯೭ ಟೌನ್ ಪಂಚಾಯ್ತಿಗಳು ಇವೆ ೧೭೫ ತಾಲ್ಲೂಕು ಬೋರ್ಡು ಮಂಡಲಿಗಳು ಇವೆ. ಪಂಚಾಯ್ತಿಗಳಿಗ ಶೇಕಡ ೪೦ ರಷ್ಟು ಹಣವನ್ನು ಕಂದಾಯದಿಂದಲೂ, ತಾಲ್ಲೂಕುಬೋರ್ಡುಗಳಿಗೆ ಶೇಕಡ ೬೦ ರಷ್ಟು ಹಣವನ್ನು ಒದಗಿಸುತ್ತಿದ್ದೇವೆ. ಇದರಲ್ಲಿ ಹೆಚ್ಚಿನ ವರಮಾನ ಅಂದರೆ ಪಂಚಾಯ್ತಿಗಳಿಗೆ ೧೦ ಪರ್ಸೆಂಟ್ ಹಣವನ್ನು ಒದಗಿಸಲಾಗಿದೆ. ಪಂಚಾಯ್ತಿಯವರು ರೆಮ್ಯುನರೇಟೀವ್ ಅಸೆಟ್ಸ್ ಹೆಚ್ಚು ಮಾಡಿಕೊಳ್ಳುವುದಕೋಸ್ಕರ ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳುವುದಕೋಸ್ಕರ ಅವುಗಳಿಗೆ ಸಾಲದ ರೂಪದಲಿ ಹಣ ಕೊಟ್ಟು ೧೭—೧೮ ಯೋಜನೆಗಳನ್ನು ಸರ್ಕಾರದವರೇ ರೂಪಿಸಿ ಯಾರಿಗೆ ಅಲ್ಲಿ ಅನುಕೂಲವಾಗುತ್ತೋ ಅದನ್ನು ಮಾಡಿ ಅದರಿಂದ ಲಾಭ ತೆಗೆದುಕೊಳ್ಳಬಹುದೆಂದು ಏರ್ಪಾಡು ಮಾಡಿದ್ದೇವೆ. ನಾನು ನೋಡಿದ ಹಾಗೆ ಆಂಧ್ರ ಮತ್ತಿತರ ರಾಜ್ಯಗಳಲ್ಲಿ ಮೀನು ಸಾಕುವುದು, ತೋಟಗಾರಿಕೆ ಮಾಡುವುದು ತೋಪುಗಳನ್ನು ಬೆಳೆಸುವುದು ಗಿರಣಿಗಳನ್ನುನಡೆಸುವುದು ಈ ರೀತಿ ಮಾಡಿ ಹೆಚ್ಚಿನ ವರಮಾನವನ್ನು ಪಂಚಾಯ್ತಿಗಳು ಪಡೆಯುತಿ ವೆ. ಇಲ್ಲಿಯು ಕೂಡ ಪಂಚಾಯ್ತಿಯವರು ನಾವು ಮುಂದೆ ಬಂದು ಮಾಡುತ್ತೇವೆ ಎಂದು ಹೇಳಿದರೆ......

ಶ್ರೀ ಎಚ್. ಡಿ. ಚೌಡಯ್ಯ.—ನಮ್ಮ ರಾಜ್ಯದಲ್ಲಿ ಏನು ಮಾಡಿದ್ದೀರಿ. ?

ಶ್ರೀ ಕೆ. ಪ್ರಭಾಕರ್.—ನಮ್ಮ ರಾಜ್ಯದಲ್ಲಿಯು ಮಾಡಿ ಲಾಭ ಪಡೆದುಕೊಂಡಿದ್ದಾರೆ. ಬೇರೆ ರಾಜ್ಯಗಳಲ್ಲಿ ಏನು ಮಾಡಿದ್ದಾರೆನ್ನುವುದನ್ನು ಸೂಚನಾ ರೂಪದಲ್ಲಿ ತಿಳಿಸಿದೆ.

ಶ್ರೀ ಎಚ್. ಡಿ. ಚೌಡಯ್ಯ.—ನಮಲ್ಲಿ ಏನು ಮಾಡಿಲ್ಲವೆ ?

ಶ್ರೀ ಕೆ ಪ್ರಭಾಕರ್.—ಮಾಡಿದ್ದಾರೆ, ಕೋಲಾರ ಜಿಲ್ಲೆಯಲ್ಲಿ ಹುಣಸೆ ತೋಪುಗಳನ್ನು ಬೆಳಸಿ ಅವುಗಳನ್ನು ಶ್ರದ್ಧೆಯಿಂದ ಬೆಳಸಿ, ಅವುಗಳಿಂದ ಬರತಕ್ಕ ಹುಣಸೆ ಹಣ್ಣನ್ನು ಹರಾಜು ಹಾಕಿ ಆ ಮೂಲಕ ವರಮಾನ ಗಳಿಸುತ್ತಿವೆ. ರೆವಿನ್ಯೂ ನವರು ಹರಾಜು ಹಾಕುವುದಕ್ಕೆ ಹೋಗುವುದಿಲ್ಲ. ಇನ್ನು ಕೆಲವು ಕಡೆ ಬಳ್ಳಾರಿಯಿಂದಾಚೆಗೆ ಕೆಲವು ಪಂಚಾಯಿತಿಗಳು ಸಹಕಾರಿ ಪದ್ಧತಿಯಲ್ಲಿ ಕೋಳಿಗಳನ್ನು ಸಾಕುವುದು ಹಾಲಿನ ಉತ್ಪನ್ನ ಮಾಡುವುದು ಈ ಬಗ್ಗೆ ಸರಿಯಾದ ಲೆಕ್ಕಪತ್ರ ಇಟ್ಟು ಕೆಲಸ ಮಾಡುತ್ತಿವೆ. ಪಂಚಾ

ಯಿತಿಗಳು ಯಾವ ಯಾವ ರೂಪದಲ್ಲಿ ತಮ್ಮ ವರಮಾನವನ್ನು ರೂಡಿಸಿಕೊಳ್ಳಬಹುದು ಎಂಬುದಕ್ಕೆ ಈ ವಿಚಾಲವನ್ನು ತಿಳಿಸಿದೆ. ಇನ್ನು ನಿಮ್ಮವರ್ಗ ಮತ್ತು ನಿಮ್ಮ ಪಂಗಡದ ಜನಗಳಿಗೆ ೧೮ ರಷ್ಟು ಹಣವನ್ನು ಖರ್ಚು ಮಾಡುವುದಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಈ ಹಣವನ್ನು ಇಂತಿಂಥ ಬಾಬುಗಳಿಗೆ ಖರ್ಚು ಮಾಡಹೇಕೆಂದು ಸರ್ಕಾರದಿಂದ ಆದೇಶ ಕೊಡಲಾಗಿದೆ ಅದರಂತೆ ಅವರು ಖರ್ಚು ಮಾಡುತ್ತಿದ್ದಾರೆ. ಹೆಗರೆಯವರು ಮಾತನಾಡುತ್ತಾ ಖರ್ಚು ಮಾಡದೇ ಇದ್ದರೆ ಯಾರನ್ನು ಕೇಳುವುದು ಎಂದು ಹೇಳಿದರು, ಕಾರಣಾಂತರದಿಂದ ಒಂದು ವರ್ಷ ಆ ಬಾಬಿನಲ್ಲಿ ಹಣ ಮಿಕ್ಕರೆ ಮುಂದಿನ ವರ್ಷ ಬಡ್ಜೆಟ್ ತಯಾರು ಮಾಡುವಾಗ ಉಳಿಕೆ ಹಣವನ್ನು ಸೇರಿಸಿಕೊಂಡು ಆ ವರ್ಷದ ಹಣವನ್ನು ಸೇರಿಸಿಕೊಂಡು ಯೋಜನೆಗಳನ್ನು ಕೈಗೊಳ್ಳಬೇಕೆಂದು ಆದೇಶ ಕೊಟ್ಟಿದ್ದೇವೆ. ಒಂದುವೇಳೆ ಈ ಹಣವನ್ನು ಖರ್ಚು ಮಾಡುವ ವಿಚಾರದಲ್ಲಿ ಯಾವುದಾದರೂ ತಾಲ್ಲೂಕು ಬೋರ್ಡುಗಳು ಪಂಚಾಯ್ತಿಗಳು ತಪ್ಪಿದರೆ ಬಡ್ಜೆಟ್ಟನ್ನು ಪಾಸು ಮಾಡಬಾರದೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ, ಅಲ್ಲದೆ ಪಂಚಾಯ್ತಿಗಳಿಗೆ ಹಣದ ಕೊರತೆಯ ಬಗ್ಗೆ ಹೇಳಿದ್ದಾರೆ ಪಂಚಾಯ್ತಿಗಳಿಗೆ ಎಷ್ಟು ಹಣ ಇದ್ದರೂ ಕೂಡ ಸಾಲದು ಕಾರಣ ಅವುಗಳಿಗೆ ಕೆಲಸ ಜಾಸ್ತಿಯಿರುತ್ತದೆ. ತತ್ವಶಃ ನಾನು ಕೂಡ ಇದನ್ನು ಒಪ್ಪುತ್ತೇನೆ. ಸ್ಥಳೀಯ ಸಂಸ್ಥೆಗಳಿಗೆ ಗ್ರಾಮದ ಅನೇಕ ಕೆಲಸಗಳನ್ನು ಮಾಡಬೇಕಾದ ಜವಾಬ್ದಾರಿ ಇರುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಏನಾಗಿದೆ ಎಂದರೆ ಸ್ಕೂಲ್ ಕಟ್ಟಡದ ಕೆಲಸವನ್ನು ರಸ್ತೆ ಕೆಲಸವನ್ನು ನೀರಿನ ಅನುಕೂಲವನ್ನು ಆಯಾ ಇಲಾಖೆಗಳೇ ಮಾಡುತ್ತಿವೆ. ಪಂಚಾಯಿಗಳಿಗೆ ಸೇರಿದ್ದು ಮೂರು ಕೆಲಸ. ಪಂಚಾಯ್ತಿಗೆ ಸೇರಿದ ರೇಡಿಯೋ ನಡೆಸುವುದು ಗ್ರಾಮಗಳಲ್ಲಿ ದೀಪದ ವ್ಯವಸ್ಥೆ ಇದ್ದರೆ ದೀಪ ಉರಿಯುವ ವ್ಯವಸ್ಥೆ ಮಾಡುವುದು ಇತ್ತೀಚೆಗೆ ಬೋರ್‌ವೆಲ್ಸ್‌ಗಳನ್ನು ಏನು ಹಾಕಿದ್ದೇವೆ ಅವುಗಳನ್ನು ನಡೆಸುವುದು. ಇವುಗಳನ್ನು ಕೂಡ ಪಂಚಾಯ್ತಿಗಳು ನಡೆಸುವುದಕ್ಕೆ ಕಷ್ಟ ಇದೆ ಎನ್ನುವುದನ್ನು ನಾನು ಬಲ್ಲೆ. ಕೆಲವು ಪಂಚಾಯ್ತಿಗಳವರು ಬಹಳ ಉತ್ಸಾಹದಿಂದ ಎಲೆಕ್ಟ್ರಿಸಿಟಿ ತೆಗೆದುಕೊಳ್ಳುತ್ತಾರೆ, ಆದರೆ ಅವುಗಳಿಗೆ ಖರ್ಚು ಭರಿಸುವುದು ಕಷ್ಟವಾಗಿದೆ, ಪಂಚಾಯ್ತಿಗಳಿಗೆ ಮೆಂಟೆನೆನ್ಸ್ ಜವಾಬ್ದಾರಿ ಇದೆ ಆದರೂ ಕೂಡ ಹಣ ಸಾಲದು ಎನ್ನುವ ಕೂಗು ಇದೆ ನಾನು ಆಗಲೇ ಹೇಳಿದಂತೆ ರೆಮ್ಯೂನರೇಟೀವ್ ಅಸೆಟ್ಸ್‌ಗಳಿಂದ ಸ್ವಲ್ಪ ಹಣವನ್ನು ಹೊಂದಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಪಂಚಾಯ್ತಿಗಳು ತಮ್ಮ ಶಕ್ತ್ಯಾನುಸಾರ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ರಾಜ್ಯದಲ್ಲಿ ಈಗಾಗಲೇ ಅನೇಕ ಕಡೆ ಪಂಚ್ಯಾತಿಗಳಿಗೆ ಚುನಾವಣೆ ನಡೆದಿದೆ. ೧೭೫ ತಾಲ್ಲೂಕು ಬೋರ್ಡುಗಳಿಗೆ ಚುನಾವಣೆ ನಡೆದಿದೆ ೯೬ ಟೌನ್ ಪಂಚಾಯ್ತಿಗಳಿಗೆ ಚುನಾವಣೆ ನಡೆದಿದೆ. ೧೨೬ ಪಂಚಾಯ್ತಿಗಳಿಗೆ ೮-೭-೧೯೭೮ಕ್ಕೆ ಚುನಾವಣೆ ನಡೆದಿದೆ. ಮಲೆನಾಡಿನಲ್ಲಿ ಮಳೆ ಪ್ರಾರಂಭವಾಗಿರುವುದರಿಂದ ಅಲ್ಲಿ ೪೯ ಪಂಚಾಯ್ತಿಗಳಿಗೆ ೧೯—೧೧—೧೯೭೮ಕ್ಕೆ ಚುನಾವಣೆ ನಡೆಯಬೇಕೆಂತ ಈಗಾಗಲೇ ವಿಧಿತವಾಗಿದೆ. ಈ ಪಂಚಾಯ್ತಿ ಚುನಾವಣೆಗಳನ್ನು ನಡೆಸುವುದಕ್ಕೆ ಸರ್ಕಾರಕ್ಕೆ ೧ ಕೋಟಿ ೭೯ ಲಕ್ಷ ೯೦ ಸಾವಿರ ರೂಪಾಯಿಗಳು ಖರ್ಚಾಗಿದೆ. ಈಗ ವಿಲೇಜ್ ಅಕೌಂಟೆಂಟ್ ವಿಲೇಜ್ ಲೆವೆಲ್ ವರ್ಕರ್‌ರುಗಳಿಗೆ ಸರ್ಕಾರ ಏನೇನು ಯೋಜನೆಗಳನ್ನು ಹಾಕಿದೆ ಆಫೀಸರುಗಳಿಗೆ ಉತ್ತರಕೊಡುವುದು ಕೇಳಿದವರಿಗೆ ಜವಾಬ್ದಾರಿ ಕೊಡುವುದು ಜಾಸ್ತಿಯಾಗಿದೆ. ಈ ಕಾರಣದಿಂದ ನವೀನ ರೀತಿಯಲ್ಲಿ ರೈತರಿಗೆ ಸಲಹೆ ಕೊಡು ಸರ್ಕಾರ ವ್ಯವಸ್ಥೆ ಮಾಡಿದೆ. ಉದಾಹರಣೆ ರೂಪದಲ್ಲಿ ಹೇಳುವುದಾದರೆ ರೈತರು ರಾಸಾಯನಿಕ ಗೊಬ್ಬರ ಉಪಯೋಗಿಸುವ ರೀತಿ ಬಗ್ಗೆ ತಿಳಿವಳಿಕೆ ಕೊಡಬೇಕಾಗಿದೆ. ಎಷ್ಟು ಸಲ ಓದಿದರೂ ಅದು ತಿಳಿಯುವುದಿಲ್ಲ ರಾಸಾಯಿನಿಕ ಗೊಬ್ಬರ ಉಪಯೋಗಿಸುವ ವಿಧಾನ ಗ್ರಾಮದಲ್ಲಿ ಯಾರಿಗಾದರು ಒಬ್ಬರಿಗೆ ತಿಳಿದಿರಲೇ ಬೇಕು. ಗ್ರಾಮ ಮಟ್ಟದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಈ ವಿಚಾರವನ್ನು ತಿಳಿದುಕೊಳ್ಳುವುದು ಸೂಕ್ತ ಎಂದು ತಿಳಿದು ಪಂಚಾಯ್ತಿ ಕಾರ್ಯದರ್ಶಿಗಳು ತಮ್ಮ ಕೆಲಸ ಜೊತೆಗೆ ರೈತರಿಗೆ ಮಾರ್ಗದರ್ಶನ ಕೊಡುವ ದೃಷ್ಟಿಯ ತರಭೇತಿ ಕೊಡಲಾಗುವುದು, ಕೋಲಾರ, ಸಿರಸಿ, ಶಿವಮೊಗ್ಗ ಹಾಗೂ ರಾಯಚೂರು ಈ ಕಡೆ ಕೇಂದ್ರಗಳನ್ನು ಸ್ಥಾಪನೆ ಮಾಡಿ ತಂಡೋಪತಂಡವಾಗಿ ತರಭೇತಿ ಕೊಡುತ್ತಿದ್ದೇವೆ. ಇವೊತ್ತು ತರಭೇತಿ ಪಡೆದಿರತಕ್ಕವರಿಗೂ ತರಬೇತಿ ಪಡೆಯಂದೇ ಇರತಕ್ಕವರಿಗೂ ಅವರ ಕಾರ್ಯದಲ್ಲಿ ಎಷ್ಟೋ ವ್ಯತ್ಯಾಸಗಳು ಇರುತ್ತವೆ. ಆದ್ದರಿಂದ ನಾವು ಟ್ರೈನಿಂಗ್ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಇನ್ನು ಸರ್ಕಾರದಲ್ಲಿ ಏನೇನು ಯೋಜನೆಗಳು ನಡೆಯುತ್ತವೆ ಇವು ರೈತರಿಗೆ ಹೇಗೆ ತಿಳಿಯುತ್ತವೆ. ಪತ್ರಿಕೆ ಮತ್ತು ರೇಡಿಯೋದಿಂದ ತಿಳಯಬಹುದು. ಆದರೆ ಖಚಿತವಾಗಿ ಕೆಲವು ವಿಷಯಗಳನ್ನು ತಿಳಿಸಲಿಕ್ಕಾಗಿ ಕರ್ನಾಟಕ ವಿಕಾಸ ಎಂದು ಸರ್ಕಾರದ ವತಿಯಿಂದ ಪತ್ರಿಕೆ

ಯನ್ನು ನಡೆಸುತ್ತಿದ್ದೇವೆ. ನಮಗೆ ಗೆಜಿಟ್ ಎಂದು ಯಾವ ರೀತಿ ಇರುತ್ತದೆ, ಅದೇ ರೀತಿ ಮುಖ್ಯ ವಿಚಾರಗಳನ್ನು ರೈತರಿಗೆ ತಿಳಿಸಲಿಕ್ಕೆ ಮಾಡಿದ್ದೇವೆ. ಇದರ ಬಗ್ಗೆ ಕಳೆದ ಸಾಲಿನಲ್ಲಿ ೧ ಲಕ್ಷ ೮೦ ಸಾವಿರ ರೂಪಾಯಿ ಆಗಿದೆ. ಈ ಸಾರಿ ಅಂದರೆ ೧೯೭೫—೭೬ನೇ ಸಾಲಿಗೆ ೨ ಲಕ್ಷದ ೧೮ ಸಾವಿರ ರೂಪಾಯಿ ಇಟ್ಟಿದ್ದೇವೆ. ಇದರ ಸರ್‌ಕ್ಯುಲೇಷನ್ ಹತ್ತು ಸಾವಿರದವರೆಗೆ ಇದ್ದು ಇದು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ. ಇದರಿಂದ ಒಂದು ವರ್ಷದಲ್ಲಿ ಸರ್ಕಾರದ ಕಾರ್ಯಕಲಾಪಗಳು ಏನಾಗಿದೆ ಎಂದು ನೋಡ ಬೇಕಾದರೆ ಇದರಿಂದ ಅನೇಕ ವಿಚಾರಗಳು ತಿಳಿಯುತ್ತವೆ. ಇನ್ನು ಮಾನ್ಯ ಸದಸ್ಯರೊಬ್ಬರು ರೋಡಿನ ಬಗ್ಗೆ ಇಷ್ಟು ದುಡ್ಡು ಏತಕ್ಕೆ ಇಟ್ಟಿದ್ದೀರಾ ಎಂದು ಹೇಳಿದರು. ಅದಕ್ಕೆ ತಮಗೆ ಹೇಳಬೇಕು ಎಂದರೆ ಈ ಸೆಂಟ್ರಲ್ ಸ್ಪಾನ್‌ಸರ್ಡ್ ಸ್ಕೀಂ ನಲ್ಲಿ ನೀವೆ ಕರ್ತವ್ಯ ಮಾಡಿ ಎಂದು ಹೇಳಿ ಕೇಂದ್ರ ಸರ್ಕಾರದವರು ದುಡ್ಡು ಕೊಡುತ್ತಾರೆ. ೧೯೭೭—೭೮ರಲ್ಲಿ ೮೨ ಲಕ್ಷ ರೂಪಾಯಿ ಕೊಟ್ಟು ೪೦ ರೋಡುಗಳ ಲೆಕ್ಕ ಕೊಟ್ಟು ಅವು ಲಿಂಕ್ ರೋಡ್ ಎಂದು ಹೇಳಿ, ಇವುಗಳ ಕೆಲಸ ಪೂರೈಸಿ ಎಂದು ಹೇಳಿದರು. ಈಗ ನಮಗೆ ೪೦ ಲಕ್ಷ ರೂಪಾಯಿ ಖರ್ಚಾಗಿದೆ. ಇನ್ನೂ ೪೨ ಲಕ್ಷ ರೂಪಾಯಿ ಇದೆ. ಅದು ಜೂನ್ ಆಖೈರೊಳಗೆ ಖರ್ಚಾಗಬೇಕು. ಅದಕ್ಕೆ ಇನ್ನೂ ೫ ಲಕ್ಷ ರೂಪಾಯಿ ಸೇರಿಸಿ ಆ ಪಟ್ಟಿಯಲ್ಲಿ ಯಾವುದು ಇದೆ ಅದನ್ನು ಮುಗಿಸಬೇಕು ಎಂದು ಮಾಡಿದ್ದೇವೆ. ಇನ್ನು ಪೌಷ್ಟಿಕ ಆಹಾರದ ಬಗ್ಗೆ ಹೇಳಬೇಕು ಎಂದರೆ ಅಮೆರಿಕಾ ದೇಶದವರು ನಮ್ಮ ದೇಶಕ್ಕೆ ಕೆಲವು ಷರತ್ತುಗಳ ಮೇಲೆ ಹಣವನ್ನು ಕೊಟ್ಟು ಇಂತಿಷ್ಟು ಬ್ಲಾಕುಗಳಲ್ಲಿ ವ್ಯವಸ್ಥಿತವಾಗಿ ನಡೆಸಬೇಕು ಎಂದು ಯೋಜನೆ ಮಾಡಿದ್ದಾರೆ. ಅದರಲ್ಲಿ ಸ್ಕೂಲು ಗಾರ್ಡನ್ಸ್ ೭೨ ಇದೆ, ಕಮ್ಯುನಿಟಿ ಗಾರ್ಡನ್ಸ್ ೨೧ ಇದೆ, ಕಿಚನ್ ಗಾರ್ಡನ್ಸ್ ೬೫೪ ಇದೆ, ಪೌಲ್ಟ್ರಿ ಯೂನಿಟ್ಸ್ ೩೪೦ ಇದೆ. ಅದರಲ್ಲಿ ಇರತಕ್ಕ ವಿದ್ಯಮಾನ ಏನು ಅಲ್ಲಿ ಉತ್ಪಾದನೆ ಆಗತಕ್ಕಂಥಾ ಪೌಷ್ಟಿಕ ಆಹಾರ ಚಿಕ್ಕಚಿಕ್ಕ ಮಕ್ಕಳಿಗೆ ದೊರೆಯಬೇಕು. ಅವುಗಳ ಸಹಾಯದಿಂದ ಮಕ್ಕಳ ಪೋಷಣೆ ಯಾವರೀತಿ ನಡೆಯಬೇಕು ಅದನ್ನು ತಾಯಂದಿರು ಕಲಿತರಬೇಕಾಗುತ್ತದೆ. ಇನ್ನು ಗರ್ಭಿಣಿ ಹೆಂಗಸರಿಗೆ ಮಕ್ಕಳಿಗೆ ಸಂಬಂಧಪಟ್ಟ ವಿಚಾರವನ್ನು ವ್ಯವಸ್ಥಿತವಾಗಿ ಹೇಳಿಕೊಡತಕ್ಕ ವಿಚಾರ ಒಂದು ಇದೆ. ಇದರ ಬಗ್ಗೆ ನಮ್ಮ ಸ್ಟೇಟ್‌ಗೌರ್‌ಮೆಂಟಿನವರು ಇಂತಿಷ್ಟು ಎಂದು ಕೊಡಬೇಕಾಗುತ್ತದೆ. ಉಳಿದಿದ್ದನ್ನು ಅಮೆರಿಕಾ ದೇಶದವರು ಕೊಟ್ಟು ಈ ಯೋಜನೆಗಳನ್ನು ನಡೆಸುತ್ತಾರೆ. ಮೀನು ಸಾಕತಕ್ಕದ್ದು, ಕೋಳಿ ಸಾಕಾಣಿಕೆ ಇವೆಲ್ಲಾ ಈ ಯೋಜನೆಯಲ್ಲಿ ಇದೆ. ಇನ್ನು ೭ ಕೋಟಿ ೭೦ ಲಕ್ಷ ೯೭ ಸಾವಿರ ಮೀನು ಮರಿಗಳನ್ನು ತಳಿ ಅಭಿವೃದ್ಧಿ ಮಾಡಿ ಹಂಚತಕ್ಕ ವ್ಯವಸ್ಥೆ ಇದೆ. ಇನ್ನು ೧೨ ಲಕ್ಷ ಮಕ್ಕಳಿಗೆ ಉತ್ತಮವಾದ ಆಹಾರವನ್ನು ಕೊಡಬೇಕಾಗುತ್ತದೆ ಎಂದು ಯೋಚನೆ ಮಾಡಿದ್ದೇವೆ. ಅದರಲ್ಲಿ ೯,೩೭೩ ನಿಮ್ನ ವರ್ಗದ ಮತ್ತು ನಿಮ್ನ ಪಂಗಡದವರ ಮಕ್ಕಳು ಅಷ್ಟರಲ್ಲೇ ಇದ್ದಾರೆ ಎಂದು ಇದೆ. ಅಷ್ಟು ಮಕ್ಕಳಿಗೆ ಇದು ಕಡಿಮೆ ರೇಪ್ಟೊ ಇದೆ ಎಂದು ಬರತಕ್ಕ ವಿಚಾರ ಇದೆ. ಆಯಾಯ ಭಾಗದಲ್ಲಿ ಎಷ್ಟು ಮಕ್ಕಳಿದ್ದಾರೆ ಎನ್ನುವುದು ಇಲ್ಲದೇ ಇರುವುದರಿಂದ ಅಂಕಿ ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇನ್ನು ಗ್ರಾಮೀಣ ನೀರು ಸರಬರಾಯಿ ಯೋಜನೆ ವಿಚಾರದಲ್ಲಿ......

SRI A. LAKSHMI SAGAR.—Sir, we are not able to follow the reply given by the Hon.Minister. I seek your protection.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಒಂದು ಸಾರಿ ಮಕ್ಕಳ ವಿಚಾರದಿಂದ ಮೀನಿನ ವಿಚಾರಕ್ಕೆ ಹೋಗುತ್ತಾರೆ. ಮೀನಿನ ವಿಚಾರದಿಂದ ಮತ್ತೊಂದು ವಿಚಾರಕ್ಕೆ ಹೋಗುತ್ತಾರೆ ಆದ್ದರಿಂದ ಅವರು ಅಂಕಿಸಂಖ್ಯೆ ಏನು ಹೇಳುತ್ತಾರೆ ಒಂದೂ ಗೊತ್ತಾಗುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಯಾವಯಾವ ಅಂಶಗಳನ್ನು ಕೋರಿ ಮಾತನಾಡಿದ್ದಾರೆ ಉತ್ತರ ಆಯಾಯ ಕ್ರಮದಲ್ಲೇ ಇದೆ. ಮಾನ್ಯ ಸದಸ್ಯರು ಮಾತನಾಡುವಾಗ ಒಬ್ಬರು ಮಕ್ಕಳ ವಿಷಯ ಮಾತನಾಡಿರುತ್ತಾರೆ ಇನ್ನೊಬ್ಬರು ಅಮೆರಿಕ ವಿಷಯ ಮಾತನಾಡಿರುತ್ತಾರೆ, ಮತ್ತೊಬ್ಬರು ಡೈರಿ ವಿಷಯ ಮಾತನಾಡಿರುತ್ತಾರೆ. ಆದ್ದರಿಂದ ಇದು ಟೆಕ್ಸ್ಟ್ ಬುಕ್ ಇದ್ದ ಹಾಗೆ ಇರುವುದಿಲ್ಲ.

ಶ್ರೀ ವೈ. ರಾಮಕೃಷ್ಣ.— ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಹೇಳುವುದು ನಮಗೆ ಅರ್ಥ ವಾಗಬೇಕು ಎಂದು ತಮ್ಮ ಇಚ್ಛೆ. ನಾವು ಪ್ರಶ್ನೆ ಕೇಳುವುದಕ್ಕೆ ಹೋದರೆ ನಮ್ಮನ್ನು ಅಲೋ ಮಾಡುವು ದಿಲ್ಲ. ಈಗ ಅವರು ಹೇಳುವುದು ನಮಗೆ ಅರ್ಥವಾಗುವುದಿಲ್ಲ. ಈ ರೀತಿ ಆದರೆ ಹೇಗೆ ?

ಅಧ್ಯಕ್ಷರು—ಮಾನ್ಯ ಮಂತ್ರಿಗಳು ಹೇಳತಕ್ಕದ್ದು ಈಗಲೇ ತಮಗೆ ಅರ್ಥವಾಗುವುದಿಲ್ಲ. ಎಂದು ಹೇಳುತ್ತಿದ್ದೀರಿ. ತಾವು ಮಧ್ಯೆ ಮಧ್ಯೆ ಅವರಿಗೆ ಅಡ್ಡಿ ಮಾಡಲಿಕ್ಕೆ ಹೋದರೆ ಇನ್ನೂ ಕಷ್ಟವಾಗುತ್ತದೆ.

ಶ್ರೀ ಕೆ. ಪ್ರಭಾಕರ್—ಅಧ್ಯಕ್ಷರೆ, ಇನ್ನು ಗ್ರಾಮೀಣ ನೀರು ಸರಬರಾಜಿನ ಯೋಜನೆ ವಿಚಾರದಲ್ಲಿ ಮಾನ್ಯ ಸದಸ್ಯರು ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು—ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ಮೂರು ಭಾಗವಾಗಿ ವಿಂಗಡಿಸಿ ಕೊಂಡಿದ್ದೇನೆ ಎಂದು ಹೇಳಿದರು. ಈಗ ಯಾವ ಭಾಗದಲ್ಲಿ ಇದ್ದಾರೆ ?

ಶ್ರೀ ಕೆ. ಪ್ರಭಾಕರ್—ಈಗ ನನ್ನ ಉತ್ತರ ಮುಗಿದ ತಕ್ಷಣ ಸದಸ್ಯರು ಏನೇನು ವಿಚಾರ ಕೇಳಿದ್ದಾರೆ ಅದಕ್ಕೆ ಉತ್ತರವನ್ನು ಕಡೆಯ ಸಾರಿ ಕೊಡುತ್ತೇನೆ.

ಅಧ್ಯಕ್ಷರು—ಈಗ ತಾವು ಇನ್ನೂ ಜನರಲ್‌ಪಾಲಿಸಿಯಲ್ಲಿ ಇದ್ದಿರೋ ಅಥವಾ ತಾವು ಹೇಳಿದ ಹಾಗೆ ಮೂರು ಭಾಗದಲ್ಲಿ ಯಾವ ಭಾಗಕ್ಕೆ ಬಂದಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ—ಮಾನ್ಯ ಮಂತ್ರಿಗಳು ಪ್ರಾರಂಭದಲ್ಲೂ ಇಲ್ಲ, ಅಂತ್ಯದಲ್ಲೂ ಇಲ್ಲ, ಈಗ ಎಲ್ಲಿದ್ದಾರೋ ಅಲ್ಲೇ ಇದ್ದಾರೆ.

ಈಗ ನಾನು ರೂರಲ್ ವಾಟರ್ ಸಪ್ಲೈನಲ್ಲಿದ್ದೇನೆ. ೧೯೭೧ನೇ ಸೆನ ಸ್ ಪ್ರಕಾರ ನಮ್ಮ ಕರ್ನಾಟಕ ರಾಜ್ಯದಲ್ಲಿ ೨೬,೮೨೬ ಗ್ರಾಮಗಳಿದ್ದು ಅವುಗಳಲ್ಲಿ ೩೨,೫೧೪ ಬಾವಿಗಳನ್ನು ತೆಗೆದುದ್ದಾಗಿದೆ. ಹಳ್ಳಿಗಳಲ್ಲಿ ನೀರಿನ ಕೊರತೆಯೀಗಿಲ್ಲ ಎನ್ನತಕ್ಕಂಥ ಕೂಗು ಇದ್ದುದರಿಂದ ಜಲಕ್ಷಾಮ ಬಂದಮೇಲೆ ಬೊರ್‌ವೆಲ್ ತೆಗೆಯಬೇಕು ಮತ್ತು ನಾಳದಿಂದ ನೀರನ್ನು ಒದಗಿಸಬೇಕು ಎಂದು ನಾವು ಹೊಸದಾಗಿ ತೆಗೆದುಕೊಂಡಂಥ ಯೋಜನೆಗಳು.

ಶ್ರೀ ವೈ. ರಾಮಕೃಷ್ಣ—ಮಾನ್ಯ ಮಂತ್ರಿಗಳು ರೂರಲ್ ವಾಟರ್ ಸಪ್ಲೈ ಬಗ್ಗೆ ಹೇಳುತ್ತಿದ್ದಾರೆ. ಇದರ ಬಗ್ಗೆ ಒಂದು ಪ್ರಶ್ನೆ ಕೇಳುವುದಕ್ಕೆ ನನಗೆ ಅವಕಾಶ ಕೊಡಿ.

ಅಧ್ಯಕ್ಷರು—ಮಾನ್ಯ ಮಂತ್ರಿಗಳು ಉತ್ತರವನ್ನು ಮುಗಿಸಲಿ, ಆಮೇಲೆ ಪ್ರಶ್ನೆಗಳನ್ನು ಕೇಳಿ.

ಶ್ರೀ ಬಿ. ಭಾಸ್ಕರಶೆಟ್ಟಿ—ವಿರೋಧಪಕ್ಷದ ಸದಸ್ಯರು ಇಂಟರ್‌ಫಿಯರ್ ಆಗದೇ ಹೋದರೆ ಮಂತ್ರಿಗಳು ೧೫ ನಿಮಿಷಗಳಲ್ಲಿ ಉತ್ತರವನು ಮುಗಿಸುತ್ತಾರೆ. ಆಮೇಲೆ ಅವರು ಏನು ಬೇಕಾದರೂ ಕೇಳಿ ಕೊಳ್ಳಲಿ.

ಶ್ರೀ ಜೆ. ಎಚ್. ಪಟೇಲ್—ಬಾವಿಗೆ ಎಷ್ಟು ಹಣ ಹಾಕಿದ್ದೀರಿ ಎಂದು ಅವರು ಕೇಳುತ್ತಿದ್ದಾರೆ.

ಅಧ್ಯಕ್ಷರು—೫ ಗಂಟೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟು ಪೂರೈಸಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್—ನಾಳದಿಂದ ನೀರು ಒದಗಿಸತಕ್ಕ ಯೋಜನೆಯಲ್ಲಿ ೧ನೇ ಜೂನ್ ೧೯೭೮ಕ್ಕೆ ೧,೬೫೨ ಸ್ಯಾಂಕ್ಷನ್ಡ್ ಸ್ಕೀಂ ಇತ್ತು . ಇವುಗಳಲ್ಲಿ ೧೧೩೦ ಸ್ಕೀಮ್ಸನ್ನು ಪೂರೈಸಿಯಾಯಿತು. ಇವುಗಳಲ್ಲಿ ೮೪ ಯೋಜನೆಗಳನ್ನು ನಾವು ಪೂರೈಸಿದ ಮೇಲೆ ಅರ್ಬನ್ ರೂರಲ್ ವಾಟರ್ ಸಪ್ಲೈ ಡ್ರೈನೇಜ್ ಬೋರ್ಡ್ ವಶಕ್ಕೆ ಕೊಟ್ಟಿವು. ಉಳಿದ ೧೦೪೬ ಯೋಜನೆಗಳಿದ್ದು ಅವುಗಳಲ್ಲಿ ಪಂಚಾಯಿತಿ ವಶಕ್ಕೆ ೯೪೭ ಯೋಜನೆಗಳನ್ನು ಕೊಡಲಾಯಿತು. ಇವುಗಳಲ್ಲಿ ೭೮೯ ಯೋಜನೆಗಳು ಸರಿಯಾಗಿ ಕೆಲಸಮಾಡುತ್ತಾ ಇವೆ. ೧೭೮ ಯೋಜನೆಗಳು ನಾನಾ ಕಾರಣಗಳಿಂದ ಕೆಲಸ ಮಾಡುತ್ತಾ ಇಲ್ಲ. ಇವುಗಳನ್ನು ವ್ಯವಸ್ಥಿತವಾಗಿ ರಿಪೇರಿ ಮಾಡತಕ್ಕ ಯೋಜನೆಯನ್ನು ನಾವು ಮಾಡಿದ್ದೇವೆ ಈ ಯೋಜನೆಗಳಲ್ಲಿ ೧೭೧ ಯೋಜನೆಗಳನ್ನು ಮುಂದಿನ ವರ್ಷಕ್ಕೆ ಅಂದರೆ ಈ ವರ್ಷದಲ್ಲಿ ತೆಗೆದುಕೊಂಡು ಪೂರ್ತಿ ಮಾಡಬೇಕು ಎಂದು ಇದ್ದೇನೆ. ಈ ೧೭೧ ಯೋಜನೆಗಳ ಜೊತೆಗೆ ಸ್ಪಿಲ್ ಓವರ್ ವರ್ಕ್ಸ್‌ನ್ನೂ ಸೇರಿಸಿ—ಇವುಗಳನ್ನು ತೆಗೆದು ಕೊಂಡು ಪೂರ್ತಿ ಮಾಡುತ್ತೇವೆ. ೧೯೭೮-೭೯ಕ್ಕೆ ೧೬೫ ಲಕ್ಷ ರೂಪಾಯಿಗಳು ನಮಗೆ ಖರ್ಚಾಗುತ್ತದೆ. ಬೋರ್‌ವೆಲ್ಸ್‌ನಲ್ಲಿ ೨೭೧ ಪೈಪ್ಡ್ ವಾಟರ್ ಸಪ್ಲೈ ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇವು, ೨೭೫.೫೭ ಲಕ್ಷ ರೂಪಾಯಿಗಳು ಮಂಜೂರಾಗಿತ್ತು. ಅದರಲ್ಲಿ ೧೭ ಯೋಜನೆಗಳನ್ನು ನಾವು ಕಂಪ್ಲೀಟ್ ಮಾಡಿದ್ದೇವೆ. ಅದಕ್ಕೆ ೬೪.೩೮ ಲಕ್ಷ ರೂಪಾಯಿಗಳು ಖರ್ಚಾಗಿದೆ. ೨೭೧ ಯೋಜನೆಗಳಲ್ಲಿ ೧೭ ಜಾತಾ ಉಳಿದವನ್ನು ನಾವು ಮುಂದುವರಿಸಬೇಕಾಗಿದೆ. ೧೯೭೮-೭೯ಕ್ಕೆ ೬೧.೬೭ ಲಕ್ಷ ರೂಪಾಯಿಗಳನ್ನು ಸ್ಪಿಲ್‌ಓವರ್ ವರ್ಕ್ಸ್, ಮತ್ತು ಫ್ರೆಷ್ ವರ್ಕ್ಸ್, ಮುಗಿಸುವುದಕ್ಕೆ ಹಣ ಇಟ್ಟುಕೊಂಡಿದ್ದೇವೆ. ಅಗ್ಸಲರೇಟೆಡ್ ಪೈಪ್ಡ್ ವಾಟರ್‌ಸಪ್ಲೈಗೆ ೨೮೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಹೀಗೆ ನಮ್ಮ ಕರ್ನಾಟಕದಲ್ಲಿ ಇದುವರೆಗೆ ಓಪನ್ ವೆಲ್ಸ್ ೩೨,೫೧೪ ಎನ್.ಆರ್.ಡಬ್ಲ್ಯು. ೧,೬೫೨ ಬೋರ್‌ವೆಲ್ಸ್

೧೮,೫೮೦ ಒಟ್ಟು ೫೨,೦೫೬ ಬಾವಿಗಳಿವೆ. ಅಷ್ಟು ದೊಡ್ಡ ಸಂಖ್ಯೆಯಲ್ಲಿ ಬಾವಿಗಳನ್ನು ಮಾಡಿ, ರಿಪೇರಿ ಮಾಡುವುದು ಭಾರಿ ಸಮಸ್ಯೆ. ಅನೇಕ ಜನ ಮಾನ್ಯ ಸದಸ್ಯರು ಇದರ ಬಗ್ಗೆ ಹೇಳಿದ್ದಾರೆ. ಇತ್ತೀಚೆಗ ಕಷ್ಟವಾದುವನ್ನೆಲ್ಲಾ ಪರಿಗಣಿಸಿ ವ್ಯವಸ್ಥಿತ ರೀತಿಯಲ್ಲಿ ಜಿಲ್ಲೆಗ ಒಂದರಂತೆ ಯೂನಿಟ್‌ಮಾಡಿ ಮಾಸ್ಟರ್-ಪ್ಲಾನ್ ಮಾಡಿ ರಿಪೇರ್ ಎಕ್ವಿಪ್‌ಮೆಂಟ್ ಇರುವಹಾಗೆ ವ್ಯವಸ್ಥೆ ಮಾಡಿದ್ದೇವೆ. ಜಿಲ್ಲಾಮಟ್ಟದಲ್ಲಿ ಏನು ತೊಂದರೆಯಾದರೂ ಕೂಡ ಅವರಿಗೆ ಟೆಕ್ನಿಕಲ್ ಸರ್ವೀಸನ್ನು ಕೊಡುವುದಕ್ಕೆ ಮಾಸ್ಟರ್ ಪ್ಲಾನನ್ನು ಉಪಯೋಗಿಸಬೇಕು ಎಂದು ವ್ಯವಸ್ಥೆಮಾಡಲಾಗಿದೆ. ಇದರಲ್ಲಿ ೧೩ ವೆಹಿಕಲ್ಸನ್ನು ನಾವು ಕೊಳ್ಳಬೇಕಾಗಿದೆ ಹೆಲ್ತ್ ಆರ್ಗನೈಸೇಷನಿಂದ ೬ ವೆಹಿಕಲ್ಸನ್ನು ನಮಗ ಕೊಡುತ್ತಾರೆ. ಇದಕ್ಕೆ ಒಂದು ವರ್ಷಕ್ಕೆ ಎಷ್ಟು ಹಣ ಬೇಕೋ ಅದನ್ನು ಈಗ ಒದಗಿಸಿಯಾಗಿದೆ. ಇನ್ನೂ ವೆಹಿಕಲ್ಸನ್ನು ಕೊಂಡುಕೊಳ್ಳುವುದಕ್ಕೋಸ್ಕರ ವ್ಯವಸ್ಥೆ ಮಾಡಿದ್ದೇವೆ. ರಿಪೇರಿ ಬಗ್ಗ ಏನು ತೊಂದರೆ ಇದೆಯೆಂದು ಮಾನ್ಯ ಸದಸ್ಯರು ಮನಗಂಡು ಹೇಳಿದ್ದಾರೋ ಇನ್ನು ಮುಂದೆ ಈ ತೊಂದರೆಗಳೆಲ್ಲಾ ಇರಲಾರದು ಎಂದು ನಾನು ಖಚಿತವಾಗಿ ತಮಗೆ ತಿಳಿಸುತ್ತಾ ಇದ್ದೇನೆ. ಪಿ.ಹೆಚ್.ಇ. ಇಲಾಖೆ ಹತ್ತಿರ ವೆಹಿಕಲ್ಸ್ ಇದ್ದರೂ ಬೇರೆ ತರಹ ಕೆಲಸಮಾಡುತ್ತಾ ಇದೆ. ಆ ಇಲಾಖೆ ಸಬಲವಾಗಿ ಆದಮೇಲೆ ಪರ್ಮನೆಂಟ್ ಡಿಪಾರ್ಟ್‌ಮೆಂಟ್ ತರಹ ಕೆಲಸ ಮಾಡುತ್ತದೆ. ಪಿ.ಹೆಚ್.ಇ.ಯವರು ತಮ್ಮಲ್ಲಿರುವಂತಥ ಎಕ್ವಿಪ್‌ಮೆಂಟ್ಸನ್ನು ಉಪಯೋಗಿಸಿಕೊಂಡು ಕೆಲಸಮಾಡುತ್ತಾ ಇದ್ದಾರೆ. ಪ್ರತಿ ಬಿ.ಡಿ.ಓ. ಹತ್ತಿರ ಮೆಕಾನಿಕ್ ಇದ್ದು, ಅವರಿಗ ಯಾವ ರೀತಿ ಸಂಬಳ ಕೊಡಬೇಕು, ಯಾರು ಸಂಬಳ ಕೊಡಬೇಕು, ಅವರ ಕಷ್ಟ ಸುಖ ಏನು ಎಂದು ವಿಚಾರಿಸಿಕೊಳ್ಳಲು ವ್ಯವಸ್ಥಿತವಾಗಿ ಇರಲಿಲ್ಲ. ಇವರನ್ನು ಪರ್ಮನೆಂಟ್ ಎಂಪ್ಲಾಯಿ ಆಫ್ ದಿ ಪಿ.ಹೆಚ್.ಇ. ಡಿಪಾರ್ಟ್‌ಮೆಂಟ್ ಎಂದು ಮಾಡಿದ್ದೇವೆ) ಅವರು ನಮ್ಮ ಬಿ.ಡಿ.ಓ. ಹತ್ತಿರ ಸದಾ ಇರತಕ್ಕವನು. ಇವರ ಕೈಕೆಳಗೆ ಮೇಸ್ತ್ರಿಗಳನ್ನು ಕೊಟ್ಟಿದ್ದೇವೆ, ಎಲ್ಲಾದರೂ ಬಾವಿ ಕೆಟ್ಟು ಹೋದರೆ ಒಂದು ಕಾರ್ಡ್ ಬರೆದು ಬಿ.ಡಿ.ಓ.ಗೆ ತಲುಪುವ ಹಾಗೆ ಕಳಿಸಿಕೊಡುತ್ತಾರೆ ಪಂಚಾಯಿತಿಯಲ್ಲಿ ವಿ.ಎಲ್.ಡಬ್ಲ್ಯೂ ಗೆ ಕಳಿಸಿಕೊಡುತ್ತಾರೆ. ಮೇಸ್ತ್ರಿಗಳು ತಿರುಗುತ್ತಾರೆ. ಪಿ.ಹೆಚ್.ಇ ಈ ಕಾರ್ಯದಲ್ಲಿ ಇರೋಣದರಿಂದ ರಿಪೇರಿ ವ್ಯವಸ್ಥೆಯಲ್ಲಿ ಇನ್ನು ಮುಂದೆ ತೊಂದರೆಯಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ೧೩ ವೆಹಿಕಲ್ಸ್‌ನ್ನು ಕೊಂಡುಕೊಳ್ಳಬೇಕು. ೬ ವೆಹಿಕಲ್ಸನ್ನು ಡಬ್ಲ್ಯೂ.ಓ. ನಿಂದ ಬರಬೇಕು. ೫,೦೦೦ ಬಾವಿಗಳಲ್ಲಿ ಈಗಾಗಲೇ ಮೂರುವರೆ, ನಾಲ್ಕು ಸಾವಿರ ಬಾವಿಗಳನ್ನು ರಿಪೇರಿ ಮಾಡಿದ್ದೇವೆ. ಈಗ ಇಕ್ವಿಪ್‌ಮೆಂಟ್ ಕೊಟ್ಟಿದ್ದೇವೆ. ೧೫ನೇ ಜುಲೈ ೧೯೭೮ರಲ್ಲಿ ಮೊನ್ನೆತಾನೇ ಆರ್ಡರ್ ರಿಲೀಸಾಗಿದೆ. ರಿಪೋರ್ಟ್ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಆದಕ್ಕೋಸ್ಕರವಾಗಿ ತೊಂದರೆ ಇರಲಾರದೆಂದು ಕೂಡ ತಿಳಿಸಲು ಇಷ್ಟಪಡುತ್ತೇನೆ.

5–00 ಪಿ ಎಂ.

ಶ್ರೀ ಹೆಚ್. ಡಿ. ಚೌಡಯ್ಯ—ಎಕ್ವಿಪ್‌ಮೆಂಟ್ಸ್ ಕೊಟ್ಟಿಲ್ಲ.

ಶ್ರೀ ಕೆ. ಪ್ರಭಾಕರ್—ಸ್ಪೇರ್ ಪಾರ್ಟ್ಸ್‌ನ್ನು ಬಿ.ಡಿ.ಓ. ಗಳಿಂದ ತೆಗೆದುಕೊಂಡು ಸಂಬಂಧಪಟ್ಟ ಇಂಜೀನಿಯರ್‌ಗಳು ಲಕ್ಷಾಂತರ ರೂಪಾಯಿಗಳ ಸಾಮಾನುಗಳನ್ನು ತೆಗೆದುಕೊಂಡು ಸ್ಟಾಕ್ ಮಾಡಿದ್ದಾರೆ ಅವರು ಇಷ್ಟೆಲ್ಲ ಅಡ್ವಾನ್ಸ್ ಆಗಿ ತೆಗೆದಿಟ್ಟುಕೊಂಡಿರುತ್ತಾರೆ. ಎಕ್ವಿಪ್‌ಮೆಂಟ್ಸ್ ತೆಗೆದಿಟ್ಟುಕೊಳ್ಳುವುದಕ್ಕೆ ಪಿ.ಎಸ್.ಸಿ. ಅವರಿಗೆ ವ್ಯವಸ್ಥೆ ಇದೆ ಆದ್ದದರಿಂದ ವೆಹಿಕಲ್ಸ್ ತೆಗೆದುಕೊಳ್ಳುವ ಬಗ್ಗೆ ಮುಂದೆ ಏನು ಮಾಡಬೇಕು ಎನ್ನುವುದಕ್ಕೋಸ್ಕರವಾಗಿ ಇಷ್ಟೆಲ್ಲ ಹೇಳಿರುತ್ತೇನೆ. ಆದ್ದರಿಂದ ಇನ್ನು ಮುಂದೆ ಯಾವ ತೊಂದರೆಯಾಗುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ—ಮಾನ್ಯ ಮಂತ್ರಿಯವರು ಖಚಿತವಾಗಿ ಯಾವ ಉತ್ತರವನ್ನು ಕೊಡಲಿಲ್ಲ ಅಂದರೆ ಒಂದು ವರ್ಷದಲ್ಲಿ ೧೨ ತಿಂಗಳಕಾಲ ಇರುತ್ತದೆ. ಆದ್ದರಿಂದ ಖಚಿತವಾಗಿ ಹೇಳಬೇಕು.

ಶ್ರೀ ಕೆ. ಪ್ರಭಾಕರ್.—ವರ್ಷಗಟ್ಟಲೆಯಾಗುವುದಿಲ್ಲ. ಇನ್ನು ಕೆಲವೇ ತಿಂಗಳಲ್ಲಿ ಆಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು—ತಾವು ಬರೆದು ಕಳುಹಿಸಿ ಮುಂದಿನ ದಿವಸವೇ ಆರ್ಡರ್ ಕಳುಹಿಸಿಕೊಡುತ್ತಾರೆ. ಆದರ ಬಗ್ಗೆ ತಾವು ಏನು ಯೋಚನೆ ಮಾಡಬೇಡಿ.

ಶ್ರೀ ಕೆ. ಪ್ರಭಾಕರ್—ಕಾಯಂ ಆಗಿ ಆಗಾಗ್ಗೆ ಬರತಕ್ಕಂಥ ತೊಂದರೆ ಏನು ಎಂದರೆ ಆಗಾಗ್ಗೆ ಬರತಕ್ಕಂಥ ಬರಗಾಲದ ಬಗ್ಗೆ ಅನೇಕ ಮಾನ್ಯ ಸದಸ್ಯರು ಹಲವಾರು ಸಲಹೆಗಳನ್ನು ಕೊಟ್ಟಿರುತ್ತಾರೆ. ಇದಕ್ಕೆ ಏನಾದರೂ ಒಂದು ಶಾಶ್ವತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದೂ ಕೂಡ ಹೇಳಿರುತ್ತಾರೆ. ಅದಕ್ಕಾಗಿ ಇತ್ತೀಚೆಗೆ ಪ್ಲಾನಿಂಗ್ ಮಾಡಿರತಕ್ಕಂಥದ್ದು ಎಂದರೆ ಡ್ರಾಟ್ ಕಂಡೀಶನ್ ಏರಿಯಾ ಎಂದು ಪರಿಗಣಿಸಿ ಅದಕ್ಕೆ ಇಷ್ಟು ಹಣವನ್ನು ಖರ್ಚು ಮಾಡಬೇಕೆಂದೂ ಕೂಡ ಇದ್ದು, ಅದಕ್ಕೆ ಡಿ.ಪಿ.ಎ.ಪಿ. ಅಥಾರಿಟಿ ಎಂದು ಇರುತ್ತದೆ. ೧೦ ಜಿಲ್ಲೆಗಳನ್ನು ಈ ಆರು ಅಥಾರಟಿಗಳಿಗೆ ಒಳಪಡಿಸಲಾಗಿದೆ. ಇದಕ್ಕಾಗಿ ೩ ಕೋಟಿ ರೂಪಾಯಿಗಳನ್ನು ಕೊಡುತ್ತಾ ಇದ್ದೇವೆ. ಇದರಲ್ಲಿ ಯಾವು ಯಾವುದು ಬರುತ್ತದೆಂಬುದನ್ನು ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮೈನರ್ ಇರಿಗೇಷನ್, ಸಾಯಿಲ್ ಕನ್‌ರ್‌ವೇಷನ್, ಆಫರ್‌ಸ್ಟೇಷನ್, ಆರ್ಟಿಕಲ್ಚರ್, ಫಿಷರೀಸ್, ಅನಿಮಲ್ ಹಸ್‌ಬಂಡರಿ ಸಿರಿಕಲ್ಚರ್ ಅಪೆರಿ, ಕ್ರೆಡಿಟ್ ಪ್ಲಾನಿಂಗ್, ಅಡ್ಮಿನಿಸ್ಟ್ರೇಷನ್ ಮುಂತಾದವುಗಳು. ಈ ರೀತಿಯಾಗಿ ೧೨ ಉದ್ಯಮಗಳು ಇದರಲ್ಲಿ ಬರುತ್ತದೆ. ಇವುಗಳು ಯಾವ ಯಾವ ಭಾಗಗಳಲ್ಲಿ ನಡೆಯುತ್ತಿವೆ ಎಂದರೆ ಬೆಳಗಾವ್. ಬಿಜಾಪುರ, ಧಾರವಾಡ, ಗುಲ್ಬರ್ಗಾ, ಚಿತ್ರದುರ್ಗ, ಇವೇ ಮುಂತಾದ ಪ್ರದೇಶಗಳು ಈ ಯೋಜನೆಯನ್ನು ಒಳಗೊಂಡಿರುತ್ತದೆ. ಬಿಜಾಪುರದಲ್ಲಿ ಡಿ.ಪಿ.ಎ.ಪಿ. ಯೋಜನೆಯನ್ನು ಜಾರಿಗೆ ತಂದು ಇದರಲ್ಲಿ ಸರ್ಕಾರಿ ಆಫೀಸರುಗಳು ಇರುತ್ತಾರೆ. ೧೯೭೮–೭೯ಕ್ಕೆ ೧೦.೭೫ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದೇವೆ. ಆದ್ದರಿಂದ ಇನ್ನು ಮುಂದೆ ಬರಗಾಲ ಪ್ರದೇಶಗಳಿಗೆ ಈ ಎಲ್ಲ ವ್ಯವಸ್ಥೆಯನ್ನು ಕ್ರಮಗೊಳಿಸಿರುವುದರಿಂದ ಮುಂದೆ ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಇನ್ನು ಎಸ್.ಎಸ್.ಡಿ.ಎಸ್. ಸ್ಕೀಮ್ ಎನ್ನತಕ್ಕಂಥಾ ಅಭಿವೃದ್ಧಿ ಇಲಾಖೆಯು ರೂರಲ್ ಡೆವಲಪ್‌ಮೆಂಟ್ ಇಲಾಖೆಗೆ ಅಳವಡಿಸಿಕೊಳ್ಳಬೇಕು ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಆದನ್ನು ಆಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ವಿಲೀನಗೊಳಿಸಿರುವುದರಿಂದ ರೂರಲ್ ಡೆವಲಪ್‌ಮೆಂಟಿಗೆ ನೇರವಾಗಿ ಬರುವುದಕ್ಕೆ ಸಾಧ್ಯವಿಲ್ಲ. ಅದು ಕೂಡ ಒಂದು ಹೊಸ ಯೋಜನೆಯಾಗಿರುತ್ತದೆ. ಆದರೂ ಕೂಡ ನಾವು ಅದನ್ನು ಆಗ್ರಿಕಲ್ಚರ್ ಡಿಪಾರ್ಟ್‌ಮೆಂಟಿಗೆ ಅಳವಡಿಸುತ್ತಿದ್ದೇವೆ ಎನ್ನುವ ವಿಷಯವನ್ನು ತಿಳಿಸಲು ಇಷ್ಟಪಡುತ್ತೇನೆ.

ಮತ್ತೆ ಬಿ.ಡಿ.ಓ.ಗಳನ್ನು ತಹಸೀಲ್‌ದಾರರನ್ನಾಗಿ ಮಾಡುತ್ತೀರಿ ಆದರೆ ತಹಸೀಲ್‌ದಾರರನ್ನು ಏತಕ್ಕೆ ಬಿ.ಡಿ.ಓ. ಗಳಾಗಿ ತೆಗೆದುಕೊಳ್ಳುವುದಿಲ್ಲವೆಂದು ಮಾನ್ಯ ಸದಸ್ಯರೊಬ್ಬರು ಪ್ರಸ್ತಾಪ ಮಾಡಿದರು. ಅದಕ್ಕೆ ಇತ್ತೀಚೆಗೆ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿಗೆ ಇಂಥಿಂಥ ಡಿಪಾರ್ಟ್‌ಮೆಂಟ್‌ನವರನ್ನೇ ತೆಗೆದುಕೊಳ್ಳಬೇಕೆಂದು ಒಂದು ತೀರ್ಮಾನವನ್ನು ಮಾಡಿದ್ದೇವೆ. ಅನೇಕರ ಮನಸ್ಸಿನಲ್ಲಿ ರೂರಲ್ ಡೆವಲಪ್‌ಮೆಂಟ್ ಎನ್ನತಕ್ಕಂಥ ಒಂದು ಡಿಪಾರ್ಟ್‌ಮೆಂಟ್ ಸ್ವಂತ ಡಿಪಾರ್ಟ್‌ಮೆಂಟ್ ಇರುತ್ತದೆ, ಇದರಲ್ಲಿ ಹೇಗಾಗಿದ ಎಂದರೆ ಇದು ಅಭಿವೃದ್ಧಿಯಾಗುವುದಕ್ಕೆ ತಕ್ಕಂಥ ವ್ಯವಸ್ಥೆ ಇಲ್ಲವೆಂದು ಹೇಳಿದರು. ಇದು ಒಂದು ಬದಲಾವಣೆಯಾಗಬೇಕಾದರೆ ಕರ್ನಾಟಕದಲ್ಲಿ ಪ್ಲಾನಿಂಗ್ ಎನ್ನತಕ್ಕಂಥಾದ್ದು ಇರುತ್ತದೆ. ಅವರು ಮಾತ್ರ ಬದಲಾವಣೆಯನ್ನು ಮಾಡತಕ್ಕಂಥಾದ್ದು ಇರುತ್ತದೆ ಈ ಪ್ಲಾನಿಂಗ್ ಮಾಡತಕ್ಕಂಥವರು ಸೆಂಟ್ರಲ್ ಗೌವರ್ನ್‌ಮೆಂಟ್‌ನವರು ಇರುತ್ತಾರೆ. ಅವರು ಏನು ಬದಲಾವಣೆಗಳನ್ನು ಮಾಡುತ್ತಾರೋ ಅದನ್ನು ಅನುಸರಿಸಿ ಕಾರ್ಯಗಳನ್ನು ಮಾಡಬೇಕಾಗಿರುತ್ತದೆ. ಅದಕ್ಕೆ ಪ್ರಯತ್ನಗಳೂ ನಡೆದಿದೆ. ಅದು ಹೆಚ್ಚಿನ ಡಿಪಾರ್ಟ್‌ಮೆಂಟ್ ಇದ್ದು ಇನ್ನೂ ಹೆಚ್ಚಿನ ಕೆಲಸ ಮಾಡಬೇಕು ಎನ್ನುವ ವ್ಯವಸ್ಥೆಯೂ ಕೂಡ ನಡೆದಿದೆ. ಆದರೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾ ಇದ್ದಾರೆ ಹೆಚ್ಚಿನ ಪ್ರಾಮಿನೆನ್ಸ್ ಏತಕೆ ಕೊಡುತ್ತೀರಿ ಎಂದು. ಮಾನ್ಯ ಸದಸ್ಯರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಹಿಂದೆ ಬಹಳ ಪ್ರಾಮುಖ್ಯತೆ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಇದ್ದದ್ದು ನಿಜ. ಇತ್ತೀಚೆಗೆ ಡೆವಲಪ್‌ಮೆಂಟ್ ಕೆಲಸಗಳು ಜಾಸ್ತಿಯಾದ ಮೇಲೆ ಅದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಅದರ ಪ್ರಾಮುಖ್ಯತೆಯು ಕಡಿಮೆ ಆಗಬಾರದು ಎಂದು ಕೆಲವರ ಮನಸ್ಸಿನಲ್ಲಿ ಇದೆ. ಮುಂದೆ ಯಾವ ಡಿಪಾರ್ಟ್‌ಮೆಂಟ್ ಕೂಡ ಹೆಚ್ಚು ಕಡಿಮೆ ಇರಬಾರದು, ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಆದರ ಒಂದು ಕಾರ್ಯಕ್ರಮವನ್ನು ಅನುಸರಿಸಿ ಎಲ್ಲ ಡಿಪಾರ್ಟ್‌ಮೆಂಟ್ ಸಹಕಾರ ಇರಬೇಕು, ಬಿ.ಡಿ.ಓ. ಹಂತದಲ್ಲಿ ೧೩–೧೬ ಜನ ಎಕ್ಸ್‌ಟೆನ್ಷನ್ ಆಫೀಸರ್‌ಗಳನ್ನು ಕೊಡಲಾಗಿದೆ. ಆದರೆ ಕೆಲಸದಲ್ಲಿ ಏತಕ್ಕೆ ಇದು ಸ್ವತಂತ್ರವಾಗಿ ಇರಬಾರದು ಎಂಬ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಾವು ಅದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಅದು ಎಷ್ಟರಮಟ್ಟಿಗೆ ಸ್ವತಂತ್ರವಾಗಿ

ಇದ್ದು ಕೆಲಸ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಪರ್ಯಾಲೋಚನೆ ಮಾಡಬೇಕೆಂದು ಇಟ್ಟುಕೊಂಡಿರುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. Under the Deputy Commissioner, the various departmental heads come and similarly at the taluks level, they come under the purview of B.D.O.

SRI G. B. SHANKAR RAO—The Deputy Commissioner is not at all powerful. He is only a co-ordinating agency at the District level meetings.

ಶ್ರೀ ಕೆ. ಪ್ರಭಾಕರ್.—ನಾನು ಹೇಳುವ ಅರ್ಥದಲ್ಲಿ ರೆವೆನ್ಯೂ ಡಿಪಾರ್ಟ್‌ಮೆಂಟಿನಲ್ಲಿ even from Tahasildar to the Revenue Secretary and to the Revenue Commissioner there is synthetic relation in the department. Such thing has not fully achieved in the development department. ಎಂದು ಹೇಳುತ್ತಿದ್ದೇನೆ. This is the fact. ಆದರೆ ಮಾನ್ಯ ಸದಸ್ಯರೊಬ್ಬರು ಎಜುಕೇಷನ್ ಡಿಪಾರ್ಟ್‌ಮೆಂಟ್ ಇದ್ದ ಹಾಗೆ ಡೆವೆಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಇಂಡಿಪೆಂಡೆಂಟ್ ಆಗಿ ಇರಬೇಕು ಎಂದು ಹೇಳಿದರು. ಈ ರೀತಿ ಹೇಳುವುದರಲ್ಲಿ from top to bottom or from the Ministry to portfolio, down to the B.D.O. field officers ಪವರ್ ಸ್ಟ್ರಕ್ಚರ್ ಹೇಗಿರಬೇಕೆಂದು ನೋಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸಮಸ್ಯೆಗಳು ಇವೆ. ಈ ಸಮಸ್ಯೆಗಳನ್ನು ಬಗೆಹರಿಸುವ ವಿಚಾರದಲ್ಲಿ ಇದನ್ನು ಕೂಡ we cannot ignore it. ಇದೆಲ್ಲಾ ಒಂದು ದಿವಸದಲ್ಲಿ ಆಗುವುದಿಲ್ಲ. ಇದರಲ್ಲಿ ಒಂದು ವೇಳೆ ಸಮಗ್ರವಾಗಿ ಸಮಸ್ಯೆ ಏನಿದೆ ಎನ್ನುವುದನ್ನು ನೋಡುವುದಕ್ಕೆ ಒಂದು ಸಮಿತಿಯನ್ನು ನಿರ್ಮಾಣ ಮಾಡಿ ಅವರ ಮುಖಾಂತರ ಅದನ್ನು ಕಂಡುಹಿಡಿಯಬೇಕು. ಹಾಗೆ ಸಮಸ್ಯೆ ಏನಿದೆ ಎಂಬುದನ್ನು ಕಂಡುಹಿಡಿದು ಅನಂತರ ಅದನ್ನು ವ್ಯವಸ್ಥಿತವಾಗಿ ಮಾಡಬೇಕೆಂದು ಕೆಲವರು ಸಲಹೆ ಕೊಟ್ಟಿದ್ದಾರೆ. ಇದರಲ್ಲಿ ಕಾರ್ಯಚಟುವಟಿಕೆಗಳು ಹೇಗೆ ಇದೆ ಎಂಬುದನ್ನು ನೋಡಬೇಕು ಎಂಬುದಾಗಿ ನಾನಾಗಲೇ ಹೇಳಿದ್ದೇನೆ.

SRI G.B. SHANKAR RAO —You are a independent Minister. You are incharge of a independent Department.

ಶ್ರೀ ಕೆ. ಪ್ರಭಾಕರ್.—ಮಿನಿಸ್ಟರ್ ಮಟ್ಟದಲ್ಲಿ ಇದು ಮೆರ್ಜ್ ಆಗುವುದಕ್ಕೆ ಕಾರಣವೇನೆಂದರೆ ರೆವೆನ್ಯೂ ಡಿಪಾರ್ಟ್‌ಮೆಂಟ್ ಏನಿದೆ ಇದರಲ್ಲಿ ಈ ಡೆವೆಲಪ್‌ಮೆಂಟ್ ಆಫೀಸರ್ಸ್ ಅಡ್‌ಮಿಕ್ಸಚರ್ ಆಗುತ್ತಾರೆ, Divisional Commissioner, Deputy Commissioner, A.C.O. Tahsildar, Feild Officer is not admixtured. It is away from B.D.O. ಎಂದು ಹೇಳಿದಾಗ ಏನಾಗುತ್ತದೆ ಎಂದರೆ here and there synthetic relation ಆಗಿಲ್ಲ ಎಂದು ಅರ್ಥವಾಗುತ್ತದೆ. ಇನ್ನು ಎರಡನೆಯದಾಗಿ this must be a regular department like any other department ಎಂದು ನಮ್ಮ ಅಭಿಪ್ರಾಯವಿದೆ. ಆಮೇಲೆ ಈ ಡಿಪಾರ್ಟ್‌ಮೆಂಟಿನಲ್ಲಿ ಕೇಸ್‌ವರ್ಕರ್ಸ್ ರಿಕ್ರೂಟ್‌ಮೆಂಟ್ ವಿಷಯದಲ್ಲಿ ಅವರನ್ನು ಇಂತಿಷ್ಟು ಪ್ರಮಾಣದಲ್ಲಿ ಡಿಪಾರ್ಟ್‌ಮೆಂಟ್‌ಗಳಿಂದ ಮಾತ್ರ ತೆಗೆದುಕೊಳ್ಳಬೇಕೆಂಬ ತತ್ವವನ್ನು ಸರ್ಕಾರದವರು ಅನುಸರಿಸುತ್ತಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಅನಿಮಲ್ ಹಸ್ಬೆಂಡರಿ ಮ್ಯಾಟರ್ ಆಗಲೀ, ರೆವೆನ್ಯೂ ಮ್ಯಾಟರ್ ಆಗಲೀ, ಡೆವೆಲಪ್‌ಮೆಂಟ್ ಮ್ಯಾಟರ್ ಆಗಲಿ ಇವೆಲ್ಲಾ ಕಾಂಪ್ಲಿಕೇಟೆಡ್ ಮ್ಯಾಟರ್ ಆಗಿರುವುದರಿಂದ ಇದಕ್ಕೆ ಹೆಚ್ಚು ಅನುಭವ ಇರತಕ್ಕಂಥ, ಈ ವಿಚಾರಗಳ ನುರಿತಿರತಕ್ಕಂಥ ಜನರು ಬೇಕು ಎಂದು ಹೇಳಿ, ಅದರನ್ನು ಇಂತಿಷ್ಟು ಪ್ರಮಾಣದಲ್ಲಿ ಆಯಾ ಇಲಾಖೆಗಳಿಂದಲೇ ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ ಹೊರಗಡೆಯಿಂದ ಅಭ್ಯರ್ಥಿಗಳನ್ನು ಪ್ರೊಬೇಷನರಿಯಾಗಿ ತೆಗೆದುಕೊಂಡರೆ ಅವರಿಗೆ ಈ ಎಲ್ಲಾ ಕೆಲಸಗಳನ್ನು ಕಲಿಸತಕ್ಕಂಥ ಪ್ರಮೇಯ ಉದ್ಭವವಾಗುತ್ತದೆ. ಆದ್ದರಿಂದ ಇಂತಿಷ್ಟು ಪ್ರಮಾಣದಲ್ಲಿ ಅವರನ್ನು ಆಯಾ ಇಲಾಖೆಗಳಿಂದಲೇ ತೆಗೆದುಕೊಳ್ಳಬೇಕೆಂಬ ಉದ್ದೇಶ ಇದೆ, ಈ ವಿಚಾರದಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಿದರೆ it is one of the points of being called independent department. ಆದ್ದರಿಂದ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡುತ್ತಾ ಇಲ್ಲ. ಅದನ್ನು ಏಕೆ ಆ ರೀತಿ ಮಾಡುತ್ತೀರಿ. ಈ ಡೆವೆಲಪ್‌ಮೆಂಟ್ ಡಿಪಾರ್ಟ್

ಮೆಂಟ್ ಇಂಡಿಪೆಂಡೆಂಟ್ ಆಗಿ ಉಳಿಯುವುದು ಹೇಗೆ' ಎಂದು ತಾವು ನನ್ನನ್ನು ಕೇಳಬಹುದು. ನಾವು ಬೇರೆ ಡಿಪಾರ್ಟ್‌ಮೆಂಟ್‌ಗಳಿಂದ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವುದರಿಂದ ಅವರ ಮದರ್ ಡಿಪಾರ್ಟ್‌ಮೆಂಟ್‌ನಲ್ಲಿನ ಸರ್ವೀಸ್ ಕಂಡೀಷನ್ಸ್ ಮತ್ತು ಟೆಕ್ನಿಕಲ್ ಪಾಯಿಂಟ್ಸ್ ಅದನ್ನು ಇಲ್ಲಿ ನಾವು ಅನುಸರಿಸಬೇಕಾಗುತ್ತದೆ. ಆಗ ಇದು ಇಂಡಿಪೆಂಡೆಂಟ್ ಆಗಿ ಇರುವುದಕ್ಕೆ ಆಗುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಈ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟನ್ನು ಇಂಡಿಪೆಂಡೆಂಟ್ ಡಿಪಾರ್ಟ್‌ಮೆಂಟಾಗಿ ಮಾಡಬೇಕೆಂದು ನಾವು ಇಲ್ಲಿ ಸಲಹೆ ಕೊಟ್ಟಿದ್ದೇವೆ.

ಶ್ರೀ ಕೆ. ಪ್ರಭಾಕರ್.—ತಾವು ಏನು ಸಲಹೆ ಕೊಟ್ಟಿದ್ದೀರಿ ಅದಕ್ಕಾಗಿ ಒಂದು ಕಮಿಟಿಯನ್ನು ಮಾಡಿ, ಅದನ್ನು ಇಂಡಿಪೆಂಡೆಂಟ್ ಡಿಪಾರ್ಟ್‌ಮೆಂಟ್ ಆಗಿ ಮಾಡುವುದರಲ್ಲಿ ಯಾವ ಯಾವ ಸಮಸ್ಯೆಗಳು ಇವೆ ಎಂಬುದನ್ನು ನೋಡಿಕೊಂಡು ಅದರ ಬಗ್ಗೆ ಆಲೋಚನೆ ಮಾಡಿ ಸರ್ಕಾರದವರು ಅದನ್ನು ಇಂಡಿಪೆಂಡೆಂಟ್ ಡಿಪಾರ್ಟ್‌ಮೆಂಟ್ ಮಾಡುವ ಬಗ್ಗೆ ಆಲೋಚನೆ ಮಾಡುತ್ತಾರೆ.

ಆಮೇಲೆ ಮಾನ್ಯ ಸದಸ್ಯರೊಬ್ಬರಿಂದ ಈ ಗ್ರಾಮಾಭಿವೃದ್ಧಿ ವಿಚಾರದಲ್ಲಿ ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ದುಡ್ಡು ಇಟ್ಟಿದ್ದೀರಿ ಎಂದು ಕೇಳಿದರು. ಈ ಕರೆಂಟ್ ಇಯರ್‌ನಲ್ಲಿ ಓಪನ್ ವೆಲ್ಸ್‌ಗಾಗಿ ೫೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ, ಬೋರ್‌ವೆಲ್ಸ್‌ಗಾಗಿ ೪೫೦.೩೩ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ಎನ್.ಆರ್.ಡಬ್ಲ್ಯೂ.ಎಸ್ ಸ್ಕೀಂಗೆ ೧೬೫.೦೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ರೂರಲ್ ಆಕ್ಸಿಲರೇಟೆಡ್ ವಾಟರ್‌ಸಪ್ಲೈಗೋಸ್ಕರ ೬೦.೬೭ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮತ್ತು ಆಕ್ಸಿಲರೇಟೆಡ್ ಪಿಲ್ಲೋವರ್ ವರ್ಕ್ಸ್‌ಗೆ ೨೮೦.೦೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ಗ್ರಾಮಾಭಿವೃದ್ಧಿಗಾಗಿ ಇನ್ನೂ ಹೆಚ್ಚು ಹಣವನ್ನು ಕೊಡಬೇಕೆಂಬುದಾಗಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ನಾವು ಒಂದು ಹೊಸ ಯೋಜನೆಯನ್ನು ತಯಾರು ಮಾಡಿ ೮೫ ಡೆವಲಪ್‌ಮೆಂಟ್ ಬ್ಲಾಕ್ಸ್ ಎಂದು ತೆಗೆದುಕೊಂಡು ಪ್ರತಿಯೊಂದು ಬ್ಲಾಕಿಗೂ ೫ ಲಕ್ಷ ರೂಪಾಯಿಗಳನ್ನು ಅಭಿವೃದ್ಧಿ ಕೆಲಸಕ್ಕಾಗಿ ನಾವು ಕೊಡುತ್ತಿದ್ದೇವೆ. ಇದರಲ್ಲಿ each blocks gets 5 lakhs within 2 or 3 years to complete the work which are not included ಎಂದು ಹೇಳಿ ನಾವು ಇದನ್ನು ಮಾಡಿದ್ದೇವೆ. ಇದರಿಂದ ತಾವು ಏನು ಹೆಚ್ಚು ಹಣವನ್ನು ಈ ಗ್ರಾಮಾಭಿವೃದ್ಧಿ ಕೆಲಸಕ್ಕೆ ಕೊಡಲಿಲ್ಲ ಎಂದು ಹೇಳುತ್ತಿದ್ದೀರೋ ಈ ಒಂದು ಕೊರತೆಯನ್ನು ಇದರಿಂದ ನೀಗಬಹುದು ಎಂದು ತಿಳಿಸುವುದಕ್ಕೆ ನನಗೆ ಸಂತೋಷವಾಗುತ್ತದೆ.

ಇನ್ನು ಕಡೆಯದಾಗಿ ಮಾನ್ಯ ಸದಸ್ಯರಾದ ರಾಮಕೃಷ್ಣರವರು ನನ್ನ ವಿಷಯದಲ್ಲಿ ಮಾತನಾಡಿ, ತಾವು ಉತ್ತರ ಕೊಡುವಾಗ ಇದನ್ನು ಅದರ ಜೊತೆಯಲ್ಲಿ ಸೇರಿಸಿಕೊಂಡು ಉತ್ತರ ಕೊಡಿ ಎಂದು ಹೇಳಿದರ ಮೇರೆಗೆ ಈ ಒಂದು ವಿಚಾರವನ್ನು ಈ ಸಭೆಗೆ ನಾನು ತಿಳಿಸಬಯಸುತ್ತೇನೆ. ಮಾನ್ಯ ಸದಸ್ಯರು 'ಬೆಂಗಳೂರಿನ ಹತ್ತಿರದಲ್ಲಿ ಮಾನ್ಯ ಮಂತ್ರಿಯವರಿಗೆ ೧೦೦ ಎಕರೆಯ ಒಂದು ಎಸ್ಟೇಟ್ ಇದ್ದು ಅಲ್ಲಿ ಪದೇ ಪದೇ ಅವರು ಕಾಲ ಕಳೆಯಲು ಹೋಗುವುದರಿಂದ, ಈ ಸರ್ಕಾರಿ ಕೆಲಸವನ್ನು ಹೇಗೆ ಮಾಡುತ್ತಾರೆ' ಎಂದು ಅವರು ಕೇಳಿದರು. ನಾನು ಮಾನ್ಯ ರಾಮಕೃಷ್ಣರವರಿಗೆ ಹೇಳಬಯಸುವುದೇನೆಂದರೆ ನನ್ನ ಜೀವಮಾನದಲ್ಲಿ ನಾನು ೧೦೦ ಎಕರೆಯಷ್ಟು ಜಮೀನನ್ನು ಪಡೆದುಕೊಳ್ಳುವುದಕ್ಕೆ ಆಶೆ ಪಟ್ಟಿಲ್ಲ. ಈ ಬಗ್ಗೆ ಮಾನ್ಯ ದೇವೇಗೌಡರವರೂ ಸಹ 'ಅವರು ಜಮೀನು ಇಲ್ಲ ಎಂದು ಹೇಳುತ್ತಾರೆ, ಇವರು ಉಂಟು ಎಂದು ಹೇಳುತ್ತಾರೆ. ಆದ್ದರಿಂದ ಅದನ್ನು ಈ ಸಭೆಯೇ ತೀರ್ಮಾನ ಮಾಡಲಿ ಎಂಬುದಾಗಿ ಅವರು ಒಂದು ಚಾಲೆಂಜನ್ನು ಇಟ್ಟಿದ್ದಾರೆ. ನಾನು ಈ ಬಗ್ಗೆ ಖಚಿತವಾಗಿ ಹೇಳುವುದೇನೆಂದರೆ ನನಗೆ ೧೦೦ ಎಕರೆಯ ಎಸ್ಟೇಟ್ ಇಲ್ಲವೇ ಇಲ್ಲ. ಅದು ಬೆಂಗಳೂರಿನಲ್ಲೂ ಇಲ್ಲ, ದೂರದಲ್ಲಿಯೂ ಇಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—೯೯ ಎಕರೆಯಷ್ಟು ಇದೆಯಾ ?

ಶ್ರೀ ಕೆ. ಪ್ರಭಾಕರ್.—ನನಗೆ ಇರುವುದು ೫೫ ಎಕರೆ ೧೩ ಗುಂಟೆ ಮಾತ್ರ. ನನ್ನದು ಜಾಯಿಂಟ್ ಫ್ಯಾಮಿಲಿ, ಮನೆಯಲ್ಲಿ ೨೨ ಮಂದಿ ಇದ್ದಾರೆ. ಮದುವೆ ಆಗದವರು ಬಹಳಷ್ಟು ಮಂದಿ ಇದ್ದಾರೆ. ನಾನು ೧೦೦ ಎಕರೆ ಜಮೀನನ್ನು ಇಟ್ಟೇ ಇಲ್ಲ. ಮಂತ್ರಿಗಳಾಗಿರುವವರ ಬಾಳೆಲ್ಲಾ ಹೀಗೆ ನೋಡಿ, ಒಂದು ಜಮೀನು ಮಾಡುವುದಕ್ಕೆ ಅವಕಾಶವಿಲ್ಲ, ಇದು ಎಲ್ಲಾ ಜನಗಳ ಸೇವೆಗೆ ಅವಕಾಶ.

ಇದನ್ನು ನಂಬಿ ಜೀವನ ಮಾಡುವುದಕ್ಕೆ ಬಂದಿಲ್ಲ. ನಾವು ಹಳ್ಳಿ ಜೀವನವನ್ನು ಸಂಪೂರ್ಣವಾಗಿ ಮರೆತು ಪಟ್ಟಣದ ಜೀವನಕ್ಕೆ ಹೊಂದಿಕೊಳ್ಳುವುದಾದರೆ ನಾಳೆ ಹೊಟ್ಟೆ ಜೀವನಕ್ಕೂ ಬಹಳ ಕಷ್ಟವಾಗ ಬಹುದು. ಅಂತಹ ಕಾಲ ಬರಬಹುದೆಂದು ನಾನು ಹೇಳುತ್ತೇನೆ.

ಮತ್ತು ೧೦೦ ಎಕರೆ ಎಸ್ಟೇಟ್ ಇದೆ. ಅದನ್ನು ನೋಡಲು ಪದೇ ಪದೇ ಹಳ್ಳಿಗೆ ಹೋಗುತ್ತಿರು ತ್ತಾರೆ. ಇವರು ಸರ್ಕಾರಿ ಕೆಲಸವನ್ನು ಯಾವ ರೀತಿ ನಿರ್ವಹಿಸುತ್ತಾರೆಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಆ ರೀತಿ ಸರ್ಕಾರದ ಅಧಿಕಾರವನ್ನು ಎಸ್ಟೇಟ್ ಬೆಳೆಸುವುದಕ್ಕಾಗಿ ಉಪಯೋಗಿಸಿಲ್ಲ. ನಿನ್ನೆ ಭಾನುವಾರ ನಾನು ಶ್ರೀಮಾನ್ ರಾಮಕೃಷ್ಣರವರ ಮನೆಗೆ ಫೋನ್ ಮಾಡಿದಾಗ ಅವರು ಮಳವಳ್ಳಿ ಯಲ್ಲಿರುವ ಅವರ ಎಸ್ಟೇಟ್ ನೋಡಲಿಕ್ಕೆ ಹೋದರು ಎಂಬುದಾಗಿ ಹೇಳಿದರು. ಅದಕ್ಕೋಸ್ಕರ ನನ್ನ ಅರ್ಥ ಏನು ಅಂದರೆ ಸರ್ಕಾರದ ಅಧಿಕಾರವನ್ನು ದುರ್ವಿನಿಯೋಗ ಮಾಡಿಲ್ಲ. ಮತ್ತು ಎಸ್ಟೇಟ್ ಇಲ್ಲವೇ ಇಲ್ಲ. ಆ ರೀತಿ ಅವರು ತೋರಿಸಿಕೊಟ್ಟರೆ, just I thank him.

೧೦೦ ಎಕರೆ ಎಸ್ಟೇಟ್ ಇಲ್ಲದಿರುವುದರಿಂದ ರೂಪಾಯಿಗೆ ರೂಪಾಯಿಯ ಬಲ ನನಗಿದೆ ಎಂಬ ನಂಬಿಕೆ ನನಗಿದೆ. ಕಾರಣ ಎಸ್ಟೇಟ್ ಇಲ್ಲ. ೧೦೦ ಎಕರೆ ಜಮೀನು ಇಲ್ಲ. ಅದಕ್ಕೋಸ್ಕರ ನಾನು ಯಾವಾಗಲೂ ಸರ್ಕಾರದ ಅಧಿಕಾರವನ್ನು ದುರ್ವಿನಿಯೋಗ ಮಾಡಿಲ್ಲ. ಇದು ಸತ್ಯಕ್ಕೆ ದೂರವಾದ ಮಾತು ಎಂಬುದಾಗಿ ಹೇಳುತ್ತೇನೆ. ಎರಡನೆಯದಾಗಿ ಗ್ರಾಮಗಳಿಗೆ ಹೋಗುತ್ತೀರಾ. ಕಸ, ಗುಂಡಿ ಇರುವ ಕಡೆಯೂ ಮಂತ್ರಿಗಳು ಹೋಗುತ್ತಾರೆ ಎಂಬುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಹಿಂದೆ ಮಹಾತ್ಮಾ ಗಾಂಧೀಜಿಯವರು ರಾಮರಾಜ್ಯ ಎಂಬುದಾಗಿ ಹೇಳಿರಬಹುದು. ಆದರೆ ವಾಸ್ತವಿಕ ವಾಗಿ ನೋಡುವುದಾದರೆ ಹಳ್ಳಿಯ ಚಿತ್ರ ಏನಿದೆ ಎಂದರೆ ಅನೇಕರು ಬಹಳ ಬಡವರಿದ್ದಾರೆ. ತಮ್ಮ ಗಡ್ಡವನ್ನು ಬೋಳಿಸಿರುವುದಿಲ್ಲ. ಉಗುರು ಕತ್ತರಿಸಿರುವುದಿಲ್ಲ. ಕಸ-ಕೊಳೆಯಲ್ಲಿ ಇರುವ ಜನ. ಗ್ರಾಮಗಳಿಗೆ ಹೋದರೆ ಅಲ್ಲೊಬ್ಬ ಕಾಯಿಲೆಯಿಂದ ನರಳುತ್ತಿದ್ದಾನೆ, ನೋಡಿ ಎಂಬುದಾಗಿ ಹೇಳು ತ್ತಾರೆ. ಆದರೆ ನಾವು ಯಾವ ಕಾರ್ಯಕ್ರಮಕ್ಕಾಗಿ ನಾವು ಹೋಗಿದ್ದೆವೋ ಅದನ್ನೇ ಪಟ್ಟಾಗಿ ಹಿಡಿದು ಕೊಳ್ಳುವುದಕ್ಕಾಗುವುದಿಲ್ಲ. ಇದು ಲಿಟಲ್ ಡೀವಿಯೇಷನ್ ಎಂಬುದಾಗಿ ಕರೆದುಕೊಂಡು ಹೋಗು ತ್ತಾರೆ. ಆಗ ಆ ದಾರಿಯಲ್ಲಿ ಮಂತ್ರಿಗಳು ಬರುತ್ತಾರೆಂದು ರಂಗೋಲೆ ಹಾಕುವುದಕ್ಕಾಗುವುದಿಲ್ಲ. ಕಸವೂ ಇರುತ್ತದೆ, ಕೊಳೆಯೂ ಇರುತ್ತದೆ. ಅದರಲ್ಲೇ ಬಡವರು ತಮ್ಮ ಗುಡಿಸಲುಗಳನ್ನು ಕಟ್ಟಿ ಕೊಂಡಿರುತ್ತಾರೆ. ಆ ರೀತಿ ಬಡತನದಲ್ಲಿರುವ ಜನರು ಮಂತ್ರಿಗಳು ಬರುತ್ತಾರೆಂದು ಸೋಫಾಗಳನ್ನು ಹಾಕುವುದಕ್ಕಾಗುವುದಿಲ್ಲ. ನಾನು ಗುಡಿಸಲುಗಳಿಗೆ ಹೋಗುವುದೂ ಉಂಟು. ಅವರ ಕಷ್ಟಗಳೇನು ಎಂಬುದನ್ನು ಕೇಳುವುದೂ ಉಂಟು. ಆ ಮನೋಧರ್ಮ ನನ್ನಲ್ಲಿರುವುದರಿಂದ ನಾನು ಗುಡಿಸಲು ಗಳಿಗೂ ಹೋಗುತ್ತೇನೆ. ಕೊಳಕು ಇರುವ ಕಡೆಗೂ ಹೋಗುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಇರತಕ್ಕಂಥ ಕೊಳಕನ್ನು ತೆಗೆಸಿ ಎಂಬುದಾಗಿ ನಾನು ಹೇಳುತ್ತಿರು ವುದು.

ಶ್ರೀ ಕೆ ಪ್ರಭಾಕರ್.—ಕೊಳಕನ್ನು ತೆಗೆಸುವುದಕ್ಕೆ ಬೇರೆ ಯೋಜನೆ ಇದೆ, ಆ ವಿಚಾರ ಬೇರೆ. ಮತ್ತೆ ಈ ಖಾತೆ ನಿಮಗೆ ಬೇಡ ಎಂಬುದಾಗಿ ಕೆಲವು ಸದಸ್ಯರು ಕೋರಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಸರ್ಕಾರವನ್ನು ರಚನೆ ಮಾಡುವಾಗ ಒಂದೊಂದು ಪಕ್ಷಕ್ಕೂ ಒಬ್ಬೊಬ್ಬ ಲೀಡರ್ ಎಂಬುದಾಗಿ ಇರುತ್ತಾರೆ. ಅವರ ಪಕ್ಷ ಅಧಿಕಾರಕ್ಕೆ ಬಂದಾಗ ಅವರು ಮಂತ್ರಿ-ಮಂಡಲವನ್ನು ರಚನೆ ಮಾಡುತ್ತಾರೆ. ಆ ರೀತಿ ಮಾಡುವಾಗ ಒಬ್ಬೊಬ್ಬರಿಗೆ ಒಂದೊಂದು ಖಾತೆಯನ್ನು ಕೊಡುತ್ತಾರೆ. ಸಾಮಾನ್ಯವಾಗಿ ಖಾತೆಯನ್ನು ತೆಗೆದುಕೊಳ್ಳುವುದು ಬಿಡುವುದು ಅವರವರ ಇಚ್ಛೆಯಂತೆ ನಡೆಯುವುದಿಲ್ಲ. ಮತ್ತೆ ಇದೇ ಖಾತೆ ನನಗೆ ಬೇಕು ಈ ಖಾತೆ ನನಗೆ ಬೇಡ ಎಂದು ಹೇಳುವವನಲ್ಲ ಯಾವುದೇ ಖಾತೆಯನ್ನು ಕೊಟ್ಟರೂ ನನ್ನ ಕೈಲಾದ ಮಟ್ಟಿಗೆ ಸೇವೆಯನ್ನು ಮಾಡುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಕೆ. ಪ್ರಭಾಕರ್.—ಡೆವಲಪ್‌ಮೆಂಟ್ ಕಾರ್ಪೊರೇಷನ್ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯ ರಿಗೆ ಗೊತ್ತಿಲ್ಲ.

ಅಧ್ಯಕ್ಷರು.—ಅದು ಗ್ರಾಮೀಣ ಅಭಿವೃದ್ಧಿ ಇಲಾಖೆಯ ಬೇಡಿಕೆಯಲ್ಲಿ ಬರುವುದಿಲ್ಲ. ಅದು ಸಮಾಜಕಲ್ಯಾಣ ಇಲಾಖೆಯ ಬೇಡಿಕೆಯಲ್ಲಿ ಬರುತ್ತದೆ.

ಶ್ರೀ ಕೆ. ಪ್ರಭಾಕರ್.—ಅದು ಗ್ರಾಮೀಣ ಅಭಿವೃದ್ಧಿ ಇಲಾಖೆಯ ಬೇಡಿಕೆಯಲ್ಲಿ ಬರುವುದಿಲ್ಲ. ಹಾಗೆ ಇನ್ನೂ ಎಷ್ಟೆಷ್ಟೋ ವಿಷಯಗಳನ್ನು ಈ ಖಾತೆಗೆ ಸಂಬಂಧವಿಲ್ಲದೆ ಇರುವ ವಿಚಾರಗಳನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ವಿಚಾರದಲ್ಲಿ ನನ್ನ ಕೈಲಾದ ಮಟ್ಟಿನ ಸೇವೆಯನ್ನು ಮಾಡಿದ್ದೇನೆ. ತಾವು ಹೇಳಿದ ಪ್ರಕಾರ ೩೦ ಲಕ್ಷ ಅಲ್ಲ. ೮೦ ಲಕ್ಷ ರೂಪಾಯಿಗಳು. ಇನ್ಸಿಟ್ಯೂಟ್‌ನ್ನು ಮಾಡುವುದಕ್ಕೆ ಖರ್ಚಾಗಿರತಕ್ಕಂಥ ಹಣವನ್ನು ಬಿಟ್ಟು ಹೇಳಿದ್ದಾರೆ. ಅದನ್ನೂ ಸೇರಿಸಿಕೊಂಡರೆ ೮೦ ಲಕ್ಷ ರೂಪಾಯಿಗಳಾಗುತ್ತವೆ. ದುಡ್ಡು ಖರ್ಚಾಗಿದೆ, ಬಹಳ ಅನುಕೂಲಗಳಾಗಿವೆ. ಒಂದು ಟ್ರೈನಿಂಗ್ ಇನ್ಸಿಟ್ಯೂಟ್‌ಮಾಡಿದ್ದೇವೆ. ಮೈಸೂರಿನಲ್ಲಿ ಒಂದು ಪ್ರಾಜೆಕ್ಟ್ ಮಾಡುವುದಕ್ಕೆ ಮಾಡಿದ್ದೇವೆ. ೩೦ ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿದ್ದೇವೆ. ನಮಗೆ ಕೊಟ್ಟಂತಹ ದುಡ್ಡನ್ನು ವ್ಯವಸ್ಥಿತವಾಗಿ ಖರ್ಚು ಮಾಡಿದ್ದೇವೆ. ಅಷ್ಟು ಮಾತ್ರ ನಾನು ಹೇಳಬಲ್ಲೆ. ಆಂಧ್ರದಲ್ಲಿ ಹೆಚ್ಚಿಗೆ ದುಡ್ಡು ಕೊಟ್ಟಿದ್ದರು. ಅಲ್ಲಿ ಹೆಚ್ಚಿಗೆ ಕೆಲಸ ಮಾಡಿದ್ದಾರೆ. ನಮ್ಮಲ್ಲಿ ಕಡಿಮೆ ಹಣವನ್ನು ಕೊಟ್ಟಿದ್ದರು. ಕಡಿಮೆ ಕೆಲಸ ಮಾಡಿದ್ದೇವೆ. ಮತ್ತೆ ಕೆಲವು ಸಲಹೆಗಳನ್ನು ಸೇವಾ ದೃಷ್ಟಿಯಿಂದ ಮಾತನಾಡಿರಲೂ ಬಹುದು. ಆದರೆ ಇನ್ನೂ ಕೆಲವು ವಿಚಾರಗಳನ್ನು ಬೇಡಿಕೆಗೂ ಸಂಬಂಧವಿಲ್ಲ, ಸಬ್ಜೆಕ್ಟ್ ಅಲ್ಲ. ಅಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. He has just attempted to either mislead or to endulge in character affination. ಅದನ್ನು ಏತಕ್ಕಾಗಿ ಹೇಳಿದರು ಎಂಬುದನ್ನು ನನಗೆ ಅರ್ಥಮಾಡಿಕೊಳ್ಳುವುದಕ್ಕೆ ಕಷ್ಟವಾಗಿದೆ. ಮಾನ್ಯ ದೇವೇಗೌಡರು ಇಲ್ಲಿ ಇಲ್ಲ. ೧೦೦ ಎಕರೆ ಎಂಬುದಾಗಿ ಏನು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದ ಮಾತು. ಅದು ರೂಪಾಯಿಗೆ ರೂಪಾಯಿಯಷ್ಟೂ ಸತ್ಯವಿಲ್ಲ. ಅದನ್ನು ಸಾಭೀತು ಮಾಡಬೇಕು. ಒಂದು ವೇಳೆ ಅದನ್ನು ರುಜುವಾತು ಮಾಡದಿದ್ದರೆ ಈ ಸಭೆ ಅದನ್ನು ತೀರ್ಮಾನ ಮಾಡುತ್ತದೆ. ಅದನ್ನೂ ಈಗಾಗಲೇ ದೇವೇಗೌಡರು ಸೂಚಿಸಿದ್ದಾರೆ.

ಅಧ್ಯಕ್ಷರು.—ವಾದವಿವಾದ ಮಾಡುವುದಕ್ಕೋಸ್ಕರ ಅಲ್ಲ ಈ ಮನೆ ಇರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಪ್ರಭಾಕರ್‌ರವರು ಪ್ರಶ್ನೆಯನ್ನು ಚೆನ್ನಾಗಿ ಎತ್ತಿದ್ದಾರೆ. ತಮ್ಮ ಹೆಸರಿನಲ್ಲಿ ಅಥವಾ ತಮ್ಮ ಒಟ್ಟು ಕುಟುಂಬದ ಹೆಸರಿನಲ್ಲಿ ೫೪ ಎಕರೆ ಜಮೀನು ಇದೆ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಶ್ರೀಮಾನ್ ವೈ. ರಾಮಕೃಷ್ಣರವರು ಅವರ ಹೆಸರಿನಲ್ಲಿ, ಅವರ ಮನೆಯವರ ಹೆಸರಿನಲ್ಲಿ. ಅವರ ಸಂಬಂಧಿಕರ ಹೆಸರಿನಲ್ಲಿ ಒಟ್ಟು ೧೦೦ ಎಕರೆ ಜಮೀನು ಇದೆ ಎಂಬುದಾಗಿ ಹೇಳುತ್ತಿದ್ದಾರೆ. ಇದರ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನಮೂದಾಗಿರುತ್ತದೆ. ತಮ್ಮ ಭಾಷಣದಲ್ಲಿ ಹೇಳಿರುವಂತೆ ಈಗ ಸಭೆಯ ಮುಂದೆ ಇರತಕ್ಕಂಥ ಪ್ರಶ್ನೆ ಏನೆಂದರೆ ಶ್ರೀಮಾನ್ ರಾಮಕೃಷ್ಣರವರು ಹೇಳಿದಂತೆ ೧೦೦ ಎಕರೆ ಜಮೀನು ಇದೆ ಎಂಬುದಾಗಿ ಅವರು ಸಾಭೀತು ಮಾಡಿಕೊಟ್ಟರೆ ನೀವು ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕಾದ ಪ್ರಸಂಗ ಬರುತ್ತದೆ. ಅದನ್ನು ವಿಚಾರ ಮಾಡೋಣ. ಇದನ್ನು ಮಾನ್ಯ ಸಭೆಗೆ ಸಲಹೆ ಕೊಟ್ಟಿದ್ದೇನೆ. ಅದರ ವಿವರವನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ. ಪ್ರಭಾಕರ್.—ನಮ್ಮ ಮನೆಯಲ್ಲಿ ೨೨ ಜನ ಇದ್ದಾರೆ. ೫೪ ಎಕರೆ ಮೇಲೆ ಜಮೀನು ಇಲ್ಲ.

೫–೩೦ ಪಿ. ಎಂ.

ಶ್ರೀ ವೈ ರಾಮಕೃಷ್ಣ.—ಸ್ವಾಮಿ, ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಕೆಲಸ ಒದಗಿಸುವುದಕ್ಕಾಗಿ ಮತ್ತು ಅವರ ಒಂದು ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕಾಗಿ ಮಹಾರಾಷ್ಟ್ರದಲ್ಲಿ ಜಾರಿಗೆ ತಂದಿರುವಂತಹ ಸ್ಕೀಮನ್ನು ಇಲ್ಲಿಯೂ ಜಾರಿಗೆ ತರುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಇಂದಿನ ಬೇಡಿಕೆಗಳಲ್ಲಿ ಆ ವಿಷಯ ಬರುವುದಿಲ್ಲ. ನಾಳೆ ರೆವಿನ್ಯೂ ಡಿಮ್ಯಾಂಡ್ ಬಂದಾಗ ಮಾನ್ಯ ಸದಸ್ಯರು ಅದರ ಬಗ್ಗೆ ಮಾತನಾಡಲಿ. ನಾನು ಈ ಬಗ್ಗೆ ತಯಾರಿಸಿರುವ ಸ್ಕೀಮಿನ ಬಗ್ಗೆ ವಿಷದಪಡಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಕುಡಿಯುವ ನೀರಿನ ಬಾವಿಗಳ ಬಗ್ಗೆ ಸರ್ಕಾರದ ನೀತಿ ಏನೆಂಬುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ಏಕೆಂದರೆ ಈ ಬಾಬಿಗೆ ಕೇಂದ್ರದಿಂದ ಶೇಕಡಾ ನೂರರಷ್ಟು ಗ್ರಾಂಟ್ ಸಿಕ್ಕುತ್ತದೆ. ಆದರೆ ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಅವರು ಎಷ್ಟು ಹಣ

ಬೇಕಾದರೂ ಕೊಡಲು ಸಿದ್ಧರಿದ್ದಾರೆ, ನಮ್ಮ ರಾಜ್ಯದಲ್ಲಿ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ ಎಂಬುದರ ಬಗ್ಗೆ ಸರ್ವೆ ಮಾಡಿಸಿದ್ದೀರಾ ಎಂಬುದನ್ನು ತಿಳಿಸಬೇಕು. ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಗಳಿಗೆ ಹತ್ತು ಕಾಗದಗಳನ್ನು ಬರೆದಿದ್ದೇನೆ. ಎಲ್ಲದಕ್ಕೂ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅಂದರೆ ಈ ಕೆಲಸ ಮಾಡಿಸಲು ತಮಗೆ ಇನ್ನು ಎಷ್ಟು ವರ್ಷಗಳು ಬೇಕು ಎಂಬುದನ್ನಾದರೂ ತಿಳಿಸುತ್ತೀರಾ ?

ಶ್ರೀ ಬಿ. ವಿ. ಕಕ್ಕಿಲ್ಲಾಯ.—ತಾಲ್ಲೂಕ್ ಬೋರ್ಡಿನವರು ತಮ್ಮ ಬಡ್ಜೆಟ್‌ನಲ್ಲಿ ೧೮ ಪರ್ಸೆಂಟ್ ಹಣವನ್ನು ಹರಿಜನ ಮತ್ತು ಗಿರಿಜನರ ಅಭಿವೃದ್ಧಿಗೆ ತೆಗೆದಿಡಬೇಕು, ಆ ಹಣದಲ್ಲಿ ಏನಾದರೂ ಸ್ವಲ್ಪ ಉಳಿದರೆ ಅದನ್ನು ಮುಂದಿನ ವರ್ಷಕ್ಕೆ ಕಾದಿರಿಸಿ ಖರ್ಚು ಮಾಡಬೇಕೆಂದು ನಿಯಮವಿದೆ. ಆದರೆ ಈ ನಿಯಮವನ್ನು ಪಾಲಿಸದಿದ್ದವರ ಮೇಲೆ ಏನು ಕ್ರಮ ಕೈಕೊಳ್ಳುತ್ತೀರಾ ?

ಎರಡನೆಯದಾಗಿ ವಿಲೇಜ್ ಅಕೌಂಟೆಂಟ್ ರೆವಿನ್ಯೂ ಇಲಾಖೆಯ ಕೆಲಸವನ್ನು ಮಾಡಬೇಕು ಮತ್ತು ಪಂಚಾಯತ್ ಸೆಕ್ರೆಟರಿ ಕೆಲಸವನ್ನು ಸಹ ಮಾಡಬೇಕು. ಇದರಿಂದ ಅವರು ಸರ್ಕಾರದ ಯಾವ ನಿಯಂತ್ರಣಕ್ಕೂ ಸಿಕ್ಕುವುದಿಲ್ಲ. ಆದಕಾರಣ ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಸೆಕ್ರೆಟರಿಗಳನ್ನು ನೇಮಕ ಮಾಡಲು ಕ್ರಮ ಕೈಕೊಳ್ಳುತ್ತೀರಾ ? ಏಕೆಂದರೆ ಪಂಚಾಯಿತಿಗಳ ಕೆಲಸ ಈಗ ಜಾಸ್ತಿಯಾಗಿದೆ.

ಮೂರನೆಯದಾಗಿ ಪಂಚಾಯತ-ರಾಜ್‌ಬಿಲ್ ಈ ಸದನದ ಮುಂದೆ ಚರ್ಚೆಗೆ ಬಂದಿತ್ತು ಆದರೆ ಅದನ್ನು ಇನ್ನೂ ಜಾರಿಗೆ ಕೊಟ್ಟಿಲ್ಲ. ೩ ಹಂತಗಳಲ್ಲಿ ಆಡಳಿತ ನಡೆಸಬೇಕು ಎನ್ನುವುದೇ ಇದರ ಅರ್ಥ. ಹಳ್ಳಿಯ ಪ್ರದೇಶದ ಆಡಳಿತವನ್ನು ಜನರ ಪ್ರತಿನಿಧಿಗಳ ಕೈಗೆ ಕೊಡುವುದು ಬಹಳ ಮುಖ್ಯವಾದುದು. ಈ ವಿಷಯ ಇಂದು ಮೂಲೆಗೆ ಬಿದ್ದಿದೆ, ಈಗ ತಾಲ್ಲೂಕ್ ಡೆವಲಪ್‌ಮೆಂಟ್ ಕೌನ್ಸಿಲ್ ಎಂದು ಮಾಡಿದ್ದೀರಿ. ಇದರಲ್ಲಿ ಅಧಿಕಾರಿಗಳು ಮತ್ತು ಎಂ.ಎಲ್.ಎ ಗಳಿರುತ್ತಾರೆ. ಇದರಂತೆ ಜಿಲ್ಲಾ ಮಟ್ಟದಲ್ಲಿಯೂ ಜಿಲ್ಲಾ ಮಂಡಲಿಗಳನ್ನು ರಚನೆ ಮಾಡಬೇಕು, ಮತ್ತು ಗ್ರಾಮ ಮಟ್ಟದಲ್ಲಿಯೂ ಮಾಡಬೇಕು. ಈ ಒಂದು ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್.ಡಿ. ಚೌಡಯ್ಯ.—ಗ್ರಾಮಪಂಚಾಯಿತಿಗಳಿಗೇ ಪ್ರತ್ಯೇಕವಾಗಿ ಕಾರ್ಯದರ್ಶಿಗಳನ್ನು ನೇಮಕ ಮಾಡುತ್ತೀರಾ ?

ಎರಡನೆಯದಾಗಿ ಥ್ರೀ ಟೈರ್ ಸಿಸ್ಟಮ್ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಪರಿಷತ್ತನ್ನು ರಚನೆ ಮಾಡಬೇಕೆಂಬ ವಿಷಯ ಮೊದಲಿನಿಂದಲೂ ಯೋಚನೆಯಲ್ಲಿಯೇ ಇದೆ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ? ೧೯೬೩ನೇ ಇಸವಿಯಲ್ಲಿ ಪಂಚಾಯತ್-ರಾಜ್ ಬಿಲ್‌ನ್ನು ರೆವ್ಯೂ ಮಾಡುವುದಕ್ಕಾಗಿ ಶ್ರೀ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಲಾಗಿತ್ತು. ಅದರ ವರದಿ ಏನಾಯಿತೆಂಬುದನ್ನು ತಿಳಿಸಬೇಕು ?

ಮೂರನೆಯದಾಗಿ ಪಂಚಾಯತ ಸಂಸ್ಥೆಗಳು ಮತ್ತು ತಾಲ್ಲೂಕ್ ಬೋರ್ಡುಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಕಾರ್ಯಕ್ರಮ ಏನಿದೆ ?

ಶ್ರೀ ಎಸ್. ಎಸ್. ಅರಕೇರಿ.—ನಮ್ಮ ಬಳ್ಳೊಳ್ಳಿ ಕ್ಷೇತ್ರದಲ್ಲಿ ೮೬ ಹಳ್ಳಿಗಳಿವೆ. ಇವುಗಳ ಪೈಕಿ ೪೫ ಹಳ್ಳಿಗಳ ಜನರಿಗೆ ನೀರನ್ನು ಕುಡಿಯಲು ಸರ್ಕಾರದ ಬಾವಿಗಳಿಲ್ಲ. ಸುಮಾರು ೨೦ ಹಳ್ಳಿಗಳಲ್ಲಿರತಕ್ಕಂಥ ಹರಿಜನರಿಗೆ ನೀರನ್ನು ಕುಡಿಯಲು ಬಾವಿಗಳಿಲ್ಲ. ಇವರು ಖಾಸಗೀ ಜನರ ಬಾವಿಗಳ ಹತ್ತಿರ ಹೋಗಿ ನೀರನ್ನು ಹಾಕಿಸಿಕೊಂಡು ಬರತ್ತಿದ್ದಾರೆ. ಆದಕಾರಣ ಜಾಗ್ರತೆ ಈ ಕಡೆಗೆ ಗಮನ ಹರಿಸಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿಕೊಡುತ್ತೀರಾ ?

ಶ್ರೀಮತಿ ಅನಸೂಯಾ ಗಜಾನನ ಶರ್ಮಾ.—ಮಾನ್ಯ ಮಂತ್ರಿಗಳು ಬಿ.ಡಿ.ಒ. ಕೈಕೆಳಗೆ ೧೭ ಮಂದಿ ಆಫೀಸರ್ಸ್ ಇರುತ್ತಾರೆಂದು ಹೇಳಿದರು. ಫೀಲ್ಡ್ ಆಫೀಸರ್ಸ್ ಎಂದು ಬಿ.ಡಿ.ಒ. ಕೈಕೆಳಗೆ ಇರುತ್ತಾರೆ. ಈ ಎಲ್ಲ ಆಫೀಸರ್ಸ್ ಮಾಡುವ ಕೆಲಸಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಇವರು ಹಳ್ಳಿಗಳಿಗೆ ಹೋದಾಗ ಹಳ್ಳಿಗಳಲ್ಲಿ ಎತ್ತರಕ್ಕೆ ಕೂರುತ್ತಾರೆ. ಹಳ್ಳಿಯ ಜನರು ಇವರು ದೊಡ್ಡ ಅಧಿಕಾರಿಗಳು ಎಂದು ತಿಳಿದುಕೊಂಡು ದೂರದಲ್ಲಿ ಕೆಳಗೆ ನೆಲದ ಮೇಲೆ ಕುಳಿತುಕೊಳ್ಳುತ್ತಾರೆ. ನಂತರ ಈ ಅಧಿಕಾರಿಗಳು ಆ ಜನರಿಗೆ ನೀವು ಹಾಗೆ ಮಾಡಬೇಕು, ಹೀಗೆ ಮಾಡಬೇಕು, ಆ ಕೆಲಸ ಏತಕ್ಕೆ ಮಾಡಲಿಲ್ಲ ಎಂದು ಬೈದು ಬಂದು ಬಿಡುತ್ತಾರೆ. ಸರ್ಕಾರದ ಯೋಜನೆಗಳನ್ನು ಜನರಿಗೆ ವಿವರಿಸಿ ಹೇಳುವ ಬದಲು ಅವರನ್ನು

ಹೆದರಿಸಿ ಬರುತ್ತಾರೆ. ಸರ್ಕಾರದಿಂದ ಪಗಾರ ತೆಗೆದುಕೊಳ್ಳುತ್ತೇವೆ, ಜನತೆಯ ಸೇವೆಗಾಗಿ ತಾವಿರುವುದು ಎಂಬುದನ್ನು ಮರೆತು ಈ ರೀತಿ ವರ್ತಿಸುತ್ತಿದ್ದಾರೆ. ಈಗ ಸರ್ಕಾರದವರು ಈ ಯೋಜನೆಗಳಿಗೆ ಏನು ಹಣ ಖರ್ಚು ಮಾಡುತ್ತಿದ್ದಾರೆ, ಅದರಲ್ಲಿ ಒಂದು ಪೈಸೆಯಷ್ಟು ಕೂಡ ಹಳ್ಳಿಯ ಜನರಿಗೆ ಉಪಯೋಗ ವಾಗುತ್ತಿಲ್ಲವೆಂದು ನನ್ನ ನಜರಿಗೆ ಬಂದಿದೆ. ಈ ಫೀಲ್ಡ್ ಆಫೀಸರ್ಸ್ ಏನಿದ್ದಾರೆ, ಅವರಿಗೆ ತಾವು ಜನರ ಸೇವಕರು ಎಂಬ ಭಾವನೆ ಬರುವಂತೆ ಮಾಡಬೇಕು. ಇವರು ಜನರಿಂದ ದೂರ ಇರುವುದಕ್ಕೆ ಬದಲು ಹತ್ತಿರ ಹೋಗಿ ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ತಿಳಿಸಿದರೆ ಜನರಿಗೆ ಒಳ್ಳೆಯದಾಗುತ್ತದೆ. ಆದ್ದರಿಂದ ಈ ಬಗ್ಗೆ ತಾವು ಯಾವ ರೀತಿಯ ಕಾರ್ಯಕ್ರಮ ಕೈಕೊಳ್ಳುತ್ತೀರಿ ?

SRI N. B SIRDESAI.—The Government must be aware of the fact that on account of improper constitution or re-grouping of village panchayats in border areas, the villagers are experiencing a lot of inconvenience. That is why of late they are complaining to the Government for arranging re-grouping of village panchayats. I want to know whether the Government is going to reconsider this matter and re-arrange grouping of village panchayats before holding elections to the village panchayats in border areas.

ಶ್ರೀ ಬಿ. ಟಿ. ಶಂಕರ್‌ರಾವ್.—ನಾನು ಬೇಡಿಕೆಯ ಮೇಲೆ ಮಾತನಾಡುವಾಗ ಬೋರ್-ವೆಲ್ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಕುಡಿಯುವ ನೀರಿನ ಅನುಕೂಲಕ್ಕಾಗಿ ಹಳ್ಳಿಗಳಲ್ಲಿ ಸೇದುವ ಬಾವಿಗಳನ್ನಾಗಲೀ, ಕೊಳವೆ ಬಾವಿಗಳನ್ನಾಗಲೀ ತೆಗೆಸಿದರೆ ಅದಕ್ಕೆ ಕೇಂದ್ರ ಸರ್ಕಾರ ಹಣ ಕೊಡುತ್ತದೆ. ತಾಲ್ಲೂಕ್ ಬೋರ್ಡಿನವರ ಕೆಲಸ ಎಲ್ಲೆಲ್ಲಿ ಕುಡಿಯುವ ನೀರಿನ ಸೌಕರ್ಯ ಇಲ್ಲ ಎಂದು ತೋರಿಸುವುದು; ನಂತರ ಉಳಿದ ಕೆಲಸವನ್ನು ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನವರು ಮಾಡುತ್ತಾರೆ ಇದಕ್ಕೆ ಮೊದಲು ಭೂಗರ್ಭ ಇಲಾಖೆಯವರು ನೀರು ಎಲ್ಲೆಲ್ಲಿ ಸಿಗುತ್ತದೆ ಎಂಬುದನ್ನು ಸರ್ವೆ ಮಾಡಿ ತೋರಿಸುತ್ತಾರೆ. ಅವರು ತೋರಿಸಿದ ಕಡೆ ಬಾವಿಗಳನ್ನು ತೆಗೆಸಲಾಗುತ್ತದೆ. ಈ ರೀತಿ ಬಾವಿಗಳನ್ನು ತೋಡಿಸಲು ನಿಮ್ಮ ಇಲಾಖೆಯಲ್ಲಿ ಯಾವ ಉಪಕರಣಗಳೂ ಇಲ್ಲದ ಕಾರಣ ನೀವು ಇಂಜಿನಿಯರಿಂಗ್ ಇಲಾಖೆಯನ್ನೇ ಅವಲಂಬಿಸಬೇಕಾಗುತ್ತದೆ. ಅವರಿಗೆ ಸಾಧ್ಯವಾಗದಿದ್ದಾಗ ನೀವು ಪ್ರೈವೇಟ್ ಏಜೆನ್ಸಿ ಕಡೆಗೆ ಹೋಗಬೇಕು ಮತ್ತು ಅವರು ಹೇಳಿದ ದರವನ್ನು ಕೊಟ್ಟು ಬಾವಿ ಕೆಲಸ ಮಾಡಿಸಬೇಕಾಗಿದೆ. ಇದರ ಜೊತೆಗೆ ಬಾವಿ ತೋಡಿಸುವ ವಿಚಾರದಲ್ಲಿ ನಿಮಗೆ ಸೂಪರ್‌ವೈಜರಿ ಪವರ್ ಕೂಡ ಇಲ್ಲ. ಈ ಎಲ್ಲ ಅಧಿಕಾರವನ್ನು ನಿಮ್ಮ ಹತೋಟಿಗೆ ತೆಗೆದುಕೊಂಡು ನಿಮ್ಮ ಇಲಾಖೆಯಲ್ಲಿಯೇ ಒಂದು ಖಾಯಂ ವ್ಯವಸ್ಥೆಯನ್ನು ಏರ್ಪಡಿಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಯು.ಬಿ. ಬೋರ್ಕರ್ (ಸಿರಸಿ).—ನನ್ನ ಕ್ಷೇತ್ರದಲ್ಲಿ ಸಿರಸಿ ಹಾಗೂ ಬನವಟ್ಟಿ ಸರ್ಕಲ್‌ನಲ್ಲಿ ಕುಡಿಯುವ ನೀರಿನ ತೊಂದರೆಯಿದೆಯೆಂದು ಹಿಂದೆ ಪ್ರಸ್ತಾಪ ಎತ್ತಿದ್ದೆ. ಇನ್ನು ಸಿದ್ದಾಪುರ ಕೊಂಡಲಿಯಲ್ಲಿಯೂ ಕುಡಿಯುವ ನೀರಿನ ಅಭಾವ ಇದೆ ಹಾಗೂ ಸಿದ್ದಾಪುರ ಟೌನ್‌ನಲ್ಲಿ ಸಹ ತೊಂದರೆಯಿದೆ. ಆದರೆ ನಾನು ಹಿಂದೆ ಸಹ ಹೇಳಿದ್ದೆ. ಈ ಎಲ್ಲಾ ಬಾವಿಗಳನ್ನು ತೋಡಿಸುವುದಾಗಲಿ ಅಥವಾ ಕೊಳವೆ ಬಾವಿಗಳನ್ನು ತೋಡಿಸುವುದಾಗಲಿ ಯಾವ ಯೋಜನೆಯಿಂದ ಈ ಕುಡಿಯುವ ನೀರಿನ ತೊಂದರೆಯನ್ನು ಎಷ್ಟು ಸಮಯದಲ್ಲಿ ನಿವಾರಣೆ ಮಾಡುತ್ತೀರೆಂದು ಕೇಳುತ್ತೇನೆ.

ಇನ್ನು ಎರಡನೆಯದಾಗಿ ನ್ಯೂಟ್ರೀಷನ್ ಪ್ರೋಗ್ರಾಂನಲ್ಲಿ ಮೀನುಗಾರಿಕೆ, ಕೋಳಿಸಾಕಾಣಿಕೆ ಕುರಿ ಸಾಕಾಣಿಕೆ ಇನ್ನು ಅನೇಕ ವಿಚಾರಗಳನ್ನು ಹೇಳಿದ್ದೀರಿ. ಈ ಸಾಕಾಣಿಕೆಯಿಂದ ಬರುವಂತಹ ಉತ್ಪಾದನೆಯನ್ನು ಮಕ್ಕಳಿಗೆ ಹಾಗೂ ಗರ್ಭಿಣಿ ಸ್ತ್ರೀಯರಿಗೆ ಹಂಚುತ್ತೇವೆಂದು ಹೇಳಿದ್ದೀರಿ. ಈ ಕುರಿ, ಕೋಳಿ ಯಾವರೀತಿ ಮಕ್ಕಳಿಗೆ ಡೈಜೆಸ್ಟ್ ಆಗುತ್ತದೆ ? ಇದನ್ನು ಅರಗಿಸುವ ರೀತಿಯಲ್ಲಿ ಏನಾದರೂ ಯೋಜನೆ ಮಾಡಿದ್ದೀರಾ ? ದಯಮಾಡಿ ನನಗೆ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಮಾನ್ಯ ಸಚಿವರು ಉತ್ತರ ಕೊಡುವಾಗ ಪ್ರತಿ ಜಿಲ್ಲೆಗಳಲ್ಲಿಯೂ ಕೊಳವೆ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ತಾಂತ್ರಿಕ ಸಿಬ್ಬಂದಿಯನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಆ ತಾಂತ್ರಿಕ ಸಿಬ್ಬಂದಿ ಪ್ರತಿ ತಿಂಗಳು ಪ್ರತಿ ತಾಲ್ಲೋಕ್‌ನಲ್ಲಿ ಎಷ್ಟೆಷ್ಟು ಬಾವಿಗಳನ್ನು ರಿಪೇರಿ

ಮಾಡುತ್ತಾರೆಂದು ವರದಿಗಳನ್ನು ತರಿಸುತ್ತಿದ್ದೀರಾ ಅದನ್ನು ಮಾನ್ಯ ಸಚಿವರು ಹೇಳಬೇಕು. ನಾನು ಮಾರ್ಚ್, ಏಪ್ರಿಲ್‌ನಲ್ಲಿ ಕಾಗದ ಬರೆದಿದ್ದೇನೆ. ಈಗಾಗಲೇ ಮೇ ಜೂನ್ ಕಳೆದರೂ ಹಾಗೂ ಮಳೆಗಾಲ ವಾದರೂ ಬಾವಿಗಳಲ್ಲಿ ನೀರು ಬರುವುದಿಲ್ಲ. ಒಂದೂ ಬಾವಿಯನ್ನು ರಿಪೇರಿ ಮಾಡಿಲ್ಲ. ತಾಂತ್ರಿಕ ಸಿಬ್ಬಂದಿ ಇದೆಯೆಂದು ಹೇಳುತ್ತಾರೆ. ಸಿಬ್ಬಂದಿ ಇದ್ದ ಮಾತ್ರಕೆ ಕೆಲಸವಾಗುತ್ತದೆಯೇ ಪ್ರತಿ ತಿಂಗಳು ಎಷ್ಟು ರಿಪೇರಿ ಮಾಡಿದ್ದಾರೆಂದು ವರದಿ ತರಿಸುತ್ತಿದ್ದಾರೆಂದು ತಿಳಿಸಬೇಕು. ಹಾಗೆಯೇ ಕೊಳವೆ ಬಾವಿ ತೆಗೆಯುವಾಗ ತಾಂತ್ರಿಕ ತಜ್ಞರು ಅಂದರೆ ಭೂಗರ್ಭ ಇಲಾಖೆಯವರಿಗೆ ವಹಿಸಿದ್ದೀರಿ ? ಆ ಭೂಗರ್ಭ ಇಲಾಖೆಯವರು ಹಳ್ಳಿಯವರು ಇಂತಹ ಕಡೆ ಬಾವಿ ತೆಗೆಯಿರಿ ಎಂದು ಹೇಳಿದರೆ ಅವರು ಕೇಳುವುದಿಲ್ಲ. ಅವರಿಗೆ ಬೇಕಾದ ಕಡೆ ರಸ್ತೆಗಳ ಮಧ್ಯದಲ್ಲಿ ತೆಗೆಯುತ್ತಿದ್ದಾರೆ. ಅವರು ತೆಗೆದು ಇರುವಂತಹ ಬಾವಿ ಗಳಲ್ಲಿ ನೂರಕ್ಕೆ ೫೦ ಬಾವಿಗಳಲಿ ನೀರು ಬರುತ್ತಿಲ್ಲ. ಫೇಲೇ ಆಗಿವೆ ಆದ್ದರಿಂದ ಅವರು ತಾಂತ್ರಿಕತಜ್ಞರಾದ ಮೇಲೆ ಈ ರೀತಿ ನೀರು ಫೇಲ್ ಆಗುವುದಕ್ಕೆ ಕಾರಣವೇನು ? ಇದಕ್ಕೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮಂತ್ರಿಗಳು ಹೇಳುವುದು ಏನು ಡಬಲ್ ಸ್ಟ್ಯಾಂಡರ್ಡ್ ಎಂದು ಜೂರಿಸ್ಪ್ರುಡೆನ್ಸ್‌ನಲ್ಲಿ ಹೇಳುತ್ತಾರೆ ಆ ರೀತಿಯಾಗಿದೆ. ಆದ್ದರಿಂದ ಹಣವನ್ನು ಕೇಂದ್ರ ಸರ್ಕಾರದವರು ಕೊಡುವುದು ಇವರು ಸೂಪರ್‌ವಿಷನ್ ಮಾಡುವುದು ಇದು ನಮ್ಮ ಕರ್ನಾಟಕದಲ್ಲಿ ಎಷ್ಟು ಲಘುವಾಗಿ ನಡೆಯುತ್ತಿದೆ ಎನ್ನುವುದನ್ನು ನೋಡಬೇಕು. ಏತಕ್ಕೆ ನಿಮಗೆ ಪವರ್ ಕೊಟ್ಟಿಲ್ಲ ? ಇಂತಹ ಪವರ್ ಕೊಡುತ್ತಾರಾ ಇಲ್ಲವೋ ತಿಳಿಸಬೇಕು. ಯಾವಾಗಲೂ ಒಂದೇ ಸ್ಟ್ಯಾಂಡರ್ಡ್ ಇರಬೇಕು ಇಲ್ಲದೆ ಹೋದರೆ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ಇನ್ನು ಡ್ರಿಂಕಿಂಗ್ ವಾಟರ್‌ಗೆ ಅವರು ಹಣ ಕೊಡುತ್ತಾರೆ ತಾವು ಆದಕ್ಕೆ ಟ್ಯಾಕ್ಸ್ ಮಾಡುತ್ತೀರಿ ಆದರೂ ಕೂಡ ಈ ಕುಡಿಯುವ ನೀರಿನ ಅಭಾವ ವನ್ನು ನಿಶ್ಚಿತ ಪ್ರೋಗ್ರಾಂ ಹಾಕಿಕೊಂಡು ಇದನ್ನು ಬಗೆಹರಿಸುತ್ತೀರಾ ಎಂದು ಕೇಳುತ್ತೇನೆ. ಇದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀಮತಿ ರೇಣುಕಾ ರಾಜೇಂದ್ರನ್.—ಬೋರ್‌ವೆಲ್ ಡ್ರಿಂಕಿಂಗ್ ವಾಟರ್‌ಗೆ ಎಲ್ಲಾ ಕಡೆಗಳಲ್ಲೂ ರಿಗ್‌ಗಳನ್ನು ಹಾಕಲಿಕ್ಕೆ ಸಾಧ್ಯವಿರುವುದಿಲ್ಲ. ಕಾರಣವಾದರೂ ಆ ಮೆಷಿನ್ ಹೋಗುವುದಕ್ಕೆ ಎಲ್ಲಾ ಹಳ್ಳಿಗಳಲ್ಲೂ ರಸ್ತೆಗಳು ಚೆನ್ನಾಗಿರುವುದಿಲ್ಲ, ಆದ್ದರಿಂದ ಕೂಡಲೇ ಅಂತಹ ರಸ್ತೆಗಳನ್ನು ರಿಪೇರಿ ಮಾಡಿಸಬೇಕು. ನಮ್ಮ ಚಿಕ್ಕಬಳ್ಳಾಪುರ ಡಿಪಿಎಪಿಯಲ್ಲಿ ಸೇರಿಸಿಲ್ಲ. ಆದ್ದರಿಂದ ದಯಮಾಡಿ ಡಿಪಿ ಎಪಿಯಲ್ಲಿ ಅದನ್ನು ಸೇರಿಸಿ ಫೈನಾನ್ಸಿಯಲ್ ಅಸಿಸ್ಟೆನ್ಸ್ ಬೇಕಾದಷ್ಟು ಸಿಕ್ಕುತ್ತದೆಂದು ಹೇಳುತ್ತೇನೆ. ಇನ್ನು ನಮ್ಮ ಬಾಗೇಪಲ್ಲಿ ತಾಲ್ಲೂಕಿನಲ್ಲಿ ನಾನು ಹಿಂದೆ ಸದಸ್ಯೆಯಾಗಿದ್ದಾಗ ಅನಿಮಲ್ ಹಸ್ಬೆಂಡರಿ ಸ್ಕೀಮಿನಲ್ಲಿ ಸೀಡ್ ಮನಿ ಏನು ಇದೆ, ಅದನ್ನು ಕುರಿ ಕೊಂಡುಕೊಳ್ಳಲಿಕ್ಕೆ, ಹಂದಿ ಕೊಂಡುಕೊಳ್ಳುವುದಕ್ಕೆ ಸುಮಾರು ೭೫ ಪರ್ಸೆಂಟ್ ಸರ್ಕಾರ ಕೊಡುತ್ತದೆ. ಬ್ಯಾಂಕರ್ಸ್ ಕೊಡುವುದು ಉಳಿದ ೨೫ ಪರ್ಸೆಂಟ್. ಕೆಲವು ಸರಿಯಾದ ಕಾಲಕ್ಕೆ ಕೊಡದೆ ಅದನ್ನು ಉಪಯೋಗಿಸಿಕೊಳ್ಳದೆ ಇರುವುದರಿಂದ ಹಣ ಲ್ಯಾಪ್ಸ್ ಆಗುತ್ತಿದೆ. ಇದಕ್ಕೆ ಏನಾದರೂ ಒಂದು ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ. ಇನ್ನು ಟಿಡಿಬಿ ರಸ್ತೆಗಳ ಬಗ್ಗೆ ಮಾತನಾಡುತ್ತಾ ಅವುಗಳು ಯಾವ ದುಸ್ಥಿತಿಯಲ್ಲಿವೆಂದು ಹೇಳಿದೆ. ಈ ರೀತಿ ಮೇಯಿಂಟೆನೆನ್ಸ್ ಬಗ್ಗೆ ಮಾತನಾಡುತ್ತಾ ಅನೇಕ ಸಾರಿ ಹೇಳಿದ್ದೇನೆ. ಇದರ ಬಗ್ಗೆ ಹೆಚ್ಚು ಹಣ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಗ್ಗೆ ೨೮೮ ಹಳ್ಳಿಗಳಲ್ಲಿ ೭೮೦ ಓಪನ್ ವೆಲ್ಸ್‌ಗಳು ಇವೆ. ಇನ್ನು ಉಳಿದ ೨೮೭ ಬೋರ್ ವೆಲ್ ಬಾವಿಗಳನ್ನು ತೆಗೆಸಿದ್ದೇವೆಂದು ಹೇಳಿದ್ದಾರೆ, ನಾನು ಇವುಗಳನ್ನು ಗುಣಿಸಿದರೆ ಒಂದು ಊರಿಗೆ ನಾಲ್ಕು ಬಾವಿಗಳು ಎಂದು ಬರುತ್ತದೆ. ನಾನು ನಿಜವಾಗಿಯೂ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಅನೇಕ ಬಾವಿಗಳು ಉಪಯೋಗಕ್ಕೆ ಬಾರದ ರೀತಿಯಲ್ಲಿವೆ, ಆದ್ದರಿಂದ ಇವುಗಳನ್ನು ಯಾವಾಗ ಸರಿ ಮಾಡಿಸಿಕೊಡುತ್ತಿರೆಂದು ಕೇಳುತ್ತೇನೆ. ಇನ್ನು ತಾಂತ್ರಿಕ ಸಿಬ್ಬಂದಿ ಇದೆ ಎಂದು ಹೇಳುತ್ತಿದ್ದೀರಿ ಅವರು ಏನು ಮಾಡುತ್ತಿದ್ದಾರೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರನೇಕರು ಹೇಳಿದರು ಸೆಂಟ್ ಪರ್ಸೆಂಟ್ ಗ್ರ್ಯಾಂಟ್ ಕೇಂದ್ರ ಸರ್ಕಾರದವರು ಕೊಡುತ್ತಾರೆಂದು ಅದರಲ್ಲಿಯೂ ಮಾನ್ಯ ರಾಮಕೃಷ್ಣರವರು ಹೇಳಿದರು. ಹೋದ ಸಾರಿ ಎಷ್ಟು ದುಡ್ಡು ಕೊಡುವುದಕ್ಕೆ ಒಪ್ಪಿಕೊಂಡಿದ್ದರೋ ಅಷ್ಟನ್ನು ಕೊಡಲಿಲ್ಲ.

ಈ ಸಾರಿ ಯೋಜನೆಯನ್ನು ತಿಳಿಸಿದ ಮೇಲೆ ದುಡ್ಡು ಕೊಡುವುದು. ಅವರು ಶೇಕಡ ೭೫ ಪರ್ಸೆಂಟ್ ಮಾತ್ರ ಕೊಡುತ್ತಾರೆ ಉಳಿದ ೨೫ ಪರ್ಸೆಂಟ್ ಸ್ಟೇಟ್ ಗೌರ್ನಮೆಂಟ್ ಹಾಕಿಕೊಳ್ಳಬೇಕು. ದುಡ್ಡಿನ ಕೊರತೆ ಇದರಲ್ಲಿದೆ. ಇದರಲ್ಲಿ ಸಂಪೂರ್ಣವಾಗಿ ಎಲ್ಲಾ ಕೆಲಸವನ್ನು ಮಾಡಬೇಕಾಗಿದೆ.

ಇನ್ನು ೮ ಪರ್ಸೆಂಟ್ ಗ್ರಾಂಟ್ ಪೂರೈಸುವುದರ ಬಗ್ಗೆ ತಾವು ಸೂಚನೆಯನ್ನು ಕೊಡಬೇಕು. ಈ ೧೮ ಪರ್ಸೆಂಟ್ ಗ್ರಾಂಟ್ ಬಗ್ಗೆ, ಇದನ್ನು ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಬಳಸಿದ್ದಾರೆಯೋ, ಇಲ್ಲದಿದ್ದರೆ ಇದನ್ನು ವಾಪಸ್ ಕೊಡುವುದಕ್ಕೆ ಅವಕಾಶವಿದೆಯೋ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರುಗಳು ಕೇಳಿದ್ದಾರೆ. ಇದನ್ನು ಸರಿಯಾದ ರೀತಿಯಲ್ಲಿ ಬಳಸಬೇಕು ಎಂದು ಗವರ್ನ್‌ಮೆಂಟ್ ಆರ್ಡರ್ ಇದೆ. ಒಂದು ವೇಳೆ ಇದನ್ನು ಸರಿಯಾಗಿ ಬಳಸದೇ ಇದ್ದರೆ, ಮುಂದಿನ ವರ್ಷದ ಬಡ್ಜೆಟ್ ಮಾಡುವಾಗ ಇದು ಹೋದ ವರ್ಷದಲ್ಲಿ ಮಿಕ್ಕ ಬಡ್ಜೆಟ್ಸ್, ಈ ವರ್ಷದಲ್ಲಿ ಬರುವುದನ್ನೂ ಎರಡನ್ನೂ ಸೇರಿಸಬೇಕು. ಸೇರಿಸದಿದ್ದರೆ ಬಡ್ಜೆಟ್ಟನ್ನು ಅಪ್ರೂವ್ ಮಾಡಬಾರದು ಎಂದು ಸ್ಟ್ಯಾಂಡಿಂಗ್ ಆರ್ಡರ್ ಇದೆ. ಕಂಡೂ ಕಂಡೂ ಈ ರೀತಿಯಾಗಿ ತಪ್ಪು ಮಾಡಿದ್ದಾರೆ ಎನ್ನುವ ಅಂಶವನ್ನು ಮಾನ್ಯ ಸದಸ್ಯರುಗಳು ಸರ್ಕಾರದ ಗಮನಕ್ಕೆ ತಂದರೆ, ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ, ಈಗಿರುವ ಕಾರ್ಯಕ್ರಮದ ಪ್ರಕಾರ ಈ ಗ್ರಾಂಟನ್ನು ಹಾಗೆಯೇ ಕೈ ಬಿಡುವುದಕ್ಕೆ ಅವಕಾಶವಿಲ್ಲ.

ವಿಲೇಜ್ ಅಕೌಂಟೆಂಟ್ ಮತ್ತು ಸೆಕ್ರೆಟರಿಯವರನ್ನು ಬೇರೆ ಬೇರೆ ವ್ಯವಸ್ಥಿತವಾಗಿ ಅಪಾಯಿಂಟ್‌ಮೆಂಟ್ ಮಾಡಬೇಕು ಎನ್ನುವ ಸಲಹೆಯನ್ನು ಮಾನ್ಯ ಚೌಡಯ್ಯನವರು ಮಾಡಿದ್ದಾರೆ. ನಾನು ಹೇಳುವುದು ಅವರ ಡ್ಯೂಟೀಸ್ ಬೇರೆ, ಸೆಕ್ರೆಟರಿಯವರ ಡ್ಯೂಟೀಸ್ ಬೇರೆ. ಇದು ಬೇರೆ ಬೇರೆ ಯಾಗಿ ಇರುವುದಿಲ್ಲ. ಮಾನ್ಯ ಸದಸ್ಯರು ಹೇಳುವಂಥ ಸಮಸ್ಯೆ ನನಗೆ ಮನದಟ್ಟಾಗಲಿಲ್ಲ.

ಶ್ರೀ ಎಚ್. ಡಿ. ಚೌಡಯ್ಯ.—ವಿಲೇಜ್ ಅಕೌಂಟೆಂಟರುಗಳು ಪಂಚಾಯತಿಯ ಕೆಲಸವನ್ನು ಮಾಡುವುದಿಲ್ಲ. ಅವರು ತಹಸೀಲ್ದಾರರ ಕೈಕೆಳಗೆ ಇರುತ್ತಾರೆ, ಅವರು ಹೇಳಿದಂಥ ಕೆಲಸಗಳನ್ನೇ ಇವರು ಮಾಡುವುದು. ಆದರೆ ಬಿ ಡಿ ಓ ಗಳು ಹೇಳಿದ್ದನ್ನು ಅವರು ಗಮನಿಸುವುದಿಲ್ಲ. ರೆವಿನ್ಯೂ ಇಲಾಖೆಯ ಕೆಲಸಗಳೇನೋ ನಡೆಯಬಹುದು, ಆದರೆ ಪಂಚಾಯತಿಯ ಕೆಲಸಗಳು ಏನೇನು ನಡೆಯುತ್ತಿಲ್ಲ. ಅದಕ್ಕೋಸ್ಕರ ನಾನು ಪಂಚಾಯತಿಯ ಸೆಕ್ರೆಟರಿಗಳು ಎಂದು ಪ್ರತ್ಯೇಕ ಮಾಡಿ ಎಂದು ಹೇಳುತ್ತಿದ್ದೇನೆ. ಇದರಿಂದ ಆಗುವ ತೊಂದರೆಯಾದರೂ ಏನು ?

ಶ್ರೀ ಕೆ. ಪ್ರಭಾಕರ್.—ಇದನ್ನು ನಾವು ನೇರವಾಗಿ ಮಾಡಲಿಕ್ಕಾಗುವುದಿಲ್ಲ. ಆದರೂ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಉದಾಹರಣೆಯನ್ನು ಕೊಟ್ಟು ಹೇಳಿದರೆ ಮಾನ್ಯ ಸಚಿವರಿಗೆ ಅರ್ಥವಾಗಬಹುದು. ಈಗ ಒಂದು ತಾಲ್ಲೂಕಿನಲ್ಲಿ ೫೦ ಪಂಚಾಯತಿಗಳು ಇರುತ್ತವೆಯೆಂದು ಇಟ್ಟುಕೊಳ್ಳಿ. ೫೦ ಜನ ವಿಲೇಜ್ ಅಕೌಂಟೆಂಟರುಗಳೂ ಇರುತ್ತಾರೆ. ಇದರಲ್ಲಿ ೨೫ ಜನರನ್ನು ವಿಲೇಜ್ ಅಕೌಂಟೆಂಟ್‌ರೆಂದೂ, ಇನ್ನೂ ೨೫ ಜನರನ್ನು ಪಂಚಾಯತಿಯ ಸೆಕ್ರೆಟರಿಯವರೆಂತಲೂ ಬೈಫರ್ಕೇಟ್ ಮಾಡಿದರೆ ತೊಂದರೆಯೇನಾದರೂ ಇದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ವಿಲೇಜ್ ಅಕೌಂಟೆಂಟ್ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪವನ್ನು ಮಾಡಿದ್ದಾರೆ, ಅದಕ್ಕೆ ನಾಳೆ ನಮ್ಮ ರೆವಿನ್ಯೂ ಡಿಪಾರ್ಟ್‌ಮೆಂಟಿನ ಡಿಮ್ಯಾಂಡ್ ಬರುತ್ತದೆ, ಅದನ್ನು, ಮತ್ತು ಇದನ್ನೂ ಸೇರಿಸಿ ಉತ್ತರ ಕೊಡುತ್ತೇವೆ.

ಶ್ರೀ ಕೆ. ಪ್ರಭಾಕರ್.—ಇನ್ನು ಪಂಚಾಯತಿ ರಾಜ್ಯ ಇನ್‌ಸ್ಟಿಟ್ಯೂಷನ್ ಬಗ್ಗೆ ಮೂರು ಟಯರ್ ಸಿಸ್ಟಂ ಇರಬೇಕು ಎಂದು ಕೆಲವರು ಅಭಿಪ್ರಾಯಪಟ್ಟು ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ಕೇಳಿದ್ದಾರೆ. ಅಶೋಕ ಮೆಹ್ತಾ ಕಮಿಟಿಯವರು ದೇಶದಾದ್ಯಂತ ಇದರ ಬಗ್ಗೆ ಸಂಚಾರ ಮಾಡಿ ತಮ್ಮ ವರದಿಯನ್ನು ಕೊಡುವವರು ಇದ್ದಾರೆ. ಅದನ್ನೂ ಸಂಗ್ರಹಣೆ ಮಾಡಿ ನಾವು ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಯೋಚನೆ ಮಾಡುತ್ತೇವೆ. ಈಗ ಇರುವ ರೀತಿಯಲ್ಲಿ, ನಮಗಿರುವ ಅಭಿವೃದ್ಧಿ ಕಾರ್ಯಗಳು ಸಾಕು ಎಂದು ಅನಿಸುತ್ತದೆ. ಅವರು ಇನ್ನೂ ಪ್ರಗತಿಯ ಯೋಜನೆಗಳನ್ನು ಮಾಡಿದ ಮೇಲೆ, ಅವರಿಂದ ರಿಪೋರ್ಟ್ ಬಂದ ಮೇಲೆ, ಈ ಪ್ರಶ್ನೆಯನ್ನೂ ನಾವು ಯೋಚನೆ ಮಾಡುತ್ತೇವೆ,

ಜಿಲ್ಲಾ ಪರಿಷತ್ತು ಎನ್ನುವುದಕ್ಕೆ ಸಂಬಂಧಪಟ್ಟಿದ್ದು, ಮಾನ್ಯ ಕೊಂಡಜ್ಜಿ ಬಸಪ್ಪನವರ ಸಮಿತಿ. ಇದು ಬಹಳ ಹಿಂದೆಯೇ ಬಂದಿದ್ದು. ಇದರಬಗ್ಗೆ ಲೇಟೆಸ್ಟ್, ಇತ್ತೀಚೆಗೆ ಯಾವ ಒಂದು ತೀರ್ಮಾನವಾಗಿದೆ ಎನ ತಕ್ಕದ್ದನ್ನು ನಾವು ವಿಚಾರಣೆ ಮಾಡಿಲ್ಲ. ಆದನ್ನು ವಿಚಾರಣೆ ಮಾಡುತ್ತೇವೆ.

ಶ್ರೀ ಎಚ್. ಡಿ. ಚೌಡಯ್ಯ.—ಸಂಬಂಧಪಟ್ಟ ಮಂತ್ರಿಗಳಾಗಿ ಇದರ ಬಗೆ ವಿಚಾರಣ ಮಾಡಿಲ್ಲ ಎಂದರೆ ಇದು ಬಹಳ ವಿಷಾದ.

ಶ್ರೀ ಕೆ. ಪ್ರಭಾಕರ್.—ಬಹಳ ಹಿಂದೆ, ಇದು ಆಗಿದ್ದು. ಇದನ್ನು ಹಾಗೆಯೇ ಇಟ್ಟಿದ್ದಾರೆ. ಅವರ ವರದಿಯನ್ನು ಯಾವ ರೀತಿಯಾಗಿ ಉಪಯೋಗಿಸಿಕೊಳ್ಳಬೇಕು ಎನ್ನತಕ್ಕದ್ದನ್ನು ಸರ್ಕಾರ ಮನಸ್ಸು ಮಾಡಿಲ್ಲ,

ಶ್ರೀ ಎಸ್. ಆರ್. ಬೊಮ್ಮಾಯಿ. ನಮ್ಮ ಲೈಬ್ರರಿಯಲ್ಲಿ ಇದು ಇದೆಯೋ ಇಲ್ಲವೋ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕು.

ಶ್ರೀ ಕೆ. ಪ್ರಭಾಕರ್.—ಆಮೇಲೆ ಮಾನ್ಯ ಅರಕೇರಿಯವರು ಸುಮಾರು ೭೨ ಗ್ರಾಮಗಳಲ್ಲಿ ನೀರೆ ಇಲ್ಲ ಎನ್ನುವ ಮಾತನ್ನು ಹೇಳಿದರು. ಮಾನ್ಯ ಸದಸ್ಯರು ಯಾವ ಯಾವ ಗ್ರಾಮದಲ್ಲಿ ನೀರು ಇಲ್ಲ ಎನ್ನುವ ಪಟ್ಟಿಯನ್ನು ಕೊಡಲಿ. ನಾವು ಆ ಹಳ್ಳಿಗಳಿಗೆ ನೀರನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

ಫೀಲ್ಡ್ ಆಫೀಸರ್ಸ್ ಎಂದರೆ, ನಾವು ಎಕ್ಸ್‌ಟೆನ್‌ಷನ್ ಆಫೀಸರ್‌ಗೆ ಫೀಲ್ಡ್ ಆಫೀಸರ್ಸ್ ಎಂದು ಕರೆಯುತ್ತೇವೆ.

ಬಾರ್ಡರ್ ಏರಿಯಾಗಳಲ್ಲಿರತಕ್ಕ ಪಂಚಾಯತಿಗಳಿಗೆ ಕೆಲವು ಸಮಸ್ಯೆಗಳು ಇವೆ. ಆದ್ದರಿಂದ ಇವುಗಳನ್ನು ರೀಗ್ರೂಪಿಂಗ್ ಮಾಡುತ್ತೀರಾ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಚುನಾವಣೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ಇದನ್ನು ಕೇಳಿದ ಹಾಗೆ ಕಾಣುತ್ತದೆ. ಇಲ್ಲಿ ಏನು ಸಮಸ್ಯೆ ಇದೆ ಎನ್ನುವುದನ್ನು ತಿಳಿದುಕೊಂಡು ಸೂಕ್ತ ಕಂಡುಬಂದಲ್ಲಿ ಅದನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಬೋರ್‌ವೆಲ್‌ಗಳನ್ನು ತೆಗೆಯಿಸುವ ವಿಚಾರದಲ್ಲಿ, ಜಿಯಾಲಿಸ್ಟ್ ಎನ್ನತಕ್ಕವರು ಬೇರೆ ಡಿಪಾರ್ಟ್‌ಮೆಂಟಿನಲ್ಲಿದ್ದಾರೆ, ಇವರನ್ನು ನಮ್ಮ ಇಂಜಿನಿಯರ್‌ಗಳ ಜೊತೆಯಲ್ಲಿಟ್ಟರೆ ಬೇಗ ಕೆಲಸಗಳು ಆಗುತ್ತವೆ ಎಂದು ಕೆಲವರು ಹೇಳಿದ್ದಾರೆ. ನಮ್ಮದು ಬೃಹದಾಕಾರವಾಗಿ ಬೆಳೆಯುತ್ತಾ ಇರತಕ್ಕ ಇಲಾಖೆ. ನೀರಿನ ಸಮಸ್ಯೆಗಾಗಿ ಪಿ ಎಚ್ ಇ ಇಲಾಖೆ ಇದೆ. ಇದರ ಬಗ್ಗೆ ನಿಜವಾದ ತೊಂದರೆ ಏನು ಇಲ್ಲಿಗೆ ಜಿಯಾಲಜಿಸ್ಟ್ ಬೇಕೆ ಎನ್ನುವುದನ್ನು ನಾವು ಪರ್ಯಾಲೋಚನೆ ಮಾಡುತ್ತೇವೆ.

ಮಾನ್ಯ ಸದಸ್ಯರಾದ ಲಕ್ಷಯ್ಯನವರು ಮಾತನಾಡುತ್ತಾ, ಪ್ರತಿ ತಾಲ್ಲೂಕಿನಲ್ಲಿ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಮೆಕ್ಯಾನಿಕ್ಸ್ ಇದ್ದಾರೆ, ಇವರಿಗೆ ಕಾಗದಗಳನ್ನು ಬರೆದರ, ಉತ್ತರ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಇವರು ಪಿ ಎಚ್ ಇ ಇಲಾಖೆಗೆ ಸೇರಿದವರು. ಮಾನ್ಯ ಸದಸ್ಯರು ಅಸಿಸ್ಟೆಂಟ್ ಇಂಜಿನಿಯರ್‌ಗೋ ಎಕ್ಸಿಕುಟೀವ್ ಇಂಜನಿಯರ್‌ಗೋ ಬರೆದರೆ ಉತ್ತರ ಕೊಡುತ್ತಾರೆ.

ಸಭೆಯು ಮುಂದೆ ಇರತಕ್ಕ ಬೇಡಿಕೆಗಳನ್ನು ಮಾನ್ಯ ಸದಸ್ಯರುಗಳು ಅವಿರೋಧವಾಗಿ ಪಾಸ್ ಮಾಡಿಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. SPEAKER.—The question is :

"That sums not exceeding the sums shown in the list of Demands for Grants inclusive of the sums granted on account be granted to Government to defray the charges which will come in course of payment during the financial year ending 31st Day of March 1979 in respect of Demand Nos. 55, 56 and 57."

The motion was adopted.